ವಿಶ್ವವಾಣಿ
ವಿಶ್ವಾಸವೇ ವಿಶ್ವ

ಗಿಲ್ ಮನಮೋಹಕ ದ್ವಿಶತಕ

ಇಂಗ್ಲೆಂಡ್ ವಿರುದ್ಧದ ಸರಣಿಯ ಎರಡನೇ ಟೆಸ್ಟ್‌ನ ಮೊದಲ ದಿನ ಶತಕ ಬಾರಿಸಿ ತಂಡವನ್ನು ಆಧರಿಸಿದ್ದ ನಾಯಕ ಶುಭ್‌ಮನ್ ಗಿಲ್ ಎರಡನೇ ದಿನ ಅಮೋಘ ದ್ವಿಶತಕ (269) ಬಾರಿಸಿದ್ದು, ಭಾರತ 587 ರನ್‌ಗಳ ಬೃಹತ್ ಮೊತ್ತ ದಾಖಲಿಸಿದೆ. ಭಾರತ ತಂಡದ ನಾಯಕನಾಗಿ ಇಂಗ್ಲೆಂಡ್ ವಿರುದ್ಧ ಇಂಗ್ಲೆಂಡ್ ನೆಲದಲ್ಲಿ ಅತಿ ಹೆಚ್ಚು ವೈಯಕ್ತಿಕ ಸ್ಕೋರ್ ಗಳಿಸಿದ ಹೆಗ್ಗಳಿಕೆಯನ್ನು ಗಿಲ್ ತಮ್ಮದಾಗಿಸಿಕೊಂಡಿದ್ದಾರೆ.ಇಂಗ್ಲೆಂಡ್ 77 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದೆ.

ಸೊಂಪಾದ ಪುಟಗಳು

ಮಂಗಕ್ಕೇ ಐವತ್ತು ಲಕ್ಷವಾದರೆ- ಮನುಷ್ಯನಿಗೆಷ್ಟು?

ಶಿಶಿರಕಾಲ
ಶಿಶಿರ್ ಹೆಗಡೆ 6



ಸದಾ ಓಡುತ್ತಿರುವ ಇದನ್ನು ಕಾಪಾಡಿಕೊಳ್ಳಿ!

ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ



ಬೇರೆಯವರಿಗೆ ಬಗ್ಗೆ ಹೆಚ್ಚು ಯೋಚಿಸಿ ಫಲವಿಲ್ಲ. ಯೋಚಿಸುವುದಾದರೆ ನಿಮ್ಮ ಬಗ್ಗೆಯೇ ಯೋಚಿಸಿ. ಯಾಕೆಂದರೆ ಬೇರೆಯವರು ನಿಮ್ಮ ಬಗ್ಗೆ ಯೋಚಿಸುವುದಿಲ್ಲ. ಇದು ಸ್ವಾರ್ಥ ಎಂದು ಭಾವಿಸಬೇಕಿಲ್ಲ.

ವಕ್ರತುಂಡೋಕ್ತಿ

ಜನ ಜಾಹೀರಾತುಗಳನ್ನು ಓದುವುದಿಲ್ಲ. ಅವರಿಗೆ ಯಾವುದು ಇಷ್ಟವೋ ಅದನ್ನೇ ಓದುತ್ತಾರೆ. ಕೆಲವೊಮ್ಮೆ ಅದೇ ಜಾಹೀರಾತಾಗಿರುತ್ತದೆ.

ಜು. 21ರಿಂದ ಸಂಸತ್ ಅಧಿವೇಶನ ಆರಂಭ

ದೆಹಲಿ: ಸಂಸತ್ತಿನ ಮಳೆಗಾಲದ ಅಧಿವೇಶನ ಜುಲೈ 21 ರಂದು ಪ್ರಾರಂಭವಾಗಿ ಆಗಸ್ಟ್ 21 ರವರೆಗೆ ನಡೆಯಲಿರುವ ನಡೆಯಲಿದೆ. ಆಪರೇಷನ್ ಸಿಂದೂರ್ ಕಾರ್ಯಾಚರಣೆಯ ಬಳಿಕ ನಡೆಯುತ್ತಿರುವ ಮೊದಲ ಬಾರಿಗೆ ಸಂಸತ್ ಅಧಿವೇಶನ ಇದಾಗಿದೆ. ಈ ಹಿಂದಿನ ಕಲಾಪ ಪಟ್ಟಿ ಪ್ರಕಾರ ಮಳೆಗಾಲದ ಸಂಸತ್ ಅಧಿವೇಶನವು ಆಗಸ್ಟ್ 12 ರಂದು ಕೊನೆಗೊಳ್ಳಬೇಕಿತ್ತು. ಆದರೆ ಈ ಬಾರಿ ಅದನ್ನು ಒಂದು ವಾರ ವಿಸ್ತರಿಸಲಾಗಿದೆ.

ಶಾಸಕರಿಂದ ವರದಿ ಪಡೆದ ಬೆನ್ನಲ್ಲೇ ಜಿಲ್ಲಾಧ್ಯಕ್ಷರ ಬದಲಾವಣೆಗೆ ನಿರ್ಧಾರ

ಕೈಗೆ ಮೇಜರ್ ಸರ್ಜರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್ ಶಾಸಕರೊಂದಿಗೆ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮ್ಯಾರಥಾನ್ ಸಭೆಯ ಬಳಿಕ, ಪಕ್ಷದ ಸಂಘಟನೆಗೆ ತೀರ್ಮಾನಿಸಿರುವ ಪಕ್ಷ ಇದೀಗ, ಜಿಲ್ಲಾಧ್ಯಕ್ಷರ ಬದಲಾವಣೆಯ ಮೂಲಕ ಸಂಘಟನೆಗೆ ಮೇಜರ್ ಸರ್ಜರಿಗೆ ಮುಂದಾಗಿದೆ.

ಮೊದಲ ಹಂತದಲ್ಲಿ ಹಳೇ ಮೈಸೂರು ಭಾಗದ ಶಾಸಕರೊಂದಿಗೆ ಸಭೆ ನಡೆಸಿದ ಸುರ್ಜೇವಾಲ ಅವರ ಬಳಿಕ, ಹಲವು ಶಾಸಕರು ಸಚಿವರ ಅಸಹಕಾರದ ಜತೆಜತೆಗೆ ಜಿಲ್ಲಾಧ್ಯಕ್ಷರು ಸಂಘಟನೆಗೆ ಒತ್ತು ನೀಡುತ್ತಿಲ್ಲ ಎನ್ನುವ ಆರೋಪವನ್ನು ಮಾಡಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿರುವ ಸುರ್ಜೇವಾಲ, ಇದೀಗ ಜಿಲ್ಲಾಧ್ಯಕ್ಷರ ಬದಲಾವಣೆಯ ಮೂಲಕ ಸಂಘಟನೆಯಲ್ಲಿ ಹೊಸ 'ಚೈತನ್ಯ' ತರುವ ನಿಟ್ಟಿನಲ್ಲಿ ಮೇಜರ್ ಸರ್ಜರಿ ನಡೆಸಲು ತೀರ್ಮಾನಿಸಿದ್ದಾರೆ.

ಆದ್ದರಿಂದ ಇದೀಗ 21 ಜಿಲ್ಲೆಗಳ ಕಾಂಗ್ರೆಸ್ ಜಿಲ್ಲಾಧ್ಯಕ್ಷರನ್ನು ಬದಲಾಯಿಸಲು ತೀರ್ಮಾನಿಸಲಾಗಿದ್ದು, ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಗಾಗಿ ವೀಕ್ಷಕರನ್ನು ನೇಮಿಸಲಾಗಿದೆ. ವೀಕ್ಷಕರು, ಜಿಲ್ಲಾ ಮಟ್ಟದಲ್ಲಿ ಅಧ್ಯಕ್ಷ ಆಕಾಂಕ್ಷಿಗಳ ನೇಮಕಕ್ಕೆ ಸಂಬಂಧಿಸಿದ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಗಿದೆ. ಈ ವೀಕ್ಷಕರು ಸಲ್ಲಿಸುವ ವರದಿಯ ಆಧಾರದಲ್ಲಿ ಜಿಲ್ಲಾಧ್ಯಕ್ಷರನ್ನು ನೇಮಿಸಲು ತೀರ್ಮಾನಿಸಲಾಗಿದೆ.

ವೀಕ್ಷಕರಿಗೆ ನೀಡಿರುವ ಸೂಚನೆಗಳೇನು?

ವೀಕ್ಷಕರು ಶಿಫಾರಸು ಮಾಡುವ ಮಾಡುವ ವ್ಯಕ್ತಿಯು ಜಿಲ್ಲಾ ಮಟ್ಟದಲ್ಲಿ ಸಕ್ರಿಯವಾಗಿ ಪಕ್ಷದಲ್ಲಿ ಗುರುತಿಸಿಕೊಂಡಿರಬೇಕು ಹಾಗೂ ಸಂಘಟನಾ ಸಾಮರ್ಥ್ಯ, ಪಕ್ಷದ ಹಿರಿತನ, ಪ್ರಾಮಾಣಿಕತೆ, ಪಕ್ಷ ನಿಷ್ಠೆ ಇವುಗಳನ್ನು ಮಾನದಂಡವಾಗಿ ಪರಿಗಣಿಸಿ, ಅಂತಹ ವ್ಯಕ್ತಿಗಳ ಹೆಸರುಗಳನ್ನು ಆದ್ಯತೆಯ ಮೇರೆಗೆ ಎರಡು ಅಥವಾ ಮೂರು ಹೆಸರುಗಳನ್ನು ಮಾನ್ಯ ಕೆಪಿಸಿಸಿ ಅಧ್ಯಕ್ಷರಿಗೆ ಮುಚ್ಚಿದ ಲಕೋಟೆಯಲ್ಲಿ ಗೌಪ್ಯತೆಯೊಂದಿಗೆ ಸಲ್ಲಿಸುವುದು ಎಂದು ಹೇಳಲಾಗಿದೆ.

ಸಚಿವರಿಗೂ ಎಚ್ಚರಿಕೆ ನೀಡಿದ್ದ ಸುರ್ಜೇವಾಲ

ಇನ್ನು ಮೂರು ದಿನಗಳ ಕಾಲ ನಡೆದ ಸಭೆಯಲ್ಲಿ ಹಲವು ಶಾಸಕರು ಸಚಿವರ ವಿರುದ್ಧ ಆರೋಪಿಸಿರುವುದರಿಂದ ಈಗಾಗಲೇ ಸುರ್ಜೇವಾಲ ಅವರು ಸಚಿವರಿಗೆ ಸಿಎಂ ಹಾಗೂ ಡಿಸಿಎಂ ಮೂಲಕ ಎಚ್ಚರಿಕೆ ನೀಡಿದ್ದಾರೆ. ಮುಂದಿನ ದಿನದಲ್ಲಿ ಉಸ್ತುವಾರಿ ಸಚಿವರು, ಜಿಲ್ಲಾಧ್ಯಕ್ಷರೊಂದಿಗೆ ಶಾಸಕರ ಸಮಸ್ಯೆ ಬಗೆಹರಿಸುವ ಜತೆಜತೆಗೆ ಪಕ್ಷ ಸಂಘಟನೆಗೂ ಒತ್ತು ನೀಡುವಂತೆ ಸೂಚನೆ ಕೊಡಿಸಿದ್ದರು.

ಯಾವೆಲ್ಲ ಜಿಲ್ಲೆಗಳಿಗೆ ವೀಕ್ಷಕರ ನೇಮಕ?

ಬಾಗಲಕೋಟೆ, ಬೆಳಗಾವಿ ಗ್ರಾಮೀಣ, ನಗರ, ಚಿಕ್ಕೋಡಿ, ಬಳ್ಳಾರಿ ಗ್ರಾಮೀಣ, ಬೀದರ್, ಬಿಜಾಪುರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಕ್ಷಿಣ ಕನ್ನಡ,ಉಡುಪಿ, ದಾವಣಗೆರೆ, ಹುಬ್ಬಳ್ಳಿ ನಗರ, ಧಾರವಾಡ ಗ್ರಾಮೀಣ, ಹಾಸನ, ಗದಗ, ಕಲಬುರಗಿ, ಕೋಲಾರ, ಮಂಡ್ಯ, ಮೈಸೂರು ನಗರ, ಗ್ರಾಮಾಂತರ, ಬೆಂಗಳೂರು ದಕ್ಷಿಣ, ತುಮಕೂರು.

ಪ್ರಧಾನಿ ಮೋದಿಗೆ ಘಾನಾ ರಾಷ್ಟ್ರೀಯ ಗೌರವ ಪ್ರದಾನ

ದೆಹಲಿ: ಪಂಚ ದೇಶ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ, ಮೊದಲ ಹೆಜ್ಜೆಯಲ್ಲಿ ಆಫ್ರಿಕಾ ಖಂಡದ ಘಾನಾ ದೇಶಕ್ಕೆ ಭೇಟಿ ನೀಡಿದ್ದಾರೆ. ಅವರಿಗೆ ಘಾನಾ ರಾಷ್ಟ್ರೀಯ ಗೌರವ 'ಆಫೀಸರ್ ಆಫ್ ದಿ ಆರ್ಡರ್ ಆಫ್ ದಿ ಸ್ಟಾರ್' ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

5 ದೇಶಗಳ ಪ್ರವಾಸದಲ್ಲಿರುವ ಪ್ರಧಾನಿ ಮೋದಿ ಮೊದಲು ಘಾನಾ ದೇಶಕ್ಕೆ ಭೇಟಿ ನೀಡಿ ಗೌರವ ಸ್ವೀಕರಿಸಿದ್ದಾರೆ. 30 ವರ್ಷಗಳಲ್ಲಿ ಘಾನಾಕ್ಕೆ ಭಾರತೀಯ ಪ್ರಧಾನಿಯ ಮೊದಲ ಭೇಟಿ ಇದಾಗಿದೆ. ಪ್ರಶಸ್ತಿ ಸ್ವೀಕರಿಸಿದ ಮೋದಿ, 'ಈ ಗೌರವ 140 ಕೋಟಿ ಭಾರತೀಯರ ಸಾಧನೆ. ಅವರ ಪರವಾಗಿ ಸ್ವೀಕರಿಸುತ್ತಿದ್ದೇನೆ. ಪ್ರಶಸ್ತಿ ಯನ್ನು ರಾಷ್ಟ್ರದ ಯುವಜನತೆಗೆ ಅರ್ಪಿಸುವೆ. ಇದು ಭಾರತದ ಶ್ರೀಮಂತ ಪರಂಪರೆಯನ್ನು ಎತ್ತಿತೋರಿಸುತ್ತದೆ. ಪ್ರಶಸ್ತಿ ಭಾರತ-ಘಾನಾ ಸ್ನೇಹ ಇನ್ನಷ್ಟು ಗಟ್ಟಿಯಾಗಿಸುತ್ತದೆ, ದ್ವಿಪಕ್ಷೀಯ ಸಂಬಂಧಗಳಿಗೆ ಒತ್ತು ನೀಡುತ್ತದೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಎಮ್ಮೆಲ್ಸಿ ರವಿಕುಮಾರ್ ವಿರುದ್ಧ ಕೇಸ್

ಬೆಂಗಳೂರು: ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಬಿಜೆಪಿ ವಿಧಾನಪರಿಷತ್ ಸದಸ್ಯ ರವಿಕುಮಾರ್ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಲೈಂಗಿಕ ಕಿರುಕುಳ ಮತ್ತು ಬೆದರಿಕೆ ಪ್ರಕರಣ ದಾಖಲಾಗಿದೆ. ನಾಗರತ್ನ ಎಂಬವರು ನೀಡಿದ ದೂರಿನ ಹಿನ್ನೆಲೆಯಲ್ಲಿ ಬಿಎನ್‌ಎಸ್ ಸೆಕ್ಷನ್ 351(3) (ಅನೈತಿಕತೆಯ ಆರೋಪ), 75(3) (ಅಶ್ಲೀಲ ಹೇಳಿಕೆ), 79(ಮಹಿಳೆಯ ಮಾನಕ್ಕೆ ಕುಂದು ತರುವ ಪದ ಪ್ರಯೋಗ) ಅಡಿ ಪ್ರಕರಣ ದಾಖಲಾಗಿದೆ. ಅರಣ್ಯ ಭೂಮಿ ಒತ್ತುವರಿ ತೆರವು ವಿರೋಧಿಸಿ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದ ವೇಳೆ ರವಿಕುಮಾರ್ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂದು ದೂರಲಾಗಿದೆ.

ಇನ್ನೂ ಒಂದು ವಾರ ರಾಜ್ಯವ್ಯಾಪಿ ಮಳೆ ಮುನ್ಸೂಚನೆ

ಮಲ್ನಾಡು, ಕರಾವಳಿ ಮಳೆಗೆ ತತ್ತರ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಮಳೆಯ ಅಬ್ಬರ ಮುಂದುವರಿದಿದ್ದು ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಗುರುವಾರ ಭಾರೀ ಮಳೆಯಾಗಿದ್ದು, ನದಿಗಳು ಉಕ್ಕೇರಿ ಹರಿಯುತ್ತಿವೆ. ಮಳೆ ಹಿನ್ನೆಲೆಯಲ್ಲಿ ಬುಧವಾರ ಕೊಡಗು ಜಿಲ್ಲೆಯಾದ್ಯಂತ, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರಕನ್ನಡ ಮತ್ತು ದಕ್ಷಿಣ ಕನ್ನಡದ ಕೆಲವು ತಾಲ್ಲೂಕು ಗಳಲ್ಲಿ ಶಾಲಾ ಕಾಲೇಜು ಗಳಿಗೆ ರಜೆ ಘೋಷಿಸಲಾಗಿತ್ತು. ಗುರುವಾರವೂ ಕೆಲವು ಜಿಲ್ಲೆಗಳಲ್ಲಿ ರಜೆ ಸಾರಲಾಗಿದೆ. ಇನ್ನೂ ಒಂದು ವಾರ ರಾಜ್ಯವ್ಯಾಪಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಉಡುಪಿ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಭಾರೀ ಮಳೆ ಸೂಚನೆ ನೀಡಲಾಗಿದೆ.



ಕೊಡಸಳ್ಳಿ ಡ್ಯಾಂ ಬಳಿ ಭೂ ಕುಸಿತ: ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲೂಕಿನ ಕದ್ರಾ ಬಳಿಯ ಬಾಳೆ ಮನೆ ಗ್ರಾಮದ ಬಳಿ ದೊಡ್ಡ ಪ್ರಮಾಣದ ಭೂ ಕುಸಿತವಾಗಿದ್ದು, ಕದ್ರಾ-ಕೊಡಸಳ್ಳಿ ಸಂಪರ್ಕ ರಸ್ತೆ ಕಡಿತವಾಗಿದೆ.

ಕದ್ರಾದಿಂದ ಕೊಡಸಳ್ಳಿ ಡ್ಯಾಮ್ ಸಂಪರ್ಕಿಸುವ ರಸ್ತೆ ಭೂಕುಸಿತವಾದ್ದರಿಂದ ಕೊಡಸಳ್ಳಿ ಜಲ ವಿದ್ಯುದಾಗಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಪಿಸಿ ಸಿಬ್ಬಂದಿಗೆ ತೆರಳಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ಅದೃಷ್ಟವಶಾತ್ ರಸ್ತೆಯಲ್ಲಿ ಯಾವ ಸಂಚಾರವೂ ಇಲ್ಲದ ಸಂದರ್ಭದಲ್ಲಿ ಗುಡ್ಡ ಕುಸಿದಿದ್ದು, ದೊಡ್ಡ ಅನಾಹುತ ತಪ್ಪಿದೆ.

→ 4

ಲಿಂಗಾಯಿತ ಜಂಗಮ, ಬೇಡ ಜಂಗಮ ಬೇರೆ: ಹೈ ತೀರ್ಪು

ಕಲಬುರ್ಗಿ: ವೀರಶೈವ ಲಿಂಗಾಯಿತರಲ್ಲಿನ ಜಂಗಮರೇ ಬೇರೆ, ಬುಡ್ಗ ಅಥವಾ ಬೇಡ ಜಂಗಮರೇ ಬೇರೆ ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಕಲಬುರಗಿ ಪೀಠದಲ್ಲಿ ಸರಕಾರ ಸಲ್ಲಿಸಿದ್ದ ಮೇಲ್ಮನವಿ ಯನ್ನು ಮಾನ್ಯ ಮಾಡಿರುವ ನ್ಯಾಯ ಮೂರ್ತಿ ಸುನೀಲ್ ದತ್ ಯಾದವ್ ಹಾಗೂ ನ್ಯಾಯಮೂರ್ತಿ ರಾಮಚಂದ್ರ ಡಿ. ಹುದ್ದಾರ್ ಅವರ ವಿಭಾಗೀಯ ಪೀಠ ಈ ಮಹತ್ವದ ಆದೇಶ ನೀಡಿದೆ. ಈ ಮೂಲಕ ಲಿಂಗಾಯಿತರಲ್ಲಿನ ಜಂಗಮರು ತಾವು ಬೇಡ ಅಥವಾ ಬುಡ್ಗ ಜಂಗಮರೆಂದು ಹಕ್ಕು ಪ್ರತಿಪಾದಿಸಿಕೊಂಡು ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದು ಮೀಸಲು ದುರ್ಬಳಕೆ ಮಾಡಿಕೊಳ್ಳುವುದಕ್ಕೆ ಹೈಕೋರ್ಟ್ ಪೂರ್ಣ ವಿರಾಮ ಹಾಕಿದೆ.

ಲಿಂಗಾಯಿತರಲ್ಲಿನ ಜಂಗಮರು ಸಮಾಜದ ಉನ್ನತ ವರ್ಗಕ್ಕೆ ಸೇರಿದವರೆಂದು ಹೇಳಿರುವ ಕೋರ್ಟ್, ಇತಿಹಾಸ ತಜ್ಞ ಬಿ.ಎಲ್. ರೈಸ್ ಮತ್ತು ಮಾನವಶಾಸ್ತ್ರಜ್ಞರ ದಾಖಲೆಗಳನ್ನು ಉಲ್ಲೇಖಿಸಿ ವೀರಶೈವರಲ್ಲಿನ ಜಂಗಮ ವರ್ಗದ ವೃತ್ತಾಂತ, ಬೇಡ ಮತ್ತು ಬುಡ್ಗ ಜಂಗಮರ ಇತಿಹಾಸವನ್ನು ತೀರ್ಪಿನಲ್ಲಿ ಪ್ರಸ್ತಾಪಿಸಿದೆ.

ಸಿಎಂ ಸಿದ್ದರಾಮಯ್ಯ ಗುರುವಾರ ಕಾವೇರಿ ನಿವಾಸದಲ್ಲಿ ತಮ್ಮನ್ನು ಭೇಟಿ ಮಾಡಿದ ಅವಳಿ ಒಲಿಂಪಿಕ್ಸ್ ಪದಕ ವಿಜೇತ, ವಿಶ್ವದ ನಂಬರ್ ಒನ್ ಜಾವೆಲಿನ್‌ಪಟು ನೀರಜ್ ಚೋಪ್ರಾ ಅವರನ್ನು ಹಾರ ಹಾಕಿ, ಶಾಲು ಹೊದಿಸಿ ಸನ್ಮಾನಿಸಿದರು. ಜುಲೈ 5ರಂದು ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ನೀರಜ್ ಚೋಪ್ರಾ ಕ್ಲಾಸಿಕ್ ಜಾವೆಲಿನ್ ಸ್ಪರ್ಧೆಯಲ್ಲಿ ಚೋಪ್ರಾ ಸಹಿತ ಅಂತಾರಾಷ್ಟ್ರೀಯ ಜಾವೆಲಿನ್ ಪಟುಗಳು ಭಾಗವಹಿಸಲಿದ್ದಾರೆ.

ನಿಮ್ಮ ಆಸ್ತಿ ನಮ್ಮ ಗ್ಯಾರಂಟಿ
ಇ-ಖಾತಾ ಪಡೆಯಿರಿ ನಿಮ್ಮ ಆಸ್ತಿಯನ್ನು ರಕ್ಷಿಸಿಕೊಳ್ಳಿ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ವಿಶೇಷ ಇ-ಖಾತಾ ಆಂದೋಲನ
2025ರ ಜುಲೈ 1 ರಿಂದ 31 ರವರೆಗೆ
ಬೆಂಗಳೂರಿನಲ್ಲಿ ನಡೆಯುವ ಇ-ಖಾತಾ ಅಭಿಯಾನದಲ್ಲಿ ಪಾಲ್ಗೊಳ್ಳಿ!!

ಜನಸೇವಕರಿಂದ ಸೇವೆ ಪಡೆಯಲು ಕರೆ ಮಾಡಿ
080 - 4920 3888
ಅಥವಾ
https://janasevaka.karnataka.gov.in

ಜನಸೇವಕ

ಮನೆಯಲ್ಲೇ ಕುಳಿತು ಆನ್ ಲೈನ್ ಮೂಲಕ ಅಂತಿಮ ಇ-ಖಾತಾವನ್ನು https://bbmpeasthi.karnataka.gov.in ನಿಂದಲೂ ಪಡೆಯಬಹುದು.

ಇವುಗಳೊಂದಿಗೆ ಸಿದ್ಧರಾಗಿರಿ:
- ಮಾಲೀಕರ ಆಧಾರ್
- ಆಸ್ತಿ ತೆರಿಗೆ ಎಸ್.ಎ.ಎಸ್. ಅರ್ಜಿ ಸಂಖ್ಯೆ
- ಸ್ವತ್ತಿನ ಕ್ರಯ/ನೋಂದಾಯಿತ ಪತ್ರ ಸಂಖ್ಯೆ (ಕಾವೇರಿ ತಂತ್ರಾಂಶದಿಂದ ವಿದ್ಯುನ್ಮಾನವಾಗಿ ಪಡೆದುಕೊಳ್ಳುತ್ತದೆ)
- ಬೆಸ್ಕಾಂ ಖಾತೆ ಸಂಖ್ಯೆ (ಖಾಲಿ ನಿವೇಶನಗಳಿಗೆ ಅನ್ವಯವಿಲ್ಲ)
- ಸ್ವತ್ತಿನ ಛಾಯಾಚಿತ್ರ

ಇ-ಖಾತಾ ಸಂಬಂಧಿತ ವೀಡಿಯೋವನ್ನು ಕೆಳಗಿನ ಲಿಂಕ್ ನಿಂದ ವೀಕ್ಷಿಸಬಹುದು.
https://tinyurl.com/36suwvn2



ಜನಸೇವಕನಿಗೆ ಪಾವತಿಸಬೇಕಾದ ಮೊತ್ತ
ಇ-ಖಾತಾ ಅರ್ಜಿಗೆ : ರೂ. 45/-
ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಲು (ಪ್ರತಿ ಪುಟಕ್ಕೆ) : ರೂ. 5/-
ನಿಮ್ಮ ಮನೆ ಬಾಗಿಲಿಗೆ ಜನಸೇವಕನ ಸೇವಾ ಶುಲ್ಕ : ರೂ. 115/-

ಸಹಕಾರ ನಗರದಲ್ಲಿ ಕುಟುಂಬವೊಂದಕ್ಕೆ ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಅವರು ಹಾಗೂ ಮಾನ್ಯ ಕಂದಾಯ ಸಚಿವರಾದ ಶ್ರೀ ಕೃಷ್ಣ ಬೈರೇಗೌಡ ಅವರು ಇ-ಖಾತಾ ವಿತರಿಸುತ್ತಿರುವುದು.

ಯಾವುದೇ ಬಿಬಿಎಂಪಿ ಕಚೇರಿಗೆ ಭೇಟಿ ನೀಡಬೇಡಿ ಅಥವಾ ಕರೆ ಮಾಡಬೇಡಿ.
ಇ-ಖಾತಾ ಸಹಾಯವಾಣಿ ಸಂಖ್ಯೆ: 94806 83695

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

IN THE COURT OF THE 19th ADDL CHIEF JUDICIAL MAGISTRATE AT BANGALORE
C.MISC. No. 1929/2025

BETWEEN: 3. SRL G.NARASIMHAIAH
S/o late Ganganarasappa @ Gangappa, Aged about 62 years, Residing at No.273, Dr. Rajakumar Sangha Road, Geddalahalli, Bengaluru North, Bengaluru-560094.
4. SRI.SRINIVAS S/o late Ganganarasappa @ Gangappa, Aged about 61 years, Residing at No.53, 3rd cross, Rajeev Gandhi Road, R.G.colony, Bengaluru North, Bengaluru-560051
...Petitioners

AND: THE COMMISSIONER, & Chief Registrar of Birth and Death, Bruhath Bangalore Mahanagara palike, Bangalore ...Respondent

PUBLIC NOTIFICATION

Whereas the petitioner above named has presented the above petition to this Hon'ble court under section 13(3) of Registration of Birth and Death's Act 1969 for order to direct the Respondent authority to get enter the date of death of petitioners father by name **Sri. Ganganarasappa @ Gangappa son of late Hotte Narasayya was died on 30-05-2005 at No.273, Dr.Rajakumar Sangha Road, Geddalahalli, Bangalore North, Bangalore-560094,** the Hou'ble court fixed the date on **05/08/2025** for hearing of the petition and that if any person desire to oppose the said petition or claim or interest shall appear before the court in person or by pleader duly instructed **at 11am on-05/08/2025**. Failing which said application will be heard and determined as exparte

Given my hand and seal of the court on 3rd day of July 2025.

By the Order of the Court, Sr. Sheristedar, 19th Addl Chief Judicial Magistrate, Bangalore

Advocate for petitioner,
C.RAJANNA, Advocate,
No.115, 1st Floor, Amar Towers, 1st cross, Gandhinagar, Bangalore-560009

IN THE COURT OF THE 19th ADDL CHIEF JUDICIAL MAGISTRATE, AT BANGALORE
C.MISC.No. 1928/2025

BETWEEN: 1. SRI.G.NARASIMHAJAH
S/o late Ganganarasappa@ Gangappa, Aged about 62 years, Residing at No.273, Dr.Rajakumar Sangha Road, Geddalahalli, Bengaluru North, Bengaluru-560094.
2 SRI. SRINIVAS S/o late Ganganarasappa@ Gangappa, Aged about 61 years, Residing at No.53, 3rd cross, Rajeev Gandhi Road, R.G.colony. Bengaluru North, Bengaluru-560051
...Petitioners

AND: THE COMMISSIONER, & Chief Registrar of Birth and Death, Bruhath Bangalore Mahanagara palike, Bangalore ..Respondent

PUBLIC NOTIFICATION

Whereas the petitioner above named has presented the above petition to this Hon'ble court under section 13(3) of Registration of Birth and Death's Act 1969 for order to direct the Respondent authority to get enter the date of death of petitioners mother by name **Smt. Narasamma wife of late Ganganarasappa @ Gangappa was died on 8-06-2006 at No.273, Dr. Rajakumar Sangha Road, Geddalahalli, Bangalore North, Bangalore-560094,** the Hon'ble court fixed the date **on 05.08.2025** for hearing of the petition and that if any person desire to oppose the said petition or claim or interest shall appear before the court in person or by pleader duly instructed at **11am on-05/08/2025** Falling which said application will be heard and determined as exparte.

Given my hand and seal of the court on **3rd day of july 2025**

By the Order of the Court, Sr. Sheristedar, 19th Addl Chief Judicial Magistrate, Bangalore

Advocate for petitioner,
C. RAJANNA, Advocate,
No.115, 1st Floor, Amar Towers, 1st cross, Gandhinagar, Bangalore-560009.

ಮಾನ್ಯ ಗೌರವಾನ್ವಿತ ಪ್ರಧಾನ ಕಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 37/2025

ಅರ್ಜಿದಾರರು: 1) ಶ್ರೀಮತಿ ಮುದ್ದಮ್ಮ ಕೋಂ ಲೇಟ್ ಸಿದ್ದಪ್ಪ ವಯಸ್ಸು 61 ವರ್ಷ ವಾಸ: ಕಳ್ಳಿಭೀಮಸಂದ್ರ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.

ವಿರುದ್ಧ

ಎದುರುದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಸೀಲ್ದಾರ್ ಹಾರೋಹಳ್ಳಿ ತಾಲ್ಲೂಕು, 2. ಗ್ರಾಮ ಲೆಕ್ಕಾಧಿಕಾರಿಗಳು ಕಳ್ಳಿಭೀಮಸಂದ್ರ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರುಗಳು 1 ಮತ್ತು 5 ರವರಿಗೆ ಮಾವನೂ ಹಾಗೂ ಅರ್ಜಿದಾರರುಗಳಾದ 2 ರಿಂದ 4 ರವರುಗಳಿಗೆ ತಂದೆಯೂ ಆದ ಲೇಟ್ ಬಸವಯ್ಯ ಬಿನ್ ಲೇಟ್ ಹುಚ್ಚಿವಾಸಿ ಸಿದ್ದಯ್ಯ ರವರು ದಿನಾಂಕ 11-10-2008 ರಂದು ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಕಳ್ಳಿಭೀಮಸಂದ್ರ ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ-ರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದ್ದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 14/08/2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದು ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ 01/07/2025 ರಂದು ಸ್ವ-ಅಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಕಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಸಿದ್ದರಾಜು.ಎ.ಬಿ.
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ:

ಮಾನ್ಯ ಗೌರವಾನ್ವಿತ ಪ್ರಧಾನ ಕಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 36/2025

ಅರ್ಜಿದಾರರು: 1) ಶ್ರೀಮತಿ ಮುದ್ದಮ್ಮ ಕೋಂ ಲೇಟ್ ಸಿದ್ದಪ್ಪ ವಯಸ್ಸು 61 ವರ್ಷ ವಾಸ: ಕಳ್ಳಿಭೀಮಸಂದ್ರ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.

ವಿರುದ್ಧ

ಎದುರುದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಸೀಲ್ದಾರ್ ಹಾರೋಹಳ್ಳಿ ತಾಲ್ಲೂಕು, 2. ಗ್ರಾಮ ಲೆಕ್ಕಾಧಿಕಾರಿಗಳು ಕಳ್ಳಿಭೀಮಸಂದ್ರ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರುಗಳು 1 ಮತ್ತು 5 ರವರಿಗೆ ಅತ್ತೆಯೂ ಹಾಗೂ ಅರ್ಜಿದಾರರುಗಳಾದ 2 ರಿಂದ 4 ರವರುಗಳಿಗೆ ತಾಯಿಯೂ ಆದ ಲೇಟ್ ದೇವಮ್ಮ ಕೋಂ ಲೇಟ್ ಬಸವಯ್ಯ ರವರು ದಿನಾಂಕ 06-12-2015 ರಂದು ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಕಳ್ಳಿಭೀಮಸಂದ್ರ ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ-ರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದ್ದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 14/08/2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದು ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ 01/07/2025 ರಂದು ಸ್ವ-ಅಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಕಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಸಿದ್ದರಾಜು.ಎ.ಬಿ.
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ:

7.5 ಕೋಟಿ ರು. ಫೆರಾರಿ ಕಾರು ಆರ್‌ಟಿಒ ವಶಕ್ಕೆ

ಬೆಂಗಳೂರು: ಬೆಂಗಳೂರಿನ ರಸ್ತೆಗಳಲ್ಲಿ ಕೋಟ್ಯಂತರ ರು. ತೆರಿಗೆ ವಂಚನೆಯ ಆರೋಪದಡಿ ಐಷಾರಾಮಿ ಫೆರಾರಿ ಕಾರೊಂದನ್ನು ಆರ್‌ಟಿಒ (ಪ್ರಾದೇಶಿಕ ಸಾರಿಗೆ ಕಚೇರಿ) ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಮಹಾರಾಷ್ಟ್ರದಲ್ಲಿ ನೋಂದಾಯಿತವಾಗಿರುವ ಫೆರಾರಿ ಕಾರು, ಕರ್ನಾಟಕದಲ್ಲಿ ಅನಧಿಕೃತವಾಗಿ ಓಡಾಡುತ್ತಿತ್ತು ಎಂದು ಆರೋಪಿಸಲಾಗಿದೆ. ಕಾರಿನ ಮೌಲ್ಯ ಸುಮಾರು 7.5 ಕೋಟಿ ರೂಪಾಯಿಗಳಾಗಿದೆ. ಕಾರಿನ ಮಾಲೀಕನಿಗೆ ಜಯನಗರದ 5ನೇ ಬ್ಲಾಕ್‌ನಲ್ಲಿ ವಾಸಿಸುತ್ತಿದ್ದು, ಲಾಲ್‌ಬಾಗ್ ಬಳಿ ಈ ಕಾರು ಓಡಾಡುತ್ತಿರುವಾಗ ಆರ್‌ಟಿಒ ತಂಡವು ಗುರುತಿಸಿ, ವಶಪಡಿಸಿಕೊಂಡಿದೆ. ಕಾರಿನ ದಾಖಲೆಗಳನ್ನು ಪರಿಶೀಲಿಸಿದಾಗ, ಮಾಲೀಕನು ಕರ್ನಾಟಕದಲ್ಲಿ ಅಗತ್ಯವಾದ ರಸ್ತೆ ತೆರಿಗೆಯನ್ನು ಪಾವತಿಸದೆ, ಕೇವಲ ಮಹಾರಾಷ್ಟ್ರದಲ್ಲಿ 20 ಲಕ್ಷ ರೂಪಾಯಿ ತೆರಿಗೆ ಕಟ್ಟಿ ಕಾರನ್ನು ಓಡಿಸುತ್ತಿದ್ದಾನೆಂದು ಬಯಲಾಗಿದೆ. ಈ ತೆರಿಗೆ ವಂಚನೆಯ ಮೊತ್ತವು ಬರೋಬ್ಬರಿ 1.58 ಕೋಟಿ ರೂಪಾಯಿಗಳಾಗಿದೆ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ. 2023ರ ಸೆಪ್ಟೆಂಬರ್‌ನಿಂದ ಈ ಕಾರು ಕರ್ನಾಟಕದ ರಸ್ತೆಗಳಲ್ಲಿ ಓಡಾಡುತ್ತಿದ್ದು, ಟ್ರಾಫಿಕ್ ಪೊಲೀಸ ರಿಗೆ ಈ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಆದರೆ, ಇತ್ತೀಚೆಗೆ ಲಾಲ್‌ಬಾಗ್‌ಲ್ಲಿ ಕಾರು ಕಾಣಿಸಿಕೊಂಡಾಗ ಆರ್‌ಟಿಒ ಅಧಿಕಾರಿಗಳು ತಕ್ಷಣ ಕಾರ್ಯಾಚರಣೆಗೆ ಇಳಿದು, ಕಾರನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು –560009

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ. ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	(1) **ಶ್ರೀ. ಬಾಲಕೃಷ್ಣ** ಬಿನ್ ಗಂಗಯ್ಯ ವೆಂಕಟೇಶ್, 49/ಆರ್‌ಸಿ ಗೂಡ್‌ಶೆಡ್ ರಸ್ತೆ, ಸ್ಟೇಷನ್ ಏರಿಯಾ ಮುತ್ಯಾಲಮ್ಮ ದೇವಸ್ಥಾನ ಆಶಾಪುರ ರಸ್ತೆ, ರಾಯಚೂರು–584101, **ಮತ್ತೊಂದು ವಿಳಾಸ: ಶ್ರೀ ಬಾಲಕೃಷ್ಣ,** ಬಿನ್ ಗಂಗಯ್ಯ ವೆಂಕಟೇಶ್, ಹಿರಿಯ ಸಾಫ್ಟ್‌ವೇರ್ ಇಂಜಿನಿಯರ್, Spanidea Systems Private Ltd, ನಂ.37/34/1, ಬೆಂಗಳೂರು–560103 **(ಸಾಲಗಾರರು/ ಅರ್ಜಿದಾರರು) (2) ಶ್ರೀಮತಿ. ಸುಪ್ರಿತಾ** ವಿ, ಕೋಂ ಬಾಲಕೃಷ್ಣ, 49/ಆರ್‌ಸಿ ಗೂಡ್‌ಶೆಡ್ ರಸ್ತೆ, ಸ್ಟೇಷನ್ ಏರಿಯಾ ಮುತ್ಯಾಲಮ್ಮ ದೇವಸ್ಥಾನ, ಆಶಾಪುರ ರಸ್ತೆ, ರಾಯಚೂರು 584101, **ಮತ್ತೊಂದು ವಿಳಾಸ: ಶ್ರೀಮತಿ ಸುಪ್ರಿತಾ ವಿ,** ಕೋಂ ಎಸ್ ಬಾಲಕೃಷ್ಣ, #591, 5ನೇ ಸ್ವರ್ಣಸಂದ್ರ ಕಾಲೋನಿ, ಮಂಡ್ಯ–571401 **(ಸಹ ಅರ್ಜಿದಾರರು/ ಜಾಮೀನುದಾರರು)**	**ಷೆಡ್ಯೂಲ್ ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಭೂಮಿಯ ಪ್ಲಾಟ್ ನಂ. 18, ಸರ್ವೆ ನಂ. 1464/1, ಮುನಿಸಿಪಲ್ ನಂ. 1–3–71–18, ನಜರಯ್ಯ ಕಾಲೋನಿ, ಆಶಾಪುರ್ ರಸ್ತೆ, ರಾಯಚೂರು, ಜೊತೆಗೆ ಅದರ ಮೇಲಿನ ಎಲ್ಲಾ ಕಟ್ಟಡಗಳು ಮತ್ತು ರಚನೆಗಳು, ಭೂಮಿಗೆ ಜೋಡಿಸಲಾದ ನೆಲೆವಸ್ತುಗಳು, ಫಿಟ್ಟಿಂಗ್‌ಗಳು ಮತ್ತು ಸ್ಥಾವರ ಮತ್ತು ಯಂತ್ರೋಪಕರಣ ಗಳು ಅಥವಾ ಭೂಮಿಗೆ ಪ್ರಸ್ತುತ ಮತ್ತು ಭವಿಷ್ಯದಲ್ಲಿ ಜೋಡಿಸಲಾದ ಯಾವುದೇ ವಸ್ತುವಿಗೆ ಶಾಶ್ವತವಾಗಿ ಜೋಡಿಸಲಾದ ವಸ್ತುಗಳು. **ಯಾವುದೇ ಮಾಹಿತಿಗಾಗಿ ಶ್ರೀ.ಸಂಜಯ್ ಪ್ರಸಾದ್ : 9916566630 ರವರನ್ನು ಸಂಪರ್ಕಿಸಿ.**	16.06.2025 ಎನ್‌ಪಿಎ ದಿನಾಂಕ 03.06.2025	**Power Home Vanilla BRE Loan No. PHR034206818740 Rs 56,00,000/- O/s Amount Rs. 56,22,772/-** **Power Home Vanilla BRE Loan No. PHR034207845404 Rs 17,00,000/- O/s Amount Rs. 18,54,361/-** **ಬಾಕಿ ಒಟ್ಟು ಮೊತ್ತ ರೂ. 74,77,133/– ದಿನಾಂಕ: 16.06.2025 ರಂದು ಇದ್ದಂತೆ**
2	(1) **ಮೆಸ್.ಎಂ.ಜಿ. ಸ್ಟೀಲ್ಸ್, ಪ್ರತಿನಿಧಿಸುವ ಮಾಲೀಕರು ಶ್ರೀ ಮೊಹಮ್ಮದ್ ನಯಾಜ್ ಪಾಷಾ** ಅಂಗಡಿ ನಂ. 6, ಪಿಐಡಿ ನಂ. 75513, ಎಂ ಜಿ ಕಾಂಪ್ಲೆಕ್ಸ್ ರಿಂಗ್ ರಸ್ತೆ ತುಮಕೂರು ಕರ್ನಾಟಕ–572101 **(2) ಶ್ರೀ ಮೊಹಮ್ಮದ್ ನಯಾಜ್ ಪಾಷಾ,** ಬಿನ್ ಶ್ರೀ ಮೊಹಮ್ಮದ್ ಗೌಸ್, 1ನೇ ಕ್ರಾಸ್ ಪಿಎಚ್ ಕಾಲೋನಿ, ತುಮಕೂರು–572101. **(3) ಶ್ರೀಮತಿ. ಜಹೇದಾ ಬೀ,** ಕೋಂ ಶ್ರೀ. ಮೊಹಮ್ಮದ್ ಗೌಸ್ ಬಾಂಬೆ ಕಟ್ಟಡ, ರಸ್ತೆ ಪಿಎಚ್ ಕಾಲೋನಿ, 1ನೇ ಕ್ರಾಸ್, ತುಮಕೂರು–572101	**ಸ್ಥಿರಾಸ್ತಿಯು ಶ್ರೀಮತಿ. ಜಹೇದಾ ಬೀ ಕೋಂ ಮೊಹಮ್ಮದ್ ಘೌಸ್ ರವರ ಹೆಸರಿನಲ್ಲಿದೆ. ಆಸ್ತಿಯ ವಿವರ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ವತ್ತಿನ ಮುನಿಸಿಪಲ್ ಖಾತಾ ನಂ. 2927, ಹಳೆ ಸ್ವತ್ತಿನ ನಂ. 7/1ಎ/2927, ಸರ್ವೆ ನಂ. 7/1ಎ, ವೀರಸಾಗರ ಲೇಔಟ್, ವೀರಸಾಗರ, ತುಮಕೂರು ಮಹಾನಗರ ಪಾಲಿಕೆ, ತುಮಕೂರು, ಚಕ್ಕುಬಂದಿ : ಪೂರ್ವಕ್ಕೆ : ಕಂಬಲಾಳು ರಾಮಣ್ಣ ರವರ ಆಸ್ತಿ, ಪಶ್ಚಿಮಕ್ಕೆ : ರಸ್ತೆ (ದಾರಿ), ಉತ್ತರಕ್ಕೆ : ಖಾಸಗಿ ಆಸ್ತಿ, ದಕ್ಷಿಣಕ್ಕೆ : ಆಸ್ತಿ ನಂ.2, ಅಂದರೆ ರಾಯ ರವರ ಭಾಗ. **ಯಾವುದೇ ಮಾಹಿತಿಗಾಗಿ ಶ್ರೀ.ರಾಜೇಶ್ ಕುಮಾರ್, : 9900679278 ರವರನ್ನು ಸಂಪರ್ಕಿಸಿ.**	11.06.2025 ಎನ್‌ಪಿಎ ದಿನಾಂಕ 29.06.2024	**Cash Credit Loan No. 922060050843920 Rs. 1,68,000/- O/s Amount Rs. 51,638.05** **Term Loan Loan No. 922030020526144 Rs. 80,00,000/- O/s Amount Rs. 81,65,342.50** **ಬಾಕಿ ಒಟ್ಟು ಮೊತ್ತ ರೂ. 82,16,980.55 ದಿನಾಂಕ: 11.06.2025 ರಂದು ಇದ್ದಂತೆ**

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ಸ್ಥಳ : ಬೆಂಗಳೂರು
ದಿನಾಂಕ : 03.07.2025
ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಜಲಮಂಡಳಿ ಅಧಿಕಾರಿಗಳಿಗೆ ಪೂರ್ವ ವಲಯ ಆಯುಕ್ತೆ ಸೂಚನೆ

ನೀರಿನ ಪೈಪ್‌ಲೈನ್ ಮರುಸ್ಥಾಪಿಸಿ: ಸ್ನೇಹಲ್

ಬೆಂಗಳೂರು: ಅಸೆನ್ಷನ್ ಚರ್ಚ್ ರಸ್ತೆಯಲ್ಲಿ ಜಲಮಂಡಳಿಯ ವತಿಯಿಂದ ಇತ್ತೀಚೆಗೆ ನೀರಿನ ಪೈಪ್‌ಲೈನ್ ದುರಸ್ತಿ ಕಾರ್ಯ ಮಾಡಿದ್ದರೂ ಕೂಡ ಕುಸಿಯುತಿದ್ದು, ಅದನ್ನು ತ್ವರಿತವಾಗಿ ಮರುಸ್ಥಾಪಸಿ ತಕ್ಷಣ ಕ್ರಮವಹಿಸುವಂತೆ ಪೂರ್ವ ವಲಯ ಆಯುಕ್ತೆ ಸ್ನೇಹಲ್ ಜಲಮಂಡಳಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪುಲಕೇಶಿನಗರ ಪೊಲೀಸ್ ಠಾಣೆಯಿಂದ ಹೆಣ್ಣೂರು ಮುಖ್ಯರಸ್ತೆ ವರೆಗೆ, ಡೇವಿಸ್ ರಸ್ತೆ ಮತ್ತು ವೀಲರ್ ರಸ್ತೆ ಮಾರ್ಗವಾಗಿ ಸುಮಾರು 2.5 ಕಿಮೀ ದೂರ ನಡೆದು ಪರಿಶೀಲನೆ ನಡೆಸಿದರು. ಪುಲಕೇಶಿನಗರ ಪೊಲೀಸ್ ಠಾಣೆ ಕೆಳಸೇತುವೆ ಬಳಿ ಚರಂಡಿ ಸ್ಲ್ಯಾಬ್‌ಗಳು ಹಾಳಾಗಿದ್ದು, ವಾಹನ ಚಾಲನೆ ಮತ್ತು ಪಾದಚಾರಿ ಸಂಚಾರಕ್ಕೆ ಅಡ್ಡಿಯಾಗುತ್ತಿದೆ.

ಈ ಪೈಕಿ ಹಾಳಾಗಿರುವ ಸ್ಲ್ಯಾಬ್‌ಗಳನ್ನು ತಕ್ಷಣ ಬದಲಾಯಿಸಿ, ಪಾದಚಾರಿ ಮಾರ್ಗವನ್ನು ಸುರಕ್ಷಿತ ಗೊಳಿಸಲು ಸೂಚಿಸಿದರು. ಮತ್ತು ಹಚಿನ್ಸ್ ರಸ್ತೆಯಿಂದ ಪಾದಚಾರಿ ಮಾರ್ಗದ ಪರಿಶೀಲನೆಯ ವೇಳೆ ಪಾದಚಾರಿ ಮಾರ್ಗಗಳ ವಿಶೇಷ ಸ್ವಚ್ಛತಾ ಅಭಿಯಾನ ಆರಂಭಿಸಬೇಕು. ಈ ಅಭಿಯಾನದಲ್ಲಿ ಅನಧಿಕೃತವಾಗಿ ಓಎಫ್‌ಸಿ ಅಳವಡಿಸಿರುವರಿಗೆ ನೋಟಿಸ್ ನೀಡಿ ತೆರವು ಮಾಡುವುದು, ಪಾದಚಾರಿ ಮಾರ್ಗಗಳ ಒತ್ತುವರಿ ತೆರವು, ಸ್ವಚ್ಛತೆ ಕಾರ್ಯ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪರಿಶೀಲನೆ ವೇಳೆ ಕಾರ್ಯಪಾಲಕ ಅಭಿ ಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತ ರರು, ಆರೋಗ್ಯ ಮತ್ತು ನೈರ್ಮಲ್ಯ, ಘನತ್ಯಾಜ್ಯ ನಿರ್ವಹಣೆಯ ಎಜಿಎಂ, ಜಲಮಂಡಳಿ, ಬೆಸ್ಕಾಂ, ಸಂಚಾರ ವಿಭಾಗ ಪೊಲೀಸರು ಸೇರಿದಂತೆ ಇತರ ಸಂಬಂಧಪಟ್ಟ ಅಧಿಕಾರಿಗಳು ಪಾಲ್ಗೊಂಡಿದ್ದರು.

ದಂಡ ವಿಧಿಸಲು ಸೂಚನೆ

ಪಾದಚಾರಿ ಮಾರ್ಗದ ಮೇಲೆ ಅನಧಿಕೃತವಾಗಿ ವಾಹನಗಳನ್ನು ನಿಲ್ಲಿಸುವುದು ಹೆಚ್ಚಾಗಿರುವುದರಿಂದ ಪಾದಚಾರಿಗಳ ಸಂಚಾರಕ್ಕೆ ಸಮಸ್ಯೆ ಉಂಟಾಗುತ್ತಿದೆ. ಈ ರೀತಿ ಪಾದಚಾರಿ ಮಾರ್ಗದ ಮೇಲೆ ಅನಧಿಕೃತವಾಗಿ ನಿಲ್ಲಿಸುವ ವಾಹನಗಳ ಮೇಲೆ ದಂಡ ವಿಧಿಸುವಂತೆ ಮತ್ತು ಸ್ಥಳೀಯ ಸಂಚಾರಿ ಪೊಲೀಸರಿಗೆ ಆ ವಾಹನಗಳನ್ನು ತಕ್ಷಣ ತೆರವುಗೊಳಿಸುವಂತೆ ಪೂರ್ವ ವಲಯ ಆಯುಕ್ತೆ ಸ್ನೇಹಲ್ ನಿರ್ದೇಶನ ನೀಡಿದರು.

ಪೂರ್ವ ವಲಯ ಆಯುಕ್ತೆ ಸ್ನೇಹಲ್ ಅವರು ಪುಲಕೇಶಿನಗರ ಪೊಲೀಸ್ ಠಾಣೆಯಿಂದ ಹೆಣ್ಣೂರು ಮುಖ್ಯರಸ್ತೆ, ಡೇವಿಸ್ ರಸ್ತೆ ಮತ್ತು ವೀಲರ್ ರಸ್ತೆ ಮಾರ್ಗವಾಗಿ ನಡೆದು ಕಾಮಗಾರಿ ಪರಿಶೀಲಿಸಿದರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, **ಶ್ರೀ. ಭಾಸ್ಕರ್. ಪಿ. ಬಿನ್ ಲೇಟ್ ಆರ್. ಪರಸುಮಾಮ್** ರವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ಥಿರಾಸ್ತಿ ಸ್ವತ್ತಿಗೆ ಮಾಲೀಕರಾಗಿರುತ್ತಾರೆ ಮತ್ತು ಇವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಶ್ರೀ.ಎನ್.ಎಸ್.ಶಶಿಕಾಂತ ರಾವ್ ಅವರ ಹೆಸರಿನಲ್ಲಿ ನೀಡಲಾದ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ದಿನಾಂಕ: 12/01/2017ರ ಮೂಲ ಖಾತಾ ಪ್ರಮಾಣಪತ್ರವನ್ನು ಕಳೆದುಕೊಂಡಿದ್ದಾರೆ. ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ **ಏಳು ದಿನಗಳ** ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ಕಂಬಿಪುರ ಗ್ರಾಮದಲ್ಲಿ ವಸತಿ ಉದ್ದೇಶಕ್ಕಾಗಿ ಪರಿವರ್ತಿತವಾದ ಸರ್ವೆ ನಂ.132/1, 132/8, 137, 146 ಮತ್ತು 147 ರಲ್ಲಿ ರಚಿಸಲಾದ "ಗ್ಲೋಬಲ್ ಗಾರ್ಡನ್ ಸಿಟಿ" ಎಂದು ಕರೆಯಲ್ಪಡುವ ಲೇಔಟಿನಲ್ಲಿರುವ ಸ್ವತ್ತಿನ ಸೈಟ್ ನಂ.173,ರ ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ 9.14 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 6.10 ಮೀಟರ್ ಮತ್ತು ಸಂಪೂರ್ಣವಾಗಿ 600 ಚದರ ಅಡಿ ವಸತಿ ನಿವೇಶನ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ 03.06.2013 ರಂದು ಆದೇಶ ಸಂಖ್ಯೆ **BDA/TPM/PRL/38/2012-13/853/2013-14** ರಂತೆ ಅನುಮೋದಿಸಲ್ಪಟ್ಟಿದೆ. ಈ ಸ್ವತ್ತಿಗೆ ಚಕ್ಕುಬಂದಿ :– ಪೂರ್ವ: ಸೈಟ್ ನಂ.149, ಪಶ್ಚಿಮ : ರಸ್ತೆ, ಉತ್ತರ : ಸೈಟ್ ನಂ.172, ದಕ್ಷಿಣ: ಸೈಟ್ ನಂ.174.

ಎನ್ ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್, ಎನ್.ಆರ್.ಕಾಲೋನಿ ಬಸ್ ನಿಲ್ದಾಣದ ಹತ್ತಿರ, ಹೋಟೆಲ್ ದ್ವಾರಕ ಎದುರು, ಬೆಂಗಳೂರು–560019.

ಗುರು ಪೂರ್ಣಿಮಾ ಆಚರಣೆ 11ರಿಂದ

ಬೆಂಗಳೂರು: ದಿ. ಗುರೂಜಿ ಪಂ.ಚಂದ್ರಶೇಖರ ಪುರಾಣಿಕ್ 15ನೇ ಪುಣ್ಯತಿಥಿ ಹಾಗೂ 33ನೇ ಗುರು ಪೂರ್ಣಿಮ ಕಾರ್ಯಕ್ರಮ ಜು.11 ರಿಂದ 13ರವರೆಗೆ ರಾಜರಾಜೇಶ್ವರಿ ನಗರದ ಸುಭಾಷ್ ಭವನದಲ್ಲಿ ನಡೆಯಲಿದೆ. ಪರಮೇಶ್ವರ್ ಹೆಗಡೆ ಸಂಗೀತ ಅಕಾಡೆಮಿ ಆಯೋಜಿಸಿರುವ ಮೂರು ದಿನಗಳ ಕಾರ್ಯಕ್ರಮದಲ್ಲಿ ಗುರುವಂದನೆ, ಸಂಗೀತ ಕಾರ್ಯಕ್ರಮ ನಡೆಯಲಿದೆ. ಶಾರದಾ ಭಟ್ ಅವರಿಂದ ಹಿಂದೂಸ್ತಾನಿ ಗಾಯನ ವಾಚನ ಕಾರ್ಯಕ್ರಮ ನಡೆಯಲಿದೆ. ವಿವಿಧ ಗಾಯಕರು ಮತ್ತು ವಾದಕರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ. ಭಕ್ತ ವೃಂದದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಪ್ರಕಟಣೆಯಲ್ಲಿ ತಿಳಿಸಿದೆ.

ಕಾಫಿ ಕಪ್‌ಗಾಗಿ ಕಿರಿಕ್: ಬಂಧನ

ಬೆಂಗಳೂರು: ಹೆಚ್ಚುವರಿ ಕಾಫಿ ಕಪ್ ಕೊಡಲು ನಿರಾಕರಿಸಿದಕ್ಕೆ ಹೋಟೆಲ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಿರುವ ಘಟನೆ ನಡೆದಿದ್ದು, ಈ ಸಂಬಂಧ ಒಬ್ಬ ಆರೋಪಿಯನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಹಲ್ಲೆಗೊಳಗಾದ ಇಸ್ಲಾಂಮುಲ್ ಎಂಬುವರು ನೀಡಿದ ದೂರಿನ ಮೇರೆಗೆ ಆರೋಪಿ ಅರುಣ್ ಕುಮಾರ್ ಎಂಬಾತನನ್ನು ಬಂಧಿಸಲಾಗಿದೆ.

SRI SEETHARAGHAVA SOUHARDA SAHAKARA BANK NIYAMITHA, HOSADURGA

BALANCE SHEET AS ON MARCH 31st, 2025

FORM A - FORM OF BALANCE SHEET

As on 31.03.2024 (Previous year)	Sch No	CAPITAL AND LIABILITIES	As on 31.03.2025 Current year)
6,50,73,500	1	CAPITAL:	6,83,38,400
15,22,27,781	2	RESERVE FUND AND OTHER RESERVES:	12,47,90,986
-	3	PRINCIPAL/SUBSIDIARY STATE PARTNERSHIP FUND ACCOUNT:	-
1,67,18,43,959	4	DEPOSITS AND OTHER ACCOUNTS	1,70,72,34,012
-	5	BORROWINGS	-
-	6	BILLS FOR COLLECTION BEING BILLS RECEIVABLE(As per contra)	-
-	7	BRANCH ADJUSTMENTS	-
2,60,32,411	8	OVERDUE INTEREST RESERVE	2,17,97,221
1,19,07,160	9	INTEREST PAYABLE	1,00,58,475
1,93,28,361	10	OTHER LIABILITIES	5,11,29,173
1,54,69,138	11	PROFIT AND LOSS	1,58,87,943
1,96,18,82,310		**TOTAL . . . .**	**1,99,92,36,210**
		CONTINGENT LIABILITIES	
		(i) Outstanding liabilities for guarantees issued	-
7,70,346		(ii) Others	7,70,346
7,70,346		**TOTAL . . . .**	**7,70,346**
As on 31.03.2025 (Previous year)	Sch No	PROPERTY AND ASSETS	As on 31.03.2025 (Current year)
3,01,31,195	12	CASH:In Hand & with Reserve Bank 1[National Bank] State Bank of India, State Co-operative Bank and Central Co-operative Bank	3,08,23,107
15,83,81,867	13	BALANCES WITH OTHER BANKS	23,61,79,070
-	14	MONEY AT CALL AND SHORT NOTICE	-
37,91,82,441	15	INVESTMENTS	36,30,98,662
-	16	INVESTMENT OUT OF THE PRINCIPAL/SUBSIDIARY STATE PARTNERSHIP FUNDS:	-
1,18,44,44,684	17	ADVANCES :	1,16,22,29,558
2,60,32,411	18	INTEREST RECEIVABLE:	2,57,24,512
-	19	BILLS RECEIVABLE BEING BILLS FOR COLLECTION	-
-	20	BRANCH ADJUSTMENTS	-
16,21,49,711	21	FIXED ASSETS LESS DEPRECIATION	15,70,53,655
2,15,60,002	22	OTHER ASSETS (to be specified)	2,41,27,646
-		NON-BANKING ACQUIRED IN SATISFACTION OF CLAIMS	-
-		PROFIT AND LOSS	-
1,96,18,82,310		**TOTAL . . . .**	**1,99,92,36,210**

Notes on Accounts of Balance Sheet as on 31-03-2025

Particulars	As on 31.03.2025 Amount and Percentage	As on 31.03.2024 Amount and Percentage
1 Interest Income as a percentage to Working Funds	9.35%	9.30%
2 Non-Interest Income as a Percentage to Working Funds	0.34%	0.34%
3 Cost of Funds	6.12%	6.26%
4 Net Interest Margin	4.46%	4.13%
5 Operating Profit as a percentage to working Fund	1.15%	0.82%
6 Return on Assets	9.30%	9.30%
7 Gross NPA	2.57%	6.88%
8 Net NPA	00.00	3.19%
9 BDDR provision Coverage Ratio	100%	55.41%
10 CRAR (Capital to Risk Asset Ratio)	15.11%	14.06%
11 Working Capital	190.03 Crores	188.91 Crores
12 Business Per Employee	10.60 Crores	10.99 Crores
13 Profit per Employee	0.06 Crores	0.06 Crores
14 Payments to Deposit Insurance Program (DICGC)	20.09 Lakhs	19.58 Lakhs
15 Investments in Govt Securities and Other Investments	42.89 Crores	41.45 Crores
16 Penalty Imposed by RBI	NIL	NIL
17 Restricted Accounts	NIL	NIL
18 Total Risk Weighted Assets	130.79 Crores	123.14 Crores
19 Residential Mortgage Exposure	13.33 Crores	15.86 Crores
20 Total Unsecured Advances	9.34 Crores	9.79 Crores
21 Total Exposure to the Top 20 NPA Accounts	2.98 Crores	6.33 Crores
22 Percentage of Exposure to the Top 20 NPA Account	100%	100%
23 DEA Balance	0.08 Crore	0.08 Crore
24 Total Deposits of Top 20 Depositors	7.37 Crores	7.28 Crores
25 Percentage of Top 20 Depositors to Total Deposits	4.33%	4.35%
26 Total Advances to the Top 20 Largest Borrowers	30.83 Crores	29.34 Crores
27 Percentage of Top 20 Borrowers to total Loans and Advances	26.53%	24.77%

PROFIT AND LOSS ACCOUNT FOR THE YEAR ENDED MARCH 31, 2025

Sl No	Particulars	" Year ended on 31-03-2025 (Current year) "	Year ended on 31-3-2024 (Previous year) ""
	I. Income		
1	Interest and discount	17,76,19,530	17,57,46,805
2	Commission, exchange and brokerage	53,77,395	46,34,074
3	Subsidies and donations	-	-
4	Income from non-banking assets and profit from sale of or dealing with such assets	-	-
5	Other receipts	13,76,393	18,18,097
6	Loss (if any)	-	
	TOTAL	**18,43,73,318**	**18,21,98,976**
	II. Expenditure		
1	Interest on deposits, borrowings, etc	10,32,74,437	10,46,85,308
2	Salaries and allowances and provident fund	3,24,85,961	2,64,04,629
3	Directors' and local committee members' fees and allowances	731,500	5,69,500
4	Rent, taxes, insurance, lighting, etc	16,51,865	15,94,904
5	Law charges	-	-
6	Postage, telegrams and telephone Charges	728,890	6,32,246
7	Auditor's fees	6,51,000	5,47,822
8	Depreciation on and repairs to property	64,53,063	71,53,767
9	Stationery, printing and advertisement, etc	33,29,908	33,77,065
10	Loss from sale of or dealing with non-banking assets	-	-
11	Other expenditure	1,28,24,201	1,51,13,124
12	Balance of profit		
	TOTAL	**16,21,30,825**	**16,00,78,365**
	III. Net Profit for the year before Tax	**2,22,42,493**	**2,21,20,611**
	IV. Provisions and Contingencies		
1	Provision for Ammortisation	10,38,779	10,48,010
2	Provision for Standard Assets and NPA	1,00,000	3,00,000
3	Provision towards Investments Depreciation	-	-
4	Provision for tax (FY 24-25)	52,15,771	53,03,463
a	Current Tax	49,57,000	50,03,802
b	Add: Less provision in previous year (FY 23-24)	-	-
c	Net Income Current Tax provision	49,57,000	50,03,802
d	Add/Less : (Deffered Tax Asset)/Deffered Tax Liability	2,58,771	2,99,661
	TOTAL	**63,54,550**	**66,51,473**
	V. Balance Carried over to Balance Sheet (III - IV)	**1,58,87,943**	**1,54,69,138**

Sd/- **HANJI SHIVASWAMY** PRESIDENT
Sd/- **D ADIRAJAIAH** VICE PRESIDENT
Sd/- FOR **M/s B.P PATIL & CO.,** CHARTERED ACCOUNTANTS FRN : 002605S
Sd/- **GURUMURTHY T N** DIRECTOR
Sd/- **KUSHA KUMAR B V** DIRECTOR
Sd/- **CA. B P PATIL** PARTNER MEM No : 026911 (STATUTORY AUDITOR)

CERTIFICATE

Certified that we have audited the accounts of **SRI SEETHARAGHAVA SOUHARDA SAHAKARA BANK NIYAMITHA, HOSADURGA-577 527** for the year ended March 31, 2025 as produced for Audit by the Chief Executive Officer and other staff of the Co-operative Bank and obtained information and clarification during the course of the audit. In our opinion and to the best of our knowledge, the above Balance Sheet exhibits a true and fair view of the financial position of the Bank subject to remarks narrated in the Audit Report.

Place : HOSADURGA
Date : 23/06/2025

Sd/-
For M/s B.P.PATIL& Co
CHARTERED ACCOUNTS
FRN:002605S

ಸಮಾಚಾರ ಸಣ್ಣದಲ್ಲ

ರಾಮಯ್ಯದಲ್ಲಿ ಜೆಐಸಿ ಮಾನ್ಯತೆ ಆಚರಣೆ ಇಂದು

ಬೆಂಗಳೂರು: ರಾಮಯ್ಯ ಮೆಮೋರಿಯಲ್ ಆಸ್ಪತ್ರೆಯ ಜೆಐಸಿ ಮಾನ್ಯತೆಯ ನೂತನ ಮೈಲಿಗಲ್ಲಿನ ಸಾಧನೆ ಆಚರಣೆ ಶುಕ್ರವಾರ ಬೆಳಗ್ಗೆ 11 ಗಂಟೆಗೆ ಆಸ್ಪತ್ರೆಯ ಸಭಾಂಗಣದಲ್ಲಿ ನಡೆಯಲಿದೆ. ರಾಮಯ್ಯ ಮೆಮೋರಿಯಲ್ ಆಸ್ಪತ್ರೆ ತನ್ನ ರೋಗಿಗಳ ಆರೈಕೆ, ಸುರಕ್ಷತೆ ಮತ್ತು ಕ್ಲಿನಿಕಲ್ ಶ್ರೇಷ್ಠತೆಯಲ್ಲಿ ಅತ್ಯುನ್ನತ ಮಾನದಂಡಗಳಿಗಾಗಿ ಜೆಸಿಐ ಮಾನ್ಯತೆ ಸಾಧಿಸಿದೆ. ಈ ಸಾಧನೆಯಯನ್ನು ಆಚರಿಸುವ ಸಲುವಾಗಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಸಿಇ ಡಾ.ನಾಗೇಂದ್ರ ಸ್ವಾಮಿ ಜೆಐಸಿ ಮಾನ್ಯತೆ ಕುರಿತು ವಿವರ ನೀಡುತ್ತಾರೆ. ರಾಮಯ್ಯ ಸಮೂಹ ಮುಖ್ಯಸ್ಥ ಡಾ.ಜಯರಾಮ್ ಜೆಸಿಐ ಮಾನ್ಯತೆ ಲೋಗೋ ಘಟಕದ ಅನಾವರಣ ಮಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮೂವರು ಬಿಬಿಎಂಪಿ ನೌಕರರ ಅಮಾನತು

ಬೆಂಗಳೂರು: ಸಮೀಕ್ಷೆಯನ್ನೇ ಮಾಡದೇ ಜಾತಿಗಣತಿ ಪೂರ್ಣ ಎಂಬ ಸ್ಟಿಕ್ಕರ್ ಅಂಟಿಸಿದ್ದನ್ನು ಮನೆ ಮಾಲೀಕ ಪ್ರಶ್ನಿಸಿದ್ದಕ್ಕೆ ಹಲ್ಲೆನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಬಿಬಿಎಂಪಿ ನೌಕರರನ್ನು ಅಮಾನತುಗೊಳಿ ರಾಜರಾಜೇಶ್ವರಿನಗರ ವಲಯ ಜಂಟಿ ಆಯುಕ್ತರು ಆದೇಶ ಹೊರಡಿಸಿದ್ದಾರೆ. 2025ರ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯ ಸಂಬಂಧ ಮನೆ ಮನೆಗೆ ಸ್ಟಿಕ್ಕರ್ ಅಂಟಿಸುವ ಕಾರ್ಯದಲ್ಲಿ ಕರ್ತವ್ಯಲೋಪ ಎಸಗಿರುವ ಮೂರು ಜನ ಬಿಬಿಎಂಪಿ ನೌಕರರನ್ನು ಅಮಾನತುಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ. ಎಚ್.ಬಿ.ಆರ್ ಲೇಔಟ್ ಉಪವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಪರಿವೀಕ್ಷಕರಾದ ರಮೇಶ್, ಕಂದಾಯ ವಸೂಲಿಗಾರರಾದ ಪೆದ್ದುರಾಜು ಹಾಗೂ ಕೆಂಗೇರಿ ಉಪವಿಭಾಗ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ವಸೂಲಿಗಾರರಾದ ಸಿ. ಸಂದಿಲ್ ಕುಮಾರ್ ಅವರನ್ನು ಕರ್ತವ್ಯಲೋಪದ ಮೇರೆಗೆ ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಪರೀಕ್ಷೆಗಳಿಗೆ ತರಬೇತಿ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ, ಕರ್ನಾಟಕ ಸರಕಾರವು ಕೆಇಎ (ಕರ್ನಾಟಕ ಪರೀಕ್ಷಾ ಪ್ರಾಧಿಕಾರ) ಮೂಲಕ ನಡೆಸಲಿ ರುವ ರಾಜ್ಯ ಮಟ್ಟದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ ಕೆ-ಸೆಟ್ ಹಾಗೂ ನವದೆಹಲಿಯ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗ ದವರು ನಡೆಸಲಿರುವ ರಾಷ್ಟ್ರಮಟ್ಟದ ಕಾಲೇಜು ಸಹಾಯಕ ಪ್ರಾಧ್ಯಾಪಕರ (ಯುಜಿಸಿ-ನೆಟ್) ಮತ್ತು ಕಿರಿಯ ಶಿಷ್ಯ ವೇತನ ಸಂಶೋಧನ ಸಹಾಯಕರ (ಜೆಆರ್ಎಫ್) ಪರೀಕ್ಷೆಗಳಿಗೆ 45 ದಿನಗಳ ತರಬೇತಿ ಯನ್ನು ಮೈಸೂರಿನ ಕೇಂದ್ರ ಕಛೇರಿಯಲ್ಲಿ ಆಯೋಜಿಸಲಾಗಿದೆ. ಆಸಕ್ತರು 2025 ರ ಜುಲೈ 11 ರೊಳಗಾಗಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಲು ದೂರವಾಣಿ ಸಂಖ್ಯೆ 0821-2515944/ 9964760090 ಸಂಪರ್ಕಿಸಬಹುದೆಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ನವೀನ್‌ಕುಮಾರ್ ಎಸ್.ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಶಾಲಿನಿ ರಜನೀಶ್ ವಿರುದ್ಧ ಆಕ್ಷೇಪಾರ್ಹ ಪದ ಬಳಕೆ ಆರೋಪ | ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲು

ಎಂಎಲ್ಸಿ ರವಿಕುಮಾರ್ ವಿರುದ್ಧ ಎಫ್‌ಐಆರ್

ಬೆಂಗಳೂರು: ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಹಿರಿಯ ಐಎಎಸ್ ಅಧಿಕಾರಿ ಶಾಲಿನಿ ರಜನೀಶ್ ಅವರ ವಿರುದ್ಧ ಕೀಳು ದರ್ಜೆಯ ಭಾಷೆ ಬಳಸಿದ ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಪ್ರಕಾರ ಲೈಂಗಿಕ ಕಿರುಕುಳ, ಬೆದರಿಕೆ ಮತ್ತಿತರ ಪ್ರಕರಣಗಳನ್ನು ದಾಖಲಿಸಲಾಗಿದೆ.

ನಾಗರತ್ನ ಎಂಬುವರು ನೀಡಿದ ದೂರಿನ ಆಧಾರದ ಮೇಲೆ ವಿಧಾನಸೌಧ ಪೊಲೀಸರು ರವಿಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಭಾರತೀಯ ನ್ಯಾಯ ಸಂಹಿತೆ (ಬಿಎನ್ಎಸ್)ಯ 351 (3), 75 (3) 79 ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಬೆಂಗಳೂರಿನ ಕಾಡುಗೋಡಿ ಅರಣ್ಯ ಭೂಮಿ ಒತ್ತುವರಿ ತೆರವಿಗೆ ಮುಂದಾಗಿರುವ ರಾಜ್ಯ ಸರಕಾರದ ಕ್ರಮ ವಿರೋಧಿಸಿ ಎರಡು ದಿನಗಳ ಹಿಂದಷ್ಟೇ ಬಿಜೆಪಿ ನಾಯಕರು ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದ್ದರು. ರಾಜ್ಯ ಸರಕಾರ ಒತ್ತುವರಿ ತೆರವಿಗೆ ಮುಂದಾಗಿರುವ ಭೂಮಿಯಲ್ಲಿ ಪರಿಶಿಷ್ಟ ಜಾತಿಯ ಹಲವು ಕುಟುಂಬಗಳಿದ್ದು, ಕೂಡಲೇ ಒತ್ತುವರಿ ತೆರವು ಕಾರ್ಯ ನಿಲ್ಲಿಸಬೇಕು ಎಂದು ಆಗ್ರಹಿಸಿದ್ದರು. ಪ್ರತಿಭಟನೆಯ ನಂತರ ಸರಕಾರದ ಮುಖ್ಯ ಕಾರ್ಯದರ್ಶಿಗೆ ದೂರು ನೀಡಲು ಬಿಜೆಪಿ ನಾಯಕರು ಸಿದ್ಧತೆ ನಡೆಸಿದ್ದರು. ಆದರೆ, ಆ ವೇಳೆ ಮುಖ್ಯ ಕಾರ್ಯದರ್ಶಿ ಕಚೇರಿಯಲ್ಲಿ ಇರಲಿಲ್ಲ. ಈ ಸಂದರ್ಭದಲ್ಲಿ ಶಾಲಿನಿ ರಜನೀಶ್ ಕುರಿತು ಎನ್. ರವಿಕುಮಾರ್ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂದು ದೂರಲಾಗಿದೆ.

ಎಂಎಲ್‌ಸಿ ಎನ್.ರವಿಕುಮಾರ್ ವಿರುದ್ಧ ಕ್ರಮ ಜರುಗಿಸಲು ಕರ್ನಾಟಕದ ಐಎಎಸ್ ಅಧಿಕಾರಿಗಳ ಸಂಘ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿತು.

ಬಿಜೆಪಿಯ ವಿಧಾನ ಪರಿಷತ್ ಮುಖ್ಯ ಸಚೇತಕರೂ ಆಗಿರುವ ಎನ್. ರವಿಕುಮಾರ್ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಕಾಂಗ್ರೆಸ್ ಪಕ್ಷದ ವತಿಯಿಂದ ಮಹಿಳಾ ಆಯೋಗ ಹಾಗೂ ವಿಧಾನ ಪರಿಷತ್ ಸಭಾಪತಿಗೂ ದೂರು ನೀಡಲಾಗಿದೆ.

ಬಿಕೆ ಹರಿಪ್ರಸಾದ್ ನೇತೃತ್ವದಲ್ಲಿ ದೂರು: ಸಿಎಸ್ ಶಾಲಿನಿ ರಜನೀಶ್ ವಿರುದ್ಧ ಅವಹೇಳನಕಾರಿ ಮಾತನಾಡಿದ್ದಾರೆ ಎಂಬ ಪ್ರಕರಣ ಸಂಬಂಧ ಬಿ.ಕೆ.ಹರಿ ಪ್ರಸಾದ್ ನೇತೃತ್ವದಲ್ಲಿ ತೆರಳಿದ ಕಾಂಗ್ರೆಸ್ ಎಂಎಲ್‌ಸಿ ನಿಯೋಗ ಸಭಾಪತಿ ಬಸವರಾಜ್ ಹೊರಟ್ಟಿ ಅವರಿಗೆ ದೂರು ನೀಡಿದ್ದಾರೆ. ಈ ವೇಳೆ ಕಾಂಗ್ರೆಸ್ ಪರಿಷತ್ ಸದಸ್ಯರುಗಳಾದ ಸಲೀಂ ಅಹಮದ್, ಮಂಜುನಾಥ್ ಭಂಡಾರಿ, ಡಿ.ಟಿ.ಶ್ರೀನಿವಾಸ್, ರಾಮೋಜಿಗೌಡ ಇದ್ದರು.

ಪತ್ರ ಬರೆದು ವಿವರಣೆ ಕೇಳಿದ ಸಭಾಪತಿ: ಕಾಂಗ್ರೆಸ್ ವಿಧಾನ ಪರಿಷತ್ ಸದಸ್ಯರಿಂದ ದೂರು ಸ್ವೀಕರಿಸಿದ ಸಭಾಪತಿ ಬಸವರಾಜ್ ಹೊರಟ್ಟಿ ಅವರು, ಎನ್. ರವಿಕುಮಾರ್‌ಗೆ ಪತ್ರ ಬರೆದ ಸಭಾಪತಿ ವಿವರಣೆ ಕೇಳಿ ಪತ್ರ ಬರೆದಿದ್ದಾರೆ.

ಅವಹೇಳನಕಾರಿ ಪದ ಬಳಸಿಲ್ಲ: ರವಿಕುಮಾರ್

ಸರಕಾರದ ಮುಖ್ಯ ಕಾರ್ಯದರ್ಶಿಗಳ ವಿರುದ್ಧ ನಾನು ಯಾವುದೇ ಅವಹೇಳನಕಾರಿಯಾಗಿ ಹೇಳಿಕೆ ನೀಡಿಲ್ಲ. ಕೆಲ ದೃಶ್ಯ, ಮುದ್ರಣ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಮುಖ್ಯ ಕಾರ್ಯದರ್ಶಿಗಳ ವಿರುದ್ಧ ನಾನು ಅವಹೇಳನಕಾರಿಯಾಗಿ ಮಾತನಾಡಿದ್ದೇನೆ ಎಂದು ಪ್ರಚಾರ ಮಾಡುತ್ತಿರುವುದು ನನಗೆ ಆಘಾತವನ್ನುಂಟು ಮಾಡಿದೆ ಎಂದು ಎನ್.ರವಿಕುಮಾರ್ ತಿಳಿಸಿದ್ದಾರೆ. ಈ ಕುರಿತ ಪ್ರಕಟಣೆ ಹೊರಡಿಸಿರುವ ಅವರು, ಅಧಿಕೃತ ಕೆಲಸದ ನಿಮಿತ್ತ ನಾನು ಕಳೆದ ಮೂರು ದಿನಗಳಿಂದ ಹೈದರಾಬಾದ್‌ನಲ್ಲಿ ಇದ್ದೆ. ಮಹಾದೇವಪುರ ಕ್ಷೇತ್ರದ ಕಾಡುಗೋಡಿಯ ದಲಿತ ಕುಟುಂಬಗಳು ಹಲವಾರು ವರ್ಷಗಳಿಂದ ವ್ಯವಸಾಯ ಮಾಡುತ್ತಿರುವ ಜಮೀನನ್ನು ಅರಣ್ಯ ಇಲಾಖೆಯು ವಶಕ್ಕೆ ಪಡೆಯುತ್ತಿರುವುದನ್ನು ಖಂಡಿಸಿ ಜೂನ್ 30ರಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾದ ಛಲವಾದಿ ನಾರಾಯಣಸ್ವಾಮಿ ಹಾಗೂ ನಾನು ಸೇರಿದಂತೆ ಇತರೆ ದಲಿತ ನಾಯಕರು ವಿಧಾನಸೌಧದ ಬಳಿಯ ಗಾಂಧಿ ಪ್ರತಿಮೆಯ ಮುಂದೆ ನಾವು ಪ್ರತಿಭಟನೆ ಮಾಡಿದ್ದೆವು. ಈ ಸಮಸ್ಯೆ ಬಗ್ಗೆ ಸರಕಾರದ ಗಮನಕ್ಕೆ ತರಲು ಸಿಎಂ ಸಹ ಭೇಟಿಗೆ ಸಿಗುತ್ತಿಲ್ಲ, ಸಿಎಸ್ ಅವರು ಕೂಡ ಸಿಗುತ್ತಿಲ್ಲ, ಹೀಗಾಗಿ ಸಿಎಸ್ ಅವರು ಬ್ಯುಸಿ ಇರುತ್ತಾರೆ ಅನ್ನುವುದನ್ನು ಬಿಟ್ಟು ಅವರ ವಿರುದ್ಧ ಯಾವುದೇ ಒಂದು ಶಬ್ದವು ಅವಹೇಳನಕಾರಿಯಾಗಿ ಮಾತನಾಡಿಲ್ಲ. ಪ್ರತಿಭಟನೆ ಸಂದರ್ಭದಲ್ಲಿ ಸಿಎಸ್ ಅವರ ವಿರುದ್ಧ ಯಾವುದೇ ಭಾಷಣ ಮಾಡಿಲ್ಲ ಹಾಗೂ ನಾನು ಮಾಧ್ಯಮಗಳೊಂದಿಗೆ ಕೂಡ ಮಾತನಾಡಿಲ್ಲ. ಹೀಗಾಗಿ ಮುಖ್ಯ ಕಾರ್ಯದರ್ಶಿಯ ವಿರುದ್ಧ ಯಾವುದೇ ಅವಹೇಳನಕಾರಿ ಹೇಳಿಕೆ ನೀಡುವ ಪ್ರಶ್ನೆಯೇ ಈ ವಿಷಯದಲ್ಲಿ ಉದ್ಭವಿಸುವುದಿಲ್ಲ. ನನ್ನ ಬಗ್ಗೆ ಹರಡುತ್ತಿರುವ ವರದಿಯು ಸಂಪೂರ್ಣವಾಗಿ ಆಧಾರರಹಿತ, ದಾರಿತಪ್ಪಿಸುವ, ದುರುದ್ದೇಶಪೂರಿತ ಮತ್ತು ದೂಷಣೆಯಿಂದ ಕೂಡಿದೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ತಿಳಿಸಿದ್ದಾರೆ.

ಕ್ರಮಕ್ಕೆ ಐಎಎಸ್ ಅಧಿಕಾರಿಗಳ ಸಂಘ ಮನವಿ

ಮುಖ್ಯ ಕಾರ್ಯದರ್ಶಿ ವಿರುದ್ಧ ಎಂಎಲ್‌ಸಿ ಎನ್.ರವಿ ಕುಮಾರ್ ನೀಡಿರುವ ಅವಹೇಳನಕಾರಿ ಹೇಳಿಕೆಯನ್ನು ಕರ್ನಾಟಕದ ಐಎಎಸ್ ಅಧಿಕಾರಿಗಳ ಸಂಘ ಬಲವಾಗಿ ಖಂಡಿಸಿದ್ದು, ಅವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರುವಾರ ಭೇಟಿ ಮಾಡಿದ ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕರಾದ ಪಂಕಜ್ ಕುಮಾರ್ ಪಾಂಡೆ, ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರಾದ ಖುಷ್ಬೂ ಗೋಯಲ್ ಚೌಧರಿ ಅವರನ್ನೊಳಗೊಂಡ ನಿಯೋಗವು ಸಂಘದ ಪರವಾಗಿ ಮನವಿ ಸಲ್ಲಿಸಿ, ರವಿ ಕುಮಾರ್ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿತು.

ಮಾವು ಖರೀದಿ: ಬೆಲೆ ವ್ಯತ್ಯಾಸ ಪಾವತಿಗೆ ರಾಜ್ಯದಿಂದ 101 ಕೋಟಿ ಬಿಡುಗಡೆ

ಬೆಂಗಳೂರು: ಮಾವು ಬೆಳೆಗಾರರ ಸಂಕಷ್ಟಕ್ಕೆ ತಕ್ಷ ಸ್ಪಂದಿಸಿದ್ದ ರಾಜ್ಯ ಸರಕಾರ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಬೆಲೆ ವ್ಯತ್ಯಾಸ ಪಾವತಿಗೆ 101 ಕೋಟಿ ರು. ಬಿಡುಗಡೆಗೆ ಆದೇಶ ಹೊರಡಿಸಿದೆ.

ಕೃಷಿ ಸಚಿವ ಎನ್ ಚಲುವರಾಯಸ್ವಾಮಿ ನಿರ್ದೇಶನದಂತೆ ಆವರ್ತ ನಿಧಿಯಿಂದ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮಾರುಕಟ್ಟೆ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಹಣ ಬಿಡುಗಡೆ ಮಾಡುವಂತೆ ರಾಜ್ಯ ಕೃಷಿ ಮಾರಾಟ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಗಿದೆ. ಅಲ್ಲದೆ ಈಗಾಗಲೇ ಘೋಷಿಸಿರುವಂತೆ ಶೇ.50 ರಷ್ಟು ಮೊತ್ತವನ್ನು ಕೇಂದ್ರ ಸರಕಾರದಿಂದ ಮರುಪಾವತಿ ಪಡೆಯಲು ಸಹ ಕ್ರಮ ವಹಿಸುವಂತೆ ಆದೇಶದಲ್ಲಿ ನಿರ್ದೇಶನ ನೀಡಲಾಗಿದೆ.

ರಾಜ್ಯದಲ್ಲಿ ಮಾವು ಬೆಲೆ ಕುಸಿತವಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದ ಸಂದರ್ಭದಲ್ಲಿ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಕೇಂದ್ರ ಸರಕಾರ ಗಮನ ಸೆಳೆದು, ಮನವಿ ಅರ್ಪಿಸಿ ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ ಬೆಲೆ ವ್ಯತ್ಯಾಸ ಪಾವತಿಗೆ ಕೇಂದ್ರ ಕೃಷಿ ಸಚಿವರ ಸಮ್ಮತಿ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ರಾಜ್ಯ ಹಾಗೂ ಕೇಂದ್ರ ಸರಕಾರಗಳೆರಡು ಶೇ.50-50 ಅನುಪಾತದಲ್ಲಿ ಯೋಜನೆ ಅನುಷ್ಠಾನಕ್ಕೆ ಕಳೆದ ವಾರ ಆದೇಶ ಹೊರಡಿಸಲಾಗಿತ್ತು. ಇದೀಗ ರಾಜ್ಯ ಸರಕಾರ ಖರೀದಿಗೆ ಬೇಕಾದ 101 ಕೋಟಿ ರು. ಹಣ ಬಿಡುಗಡೆಗೆ ಆದೇಶ ಹೊರಡಿಸಿ ಸುಗಮ ಪ್ರಕ್ರಿಯೆಗೆ ವ್ಯವಸ್ಥೆ ಮಾಡಿದೆ.

ಕಾಂಗ್ರೆಸ್ ಹಿರಿಯ ಮುಖಂಡ ಬಿ.ಕೆ.ಹರಿಪ್ರಸಾದ್, ಡಿಸಿಎಂ ಡಿ.ಕೆ.ಶಿವಕುಮಾರ್‌ರನ್ನು ಕುಮಾರಪಾರ್ಕ್ ಸರಕಾರಿ ನಿವಾಸದಲ್ಲಿ ಗುರುವಾರ ಭೇಟಿ ಮಾಡಿ ಮಾತುಕತೆ ನಡೆಸಿದರು.

ಹಿಂದೂ-ಮುಸ್ಲಿಂ ಭಾವೈಕ್ಯತೆಗೆ ಶರೀಫರ ಗದ್ದುಗೆ ಸಾಕ್ಷಿ: ಡಾ.ಮಹೇಶ ಜೋಶಿ ಅಭಿಮತ

ಶರೀಫರು ಏಕತೆ ಸಾರಿದ ಸಂತ

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಸಂತ ಶಿಶುನಾಳ ಶರೀಫರ ಜನ್ಮದಿನ ಕಾರ್ಯಕ್ರಮದಲ್ಲಿ ಕಸಾಪ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಶಿಶುನಾಳ ಶರೀಫ ಮತ್ತು ಗೋವಿಂದ ಭಟ್ಟರ ಜೋಡಿ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಬೆಂಗಳೂರು: ಬೋಧ ಒಂದೇ, ಬ್ರಹ್ಮನಾದ ಒಂದೇ, ಸಾಧನೆ ಮಾಡುವ ಹಾದಿ ಒಂದೇ, ಆದಿ ಪದ ಒಂದೇ, ಶಿಶುನಾಳಧೀಶನ ಭಾಷೆ ಒಂದೇ ಎಂದು ಹೇಳಿ ಅನೇಕತೆಯಲ್ಲಿ ಏಕತೆ ಸಾರಿದ ಸಾರಿದ ಶ್ರೇಷ್ಠ ಸಂತ ಶಿಶುನಾಳ ಶರೀಫರು ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಷಿ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಏರ್ಪಡಿಸಿದ್ದ ಸಂತ ಶಿಶುನಾಳ ಶರೀಫರ ಜನ್ಮದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬದುಕಿನ ಹಿರಿಮೆ ಅರಿತು, ಸಮಾಜದಲ್ಲಿನ ತಾರತಮ್ಯ ನಿವಾರಣೆಗೆ ಶ್ರಮಿಸಿ ಜಾತಿ ಮತಗಳ ಗಡಿದಾಟಿ ಸಂತ ಶ್ರೇಷ್ಠ ಎನ್ನಿಸಿಕೊಂಡವರು ಸಂತ ಶಿಶುನಾಳ ಶರೀಫರು. ಕಳಸದ ಗುರು ಗೋವಿಂದ ಭಟ್ಟರಿಂದ ಉಪದೇಶ ಪಡೆದುಕೊಂಡು ಎರಡೂ ಧರ್ಮದವರ ವಿರೋಧ ಎದುರಿಸಿ ಜಾತಿ, ಮತಗಳಿಗಿಂತ ಮಾನವ ಧರ್ಮವೇ ಶ್ರೇಷ್ಠ ಎಂದು ಬೋಧಿಸಿದರು. ಕಳಸದ ಗುರುಗೋವಿಂದ ಭಟ್ಟರು ಹಾಗೂ ಶಿಶುನಾಳ ಶರೀಫರು ಹಿಂದೂ ಹಾಗೂ ಇಸ್ಲಾಂ ಧರ್ಮಗಳ ಸಮಾನತೆ, ಸಮನ್ವಯ ಹಾಗೂ ಸಮತೆ, ಸಮಭಾವ, ಸಮಚಿತ್ತ ಹಾಗೂ ಸಮದೃಷ್ಟಿಯಿಂದ ನೋಡಿದಂಥ ಸಮಾನತೆಯ ಹರಿಕಾರರು ಎಂದರು.

ಕಾರ್ಯಕ್ರಮದಲ್ಲಿ ಸಂತ ಶಿಶುನಾಳ ಶರೀಫ ಮತ್ತು ಗೋವಿಂದ ಭಟ್ಟರ ಜೋಡಿ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಬಿ.ಎಂ.ಪಟೇಲ್ ಪಾಂಡು, ಮಾಧ್ಯಮ ವಿಭಾಗದ ಸಂಚಾಲಕ ಎನ್.ಎಸ್.ಶ್ರೀಧರ ಮೂರ್ತಿ ಭಾಗವಹಿಸಿದ್ದರು.

ಕತಾರ್: ಎನ್‌ಆರ್‌ಐಗಳಿಂದ ಯೋಗ ದಿನ ಆಚರಣೆ

ಬೆಂಗಳೂರು: ಕತಾರ್‌ನಲ್ಲಿರುವ ಅನಿವಾಸಿ ಭಾರತೀಯರಿಂದ ಕತಾರ್‌ನ ಐಡಿಯಲ್ ಭಾರತೀಯ ಶಾಲೆಯ ಆಟದ ಮೈದಾನದ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಭಾರತೀಯ ರಾಯಭಾರಿ ವಿಪುಲ್, 2014ರಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಯೋಗ ದಿನಾಚರಣೆ ಆಚರಿಸಲು ಪ್ರಾರಂಭಿಸಲಾಯಿತು. ಈ ದಿನಾಚರಣೆಗೆ ಮೂಲ ಕಾರಣಕರ್ತರಾದ ಭಾರತೀಯ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಅಭಿನಂದಿಸುತ್ತೇನೆ. ಅಂತಾರಾಷ್ಟ್ರೀಯ ಸಮುದಾಯದ ಈ ನಿಲುವನ್ನು 177 ರಾಷ್ಟ್ರಗಳು ತಮ್ಮದಾಗಿಸಿಕೊಂಡಿರುವುದು ಬಹಳ ಪ್ರಶಂಸನೀಯ, ಕಳೆದ ಒಂದು ದಶಕದಿಂದ ಯೋಗಾಭ್ಯಾಸವು ಜಾಗತಿಕ ಮಟ್ಟದಲ್ಲಿ ಸಂಪೂರ್ಣ ಬೆಳವಣಿಗೆ ಪ್ರೋತ್ಸಾಹಿಸುತ್ತಾ ಪ್ರಪಂಚದಾದ್ಯಂತ ಸಹಸ್ರಾರು ಜನರಿಗೆ ಸದುಪಯೋಗ ತಂದಿರುವುದು ಸಂತಸಕರ ಎಂದು ಹೇಳಿದರು.

ಕತಾರಿನಲ್ಲಿರುವ ಭಾರತೀಯ ದೂತಾವಾಸದ ಸಹಯೋಗದೊಂದಿಗೆ ಭಾರತೀಯ ಕ್ರೀಡಾ ಕೇಂದ್ರವು ಮತ್ತು ಹಲವು ಭಾರತೀಯ ಸಮುದಾಯದ ಸಂಘ ಸಂಸ್ಥೆಗಳ ನೆರವಿನೊಂದಿಗೆ ಸುಮಾರು 1500ಕ್ಕೂ ಹೆಚ್ಚು ಜನರು ಸೇರಿ ಯೋಗಾಭ್ಯಾಸ ಮಾಡಿದರು. ಸಂಜೆ ಯೋಗಭ್ಯಾಸದ ಕುರಿತು ರಸಪ್ರಶ್ನೆ ಕಾರ್ಯಕ್ರಮ ನಡೆ ಯಿತು. ಮಹಿಳೆಯರಿಗೆ ಪುರುಷರಿಗೆ ಹಾಗೂ ಮಕ್ಕಳಿಗೆ ಪ್ರತ್ಯೇಕವಾಗಿ ಯೋಗಾಸನದ ಸ್ಪರ್ಧೆ ಯನ್ನು ಹಮ್ಮಿಕೊಳ್ಳಲಾಗಿತ್ತು. ಭಾರತದಿಂದ ಆಗ ಮಿಸಿದ್ದ ಹಾಗೂ ಸ್ಥಳೀಯ ನಿಪುಣ ತಂಡಗಳಿಂದ ಯೋಗ ನೃತ್ಯವನ್ನು ಪ್ರದರ್ಶಿಸಲಾಯಿತು. ಕಾರ್ಯಕ್ರದಲ್ಲಿ ಭಾರತೀಯರು ಮಾತ್ರವಲ್ಲದೆ ನೆರೆ ರಾಷ್ಟ್ರಗಳಾದ ನೇಪಾಳ, ಶ್ರೀಲಂಕಾ ಹಾಗೂ ಆಫ್ರಿಕಾ ಖಂಡದ ಹಲವು ದೇಶಗಳ ನಾಗರಿಕರು ಪಾಲ್ಗೊಂಡಿದ್ದರು.

ಕತಾರ್‌ನಲ್ಲಿರುವ ಅನಿವಾಸಿ ಭಾರತೀಯರಿಂದ ಕತಾರ್‌ನ ಐಡಿಯಲ್ ಭಾರತೀಯ ಶಾಲೆಯ ಆಟದ ಮೈದಾನದ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಬೆಂಗಳೂರಿನ ಆರೋಗ್ಯ ಕ್ಷೇತ್ರ ಬಲಪಡಿಸಲು ಪ್ರತ್ಯೇಕ ಆರೋಗ್ಯ ನೀತಿ: ದಿನೇಶ್ ಗುಂಡೂರಾವ್

393 ಶಾಶ್ವತ ಆಶಾಕಿರಣ ದೃಷ್ಟಿ ಕೇಂದ್ರಗಳಿಗೆ ಚಾಲನೆ

ಬೆಂಗಳೂರು: ಅಂಧ್ಯತ್ವ ಮುಕ್ತ ಕರ್ನಾಟಕ ನಿರ್ಮಾಣಕ್ಕೆ ರಾಜ್ಯ ಸರಕಾರ ಜಾರಿಗೆ ತಂದ ಆಶಾಕಿರಣ ಯೋಜನೆಯಡಿ ರಾಜ್ಯಾದ್ಯಂತ 393 ಶಾಶ್ವತ ದೃಷ್ಟಿ ಕೇಂದ್ರಗಳಿಗೆ ಚಾಲನೆ ನೀಡಲಾಗಿದ್ದು, ಎಲ್ಲ ಜಿಲ್ಲಾಸ್ಪತ್ರೆ, ತಾಲೂಕು ಆಸ್ಪತ್ರೆ ಸೇರಿದಂತೆ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ತಪಾಸಣೆ ನಡೆಸಿ ಉಚಿತ ಕನ್ನಡಕ ಹಾಗೂ ಶಸ್ತಚಿಕಿತ್ಸೆ ಮಾಡಿಕೊಳ್ಳಬಹುದಾಗಿದೆ.

ಬೆಂಗಳೂರಿನ ಗೋವಿಂದರಾಜ ನಗರ ಕ್ಷೇತ್ರದ ಬಿಬಿಎಂಪಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ದೃಷ್ಟಿ ಕೇಂದ್ರ ಸೇರಿದಂತೆ ರಾಜ್ಯದ 393 ಆಶಾಕಿರಣ ದೃಷ್ಟಿ ಕೇಂದ್ರಗಳಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಏಕಕಾಲಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಆಶಾಕಿರಣ ಯೋಜನೆ ಮರುವಿನ್ಯಾಸಗೊಳಿಸಿದ್ದು, ನಿರಂತರವಾಗಿ ಕಣ್ಣಿನ ಆರೋಗ್ಯ ಸೇವೆ ಒದಗಿಸಲಾಗುತ್ತದೆ. ದೃಷ್ಟಿದೋಷ ಹೊಂದಿದವರು ತಪಾಸಣೆ ಮಾಡಿಸಿಕೊಂಡು, ಉಚಿತವಾಗಿ ಕನ್ನಡಕಗಳನ್ನ ಪಡೆಯಬಹುದಾಗಿದೆ. ಅಲ್ಲದೇ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಉಚಿತವಾಗಿ ಕಲ್ಪಿಸಲಾಗುತ್ತಿದೆ. ಕಣ್ಣಿನ ಆರೈಕೆಗೆ ರಾಜ್ಯ ಸರಕಾರ ಜಾರಿಗೆ ತಂದ ಆಶಾಕಿರಣ ಒಂದು ಮಾದರಿ ಯೋಜನೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಶ್ಲಾಘನೆ ವ್ಯಕ್ತಪಡಿಸಿದೆ. ಯೋಜನೆಯನ್ನು ಅಧ್ಯಯನ ಮಾಡಲು ವಿಶ್ವ ಆರೋಗ್ಯ ಸಂಸ್ಥೆ ಕರ್ನಾಟಕಕ್ಕೆ ತಂಡ ಕಳುಹಿಸುತ್ತಿರುವುದು ಕೂಡ ಹೆಮ್ಮೆಯ ಸಂಗತಿಯಾಗಿದೆ ಎಂದರು.

ಬೆಂಗಳೂರಿಗೆ ಪ್ರತ್ಯೇಕ ಆರೋಗ್ಯ ನೀತಿಯ ಅಗತ್ಯತೆ ಇದೆ. ಈ ನಿಟ್ಟಿನಲ್ಲಿ ತಜ್ಞರ ತಂಡ ವರದಿ ಸಿದ್ಧಪಡಿಸುತ್ತಿದ್ದು, ಬೆಂಗಳೂರಿಗೆ ಪ್ರತ್ಯೇಕ ಆರೋಗ್ಯ ನೀತಿಯನ್ನು ಶೀಘ್ರದಲ್ಲಿಯೇ ಜಾರಿಗೆ ತರುವುದಾಗಿ ತಿಳಿಸಿದರು.

ಸಿಎಸ್‌ಆರ್ ಸಹಭಾಗಿತ್ವ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ (ಬಿಬಿಎಂಪಿ) 11 ಆಶಾಕಿರಣ ದೃಷ್ಟಿ ಕೇಂದ್ರಗಳಲ್ಲಿ 5 ಕೇಂದ್ರಗಳು ಸೈಟ್ ಸೇವರ್ ಇಂಡಿಯಾ ಅವರ ಸಿಎಸ್‌ಆರ್ ಸಹಭಾಗಿತ್ವದಲ್ಲಿ ಮಾನವ ಸಂಪನ್ಮೂಲ, ಉಪಕರಣಗಳು ಹಾಗೂ ಕನ್ನಡಕಗ ವಿತರಣೆಗಳ ಸೇವೆಗಳನ್ನು ಒದಗಿಸಲು ವ್ಯವಸ್ಥೆ ಮಾಡಲಾಗಿದೆ. ಒಟ್ಟು 13 ಅಶಾಕಿರಣ ದೃಷ್ಟಿ ಕೇಂದ್ರಗಳು ವಿವಿಧ ಸಿಎಸ್‌ಆರ್ ಪಾಲುದಾರರ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗಿದೆ. ಆಶಾಕಿರಣ ಕಾರ್ಯಕ್ರಮದ ಎರಡು ಹಂತಗಳಲ್ಲಿ 8 ಜಿಲ್ಲೆಗಳಲ್ಲಿ ಒಟ್ಟು 1.40 ಕೋಟಿ ಜನರು ಪ್ರಾಥಮಿಕ ನೇತ್ರ ತಪಾಸಣೆ ಒಳಗಾಗಿದ್ದು, ಇವರಲ್ಲಿ 24.50 ಲಕ್ಷ ಜನರಿಗೆ ಹೆಚ್ಚಿನ ನೇತ್ರ ತಪಾಸಣೆಗೆ ಸಂಬಂಧಿಸಿದಂತೆ ತೊಂದರೆಗಳಿರುವುದು ಪತ್ತೆಯಾಗಿ, ಇವರನ್ನು ದ್ವಿತೀಯ ಹಂತದ ನೇತ್ರ ತಪಾಸಣೆಗೆ ಒಳಪಡಿಸಲಾಗಿರುತ್ತದೆ. 4.3 ಲಕ್ಷ ಜನರಿಗೆ ಉಚಿತ ಕನ್ನಡಕ ವಿತರಿಸಲಾಗಿದ್ದು ಉಳಿದ ಕನ್ನಡಕಗಳನ್ನು ಆಶಾಕಿರಣ ದೃಷ್ಟಿ ಕೇಂದ್ರಗಳಲ್ಲಿ ಇರಿಸಲಾಗಿದೆ. ಹಾಗು ಒಟ್ಟು 1.05 ಲಕ್ಷ ಜನರಿಗೆ ಉಚಿತ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ.

ಬೆಂಗಳೂರಿನ ಗೋವಿಂದರಾಜ ನಗರ ಕ್ಷೇತ್ರದ ಬಿಬಿಎಂಪಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ದೃಷ್ಟಿ ಕೇಂದ್ರ ಸೇರಿದಂತೆ ರಾಜ್ಯದ 393 ಆಶಾಕಿರಣ ದೃಷ್ಟಿ ಕೇಂದ್ರಗಳಿಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದರು. ಸಚಿವ ದಿನೇಶ್ ಗುಂಡೂರಾವ್ ಇದ್ದರು.

ಪಂಚ ಗ್ಯಾರಂಟಿಗಳ ಜತೆಗೆ ದೃಷ್ಟಿ ಗ್ಯಾರಂಟಿ ಕೊಡುಗೆ

ಜನರ ಕಣ್ಣು, ದೃಷ್ಟಿಗೆ ತೊಂದರೆ ಬಂದರೆ ಚಿಕಿತ್ಸೆ ನೀಡುವ ದೃಷ್ಟಿ ಗ್ಯಾರಂಟಿಯನ್ನು ಆಶಾಕಿರಣ ಯೋಜನೆ ಮೂಲಕ ಕಾಂಗ್ರೆಸ್ ಸರಕಾರ ನೀಡುತ್ತಿದೆ ಎಂದು ಡಿಸಿಎಂ ಡಿ. ಕೆ.ಶಿವಕುಮಾರ್ ಅಭಿಪ್ರಾಯಪಟ್ಟರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದೆಲ್ಲೆಡೆ ಆಶಾಕಿರಣ ದೃಷ್ಟಿ ಕೇಂದ್ರ ಇದ್ದು ಉಚಿತವಾಗಿ ಕನ್ನಡಕ ನೀಡಲಾಗುತ್ತಿದೆ. ಜನರಿಗೆ ಇದರಿಂದ ಕನ್ನಡಕ ಸೇರಿದಂತೆ ಚಿಕಿತ್ಸೆಯ ಸಾವಿರಾರು ಮೊತ್ತ ಹಣ ಉಳಿಯುತ್ತದೆ ಹಿಂದಿನಿಂದಲು ದೇಶ ಹಾಗೂ ರಾಜ್ಯದಲ್ಲಿ ಉತ್ತಮ ಆರೋಗ್ಯ ವ್ಯವಸ್ಥೆಗೆ ಬುನಾದಿ ಹಾಕಿದ್ದು ಕಾಂಗ್ರೆಸ್ ಸರಕಾರ. ಕರ್ನಾಟಕದಲ್ಲಿ 70 ವೈದ್ಯಕೀಯ ಕಾಲೇಜುಗಳಿವೆ. ಅತ್ಯಂತ ಹೆಚ್ಚು ವೈದ್ಯರನ್ನು ತಯಾರು ಮಾಡುತ್ತಿರುವ ಪಟ್ಟಿಯಲ್ಲಿ ಕರ್ನಾಟಕವಿದ್ದು. ಇಲ್ಲಿ ಕಲಿತವರು ಹೊರ ದೇಶಗಳಿಗೆ ತೆರಳಿ ದೇಶಕ್ಕೆ ಉತ್ತಮ ಹೆಸರು ತರುತ್ತಿದ್ದಾರೆ ಎಂದರು.

ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ ಯಶಸ್ವಿನಿ ಯೋಜನೆ ಮೂಲಕ ರೈತರ, ಬಡವರ ಆರೋಗ್ಯ ಕಾಳಜಿಗೆ ಮುನ್ನುಡಿ ಬರೆದಿದ್ದು ನಮ್ಮ ಸರಕಾರ. ಇದನ್ನು ನೋಡಿದ ಕೇಂದ್ರ ಸರಕಾರ ಆರೋಗ್ಯ ಯೋಜನೆಗಳನ್ನು ಪ್ರಾರಂಭ ಮಾಡಿತು. ನಮ್ಮದು ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿರುವ ಗ್ಯಾರಂಟಿ ಸರಕಾರ. ಐದು ಗ್ಯಾರಂಟಿಗಳ ಜತೆಗೆ ಭೂಮಿ ಗ್ಯಾರಂಟಿ ಸರಕಾರಕ್ಕೆ ಎರಡು ವರ್ಷ ತುಂಬಿದ ಘಳಿಗೆಯಲ್ಲಿ ನಮ್ಮ ಜನತೆಗೆ ನೀಡಿದ್ದೇವೆ.
ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಆಗಸ್ಟ್‌ನಲ್ಲಿ ಹಳದಿ ಮಾರ್ಗ ಆರಂಭ

ಬೆಂಗಳೂರು: ಬಹುನಿರೀಕ್ಷಿತ ನಮ್ಮ ಮೆಟ್ರೋದ ಹಳದಿ ಮಾರ್ಗದಲ್ಲಿ ಆಗಸ್ಟ್ ಆರಂಭದಲ್ಲಿ ಸಂಚಾರ ಆರಂಭವಾಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. 19.15-ಕಿಮೀ ಉದ್ದದ ಈ ಮಾರ್ಗವು ಬೊಮ್ಮಸಂದ್ರದಿಂದ ಜಯದೇವ ಆಸ್ಪತ್ರೆ, ಸಿಲ್ಕ್ ಬೋರ್ಡ್ ಜಂಕ್ಷನ್ ಮತ್ತು ಎಲೆಕ್ಟ್ರಾನಿಕ್ಸ್ ಸಿಟಿ ಮೂಲಕ ಆರ್‌ವಿ ರಸ್ತೆಯನ್ನು ಸಂಪರ್ಕಿಸುತ್ತದೆ. ರೈಲುಗಳ ಕೊರತೆಯಿಂದಾಗಿ ಇದರ ಉದ್ಘಾಟನೆ ವಿಳಂಬವಾಗಿತ್ತು. ಈ ಮಾರ್ಗದಲ್ಲಿ ಚಾಲಕರಹಿತ ರೈಲುಗಳ ಕಾರ್ಯಾಚರಣೆಗೆ ಸಿದ್ಧತೆ ನಡೆಸಿದ್ದು, ಸಿಗ್ನಲಿಂಗ್ ಪರೀಕ್ಷೆ ಮೌಲ್ಯೀಕರಿಸಲು ಸ್ವತಂತ್ರ ಸುರಕ್ಷತಾ ಮೌಲ್ಯಮಾಪನ ಪ್ರಮಾಣೀಕರಣದ ಅಗತ್ಯವಿದೆ.

ಈ ಮಾರ್ಗದ ಸಿಗ್ನಲಿಂಗ್ ಪರೀಕ್ಷೆ ಗುತ್ತಿಗೆದಾರರಾಗಿರುವ ಸೀಮೆನ್ಸ್ ಇಂಡಿಯಾ ಲಿಮಿಟೆಡ್ ಪ್ರಮಾಣೀಕರಣಕ್ಕಾಗಿ ಜುಲೈ 7 ಅಥವಾ 8 ರೊಳಗೆ ಮೌಲ್ಯಮಾಪಕರಿಗೆ ಕರಡು ವರದಿಯನ್ನು ಸಲ್ಲಿಸುವ ಸಾಧ್ಯತೆಯಿದೆ. ನಂತರ ಶಾಸನಬದ್ಧ ಸುರಕ್ಷತಾ ತಪಾಸಣೆ ನಡೆಸಲು ಮೆಟ್ರೋ ರೈಲ್ವೆ ಸುರಕ್ಷತೆ (ದಕ್ಷಿಣ ವೃತ್ತ) ಆಯುಕ್ತರನ್ನು ಸಂಪರ್ಕಿಸುತ್ತದೆ. ಜುಲೈ 15 ರ ನಂತರ ಸುರಕ್ಷತಾ ತಪಾಸಣೆ ನಡೆಯಲಿದೆ. ಇದು ಮೂರರಿಂದ ನಾಲ್ಕು ದಿನಗಳನ್ನು ತೆಗೆದುಕೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

16 ನಿಲ್ದಾಣಗಳಲ್ಲಿ ಹಳಿ ತಪಾಸಣೆ

ಎಲ್ಲಾ 16 ನಿಲ್ದಾಣಗಳಲ್ಲಿ ಹಳಿ ತಪಾಸಣೆ ಸೇರಿದಂತೆ ವಿವಿಧ ಪರೀಕ್ಷೆ ನಡೆಸಲಾಗುತ್ತದೆ. ಬೈಯಪ್ಪನಹಳ್ಳಿ ಡಿಪೋದಲ್ಲಿನ ಆಪರೇಷನಲ್ ಕಂಟ್ರೋಲ್ ಸೆಂಟರ್‌ಗೆ ಭೇಟಿ ನೀಡಲು ಒಂದು ದಿನವನ್ನು ಮೀಸಲಿಡಲಾಗುವುದು ಎಂದು ಅಧಿಕಾರಿ ತಿಳಿಸಿದ್ದಾರೆ. ಜುಲೈ ಅಂತ್ಯದೊಳಗೆ ಎಲ್ಲಾ ಪ್ರಕ್ರಿಯೆ ಪೂರ್ಣಗೊಂಡು ಆಗಸ್ಟ್ ಮೊದಲ ವಾರದಲ್ಲಿ ಸಂಚಾರ ಆರಂಭವಾಗಲಿದೆ ಎಂದು ನಮ್ಮ ಮೆಟ್ರೋ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ್ ರಾವ್ ತಿಳಿಸಿದ್ದಾರೆ.

ನಾಡಿನಾದ್ಯಂತ ಜನಮನ್ನಣೆ ಗಳಿಸುತ್ತಿರುವ
ಹೊಸ ಪತ್ರಿಕೆ 'ಪ್ರವಾಸಿ ಪ್ರಪಂಚ'
ಹೊಸ ಪ್ರತಿಭೆಗಳನ್ನು ಹುಡುಕುತ್ತಿದೆ!
ಪ್ರವಾಸ ಪತ್ರಿಕೋದ್ಯಮದಲ್ಲಿ ಆಸಕ್ತ ಅಭ್ಯರ್ಥಿಗಳಿಗೆ ಆದ್ಯತೆ.
ಎಲ್ಲ ಜಿಲ್ಲೆಗಳಲ್ಲೂ
ವರದಿಗಾರರು
ಬೇಕಾಗಿದ್ದಾರೆ
ಆಸಕ್ತರು ಸಂಪರ್ಕಿಸಿ
hr@vishwavani.news
+91 7411 516 824
ಪ್ರವಾಸಿ ಪ್ರಪಂಚ
ವಿಹಾರವೇ ವಿಶ್ವ!

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಎಚ್ಚರಿಕೆ ಸೂಚನೆಗೆ ತಿದ್ದುಪಡಿ

ಈ ಪತ್ರಿಕೆಯಲ್ಲಿ 27.06.2025 ರಂದು ಪ್ರಕಟವಾದ KT&G ಕಾರ್ಪೋರೇಷನ್ ನ ಎಚ್ಚರಿಕೆ ಸೂಚನೆಗೆ ಸಂಬಂಧಿಸಿದಂತೆ ಸೂಚನೆಯ ಕೊನೆಯ ಪ್ಯಾರಾಗ್ರಾಫ್‌ನ ಎರಡನೆ ಲೈನ್‌ನಲ್ಲಿ ಕೇದಾರ ಎಂದು ಹೆಸರಿಸಲಾದ ಇ-ಮೇಲ್ ವಿಳಾಸ **goutam.mootha@kedaratrading.com** ಎಂದು ಪ್ರಕಟವಾಗಿದ್ದು, ಅದನ್ನು **info@kedaratrading.com** ಎಂದು ಓದಿಕೊಳ್ಳುವುದು.

KT&G ಕಾರ್ಪೊರೇಷನ್
ಅಖಿಲೇಶ್ ಕುಮಾರ್ ರೈ ಮೂಲಕ
ಎಜೆಡ್‌ಬಿ & ಪಾರ್ಟ್‌ನರ್ಸ್, ವಕೀಲರು & ಸಾಲಿಸಿಟರ್‌ಗಳು
ಪ್ಲಾಟ್ ಸಂಖ್ಯೆ. ಎ-8, ಸೆಕ್ಟರ್-4, ನೋಯ್ಡಾ 201301
ಇ-ಮೇಲ್: akhileshkumar.rai@azbpartners.com

ಅಪಘಾತ: ಮುಖ್ಯ ಪೇದೆ ಸಾವು

ದಾವಣಗೆರೆ: ಟ್ರ್ಯಾಕ್ಟರ್ ಮತ್ತು ಬೈಕ್ ಡಿಕ್ಕಿಯಾದ ಪರಿಣಾಮ ಬೈಕ್‌ನಲ್ಲಿ ಚಲಿಸುತ್ತಿದ್ದ ಪೊಲೀಸ್ ಹೆಡ್ ಕಾನ್‌ಸ್ಟೇಬಲ್ ಮೃತಪಟ್ಟ ಘಟನೆ ನಗರದ ಸಂಗೊಳ್ಳಿ ರಾಯಣ್ಣ ಫ್ಲೈ ಓವರ್ ಮೇಲೆ ಗುರುವಾರ ನಡೆದಿದೆ. ಎ. ಗುರುಮೂರ್ತಿ(49) ಅಪಘಾತದಲ್ಲಿ ಮೃತಪಟ್ಟ ಹೆಡ್ ಕಾನ್‌ಸ್ಟೇಬಲ್. ಎಸ್ಪಿ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಮಲೆನಾಡು, ಕರಾವಳಿ ಮಳೆಗೆ ತತ್ತರ

← ಮೊದಲಪುಟದಿಂದ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕು ಹಾಗೂ ಕುಕ್ಕೆ ಸುಬ್ರಹ್ಮಣ್ಯ ಪರಿಸರದಲ್ಲಿ ಧಾರಾಕಾರ ಮಳೆ ಮುಂದುವರಿದಿದ್ದು, ರಾತ್ರಿ ವೇಳೆ ಸುಬ್ರಹ್ಮಣ್ಯದಲ್ಲಿ ಕುಮಾರಧಾರ ಸ್ನಾನಘಟ್ಟ ಮುಳುಗಡೆಯಾಗಿತ್ತು. ಕುಕ್ಕೆ ಸುಬ್ರಹ್ಮಣ್ಯಕ್ಕೆ ಬಂದ ಯಾತ್ರಿಕರು ಮಳೆ ಅಬ್ಬರದ ನಡುವೆಯೇ ದರ್ಶನ ಪಡೆಯಬೇಕಾಯಿತು.

ಕೊಡಗಿನಲ್ಲಿ ವರುಣಾರ್ಭಟದಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ನಿರಂತರ ಮಳೆಯಿಂದ ಜನರಲ್ಲಿ ಭೂ ಕುಸಿತದ ಭೀತಿ ಹೆಚ್ಚಾಗಿದೆ. ಚಿಕ್ಕಮಗಳೂರಿನಲ್ಲಿ ವ್ಯಾಪಕ ಮಳೆಯಾಗುತ್ತಿದ್ದು, ಚಾರ್ಮಾಡಿ ಘಾಟ್‌ನಲ್ಲಿ ಗುಡ್ಡ ಕುಸಿತದ ಭೀತಿ ಎದುರಾಗಿದೆ. ಜಿಲ್ಲೆಯ ಕೆಲ ತಾಲೂಕುಗಳ ಶಾಲೆಗಳಿಗೆ ಶುಕ್ರವಾರವೂ ರಜೆ ನೀಡಲಾಗಿದೆ. ಶಿವಮೊಗ್ಗದಲ್ಲೂ ಒಂದು ವಾರದಿಂದ ಮಂಕಾಗಿದ್ದ ಮುಂಗಾರು ಮತ್ತೆ ಚುರುಕಾಗಿದೆ. ತೀರ್ಥಹಳ್ಳಿ, ಹೊಸನಗರ ಹಾಗೂ ಸಾಗರ ತಾಲೂಕುಗಳಲ್ಲಿ ಗುರುವಾರ ಬೆಳಗ್ಗೆ ವ್ಯಾಪಕ ಮಳೆಯಾಗಿದೆ. ಕೇರಳ ಭಾಗದಲ್ಲಿ ಭಾರಿ ಮಳೆಯಾಗುತ್ತಿರುವ ಪರಿಣಾಮ, ಕಪಿಲೆ ತುಂಬಿ ಹರಿಯುತ್ತಿದ್ದು ಮೈಸೂರು ಜಿಲ್ಲೆಯ ನಂಜನಗೂಡು ಸೇರಿದಂತೆ ಹಲವೆಡೆ ನೆರೆ ಭೀತಿ ತಲೆದೋರಿದೆ.

ಲೋಕಾ ಬಲೆಗೆ ಬಿದ್ದ ಗ್ರಾಮ ಲೆಕ್ಕಾಧಿಕಾರಿ

ಗುಡಿಬಂಡೆ: ರೈತರಿಂದ ಪೋಡಿ ಮಾಡಲು ಹಣ ಪಡೆಯುತ್ತಿದ್ದಾಗ ಗ್ರಾಮ ಲೆಕ್ಕಾಧಿಕಾರಿ ನಾಗರಾಜ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಬೆಣ್ಣೆಪರ್ತಿ ಗ್ರಾಮದ ರೈತ ಮಂಜುನಾಥ್ ಎಂಬ ರೈತ ತಮ್ಮ 2.20 ಗುಂಟೆ ಜಮೀನು ಸ್ವತ್ತನ್ನು ಪೋಡಿ ಮತ್ತು ದುರಸ್ತಿ ಮಾಡಿಸಲು ಹಣಕ್ಕೆ ಬೇಡಿಕೆ ಇಟ್ಟ ಕಾರಣ, ಅದರ ಸಲುವಾಗಿ ನಗದು ಮೂಲಕ 55 ಸಾವಿರ ರು. ತಮ್ಮ ಕಚೇರಿಯಲ್ಲಿ ಪಡೆಯುತ್ತಿದ್ದಾಗ ಸಿಕ್ಕಿಬಿದ್ದಿದ್ದಾರೆ.

ಮುಖ್ಯಮಂತ್ರಿ ಸಮಾಧಾನಪಡಿಸಿದ ಬಳಿಕ ಗುರುವಾರ ಕರ್ತವ್ಯಕ್ಕೆ ಹಾಜರು

ಕರ್ತವ್ಯಕ್ಕೆ ಹಾಜರಾದ ಎಸ್ಪಿ ಭರಮನಿ

ಬೆಂಗಳೂರು/ ಧಾರವಾಡ: ಸ್ವಯಂ ನಿವೃತ್ತಿಗೆ ಕೋರಿಕೆ ಸಲ್ಲಿಸಿದ್ದ ಧಾರವಾಡ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿ. ಭರಮನಿ ಅವರು ಸಿಎಂ ಸಮಾಧಾನಪಡಿಸಿದ ಬಳಿಕ ಗುರುವಾರ ಕರ್ತವ್ಯಕ್ಕೆ ಹಾಜರಾದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ರುವ ಅವರ ಕಚೇರಿಗೆ ಆಗಮಿಸಿದ ಎಎಸ್ಪಿ ಎನ್.ವಿ.ಭರಮನಿ, ಎಂದಿನಂತೆ ಕರ್ತವ್ಯ ಹಾಜರಾದರು. ಎಸ್ಪಿ ಡಾ. ಗೋಪಾಲ ಬ್ಯಾಕೋಡ ಅವರೊಂದಿಗೆ ಚರ್ಚಿಸಿದ ಬಳಿಕ ಕಚೇರಿಗೆ ಆಗಮಿಸಿದ ಅವರು, ಸುದ್ದಿಗಾರರೊಂದಿಗೆ ಮಾತನಾಡಿ, ನನ್ನ ಭಾವನೆಗಳನ್ನು ನನ್ನ ಹಿರಿಯ ಅಧಿಕಾರಿಗಳಿಗೆ ತಿಳಿಸಿ ರುವೆ. ಹಿರಿಯ ಅಧಿಕಾರಿಗಳು ಕೂಡ ನನ್ನೊಂದಿಗೆ ಮಾತನಾಡಿದ್ದಾರೆ. ನಾನು ಶಿಸ್ತಿನ ಇಲಾಖೆಯಲ್ಲಿ ದ್ದೇನೆ. ಸಿಎಂ ಹಾಗೂ ಗೃಹ ಸಚಿವರು ಮಾತನಾಡಿ ದ್ದಾರೆ ಎಂದರು.

ಉದ್ದೇಶಪೂರ್ವಕವಾಗಿ ಆ ರೀತಿ ಮಾಡಿಲ್ಲ: ಸಿಎಂ: ಭರಮನಿ ಅವರಿಗೆ ದೂರವಾಣಿ ಕರೆ ಮಾಡಿ ಸಮಾಧಾನಪಡಿಸಿದ ಸಿಎಂ, ಸ್ವಯಂ ನಿವೃತ್ತಿ ನಿರ್ಧಾರ ಬೇಡ. ಅದನ್ನು ವಾಪಸ್ ಪಡೆಯಿರಿ. ನಾನು ಅಂದು ಉದ್ದೇಶಪೂರ್ವಕವಾಗಿ ಆ ರೀತಿ ಮಾಡಿಲ್ಲ. ನಿಮಗೆ ಅಗೌರವ ತೋರಬೇಕು ಎಂದು ಮಾಡಿದ್ದಲ್ಲ. ಅಪಮಾನ ಮಾಡುವ ಉದ್ದೇಶ ನನಗಿರಲಿಲ್ಲ ಎಂದು ಮನವರಿಕೆ ಮಾಡಿದ್ದಾರೆ.

ಏನಿದು ಪ್ರಕರಣ

ಏ.28ರಂದು ಕೇಂದ್ರ ಸರಕಾರದ ಬೆಲೆ ಏರಿಕೆ ನೀತಿ ವಿರೋಧಿಸಿ ಬೆಳಗಾವಿಯಲ್ಲಿ ನಡೆದಿದ್ದ ಕಾಂಗ್ರೆಸ್ ಸಮಾವೇಶದಲ್ಲಿ ಭದ್ರತಾ ವ್ಯವಸ್ಥೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನಗೊಂಡು, ವೇದಿಕೆ ಯಲ್ಲೇ ಧಾರವಾಡ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿ.ಭರಮನಿ ಅವರಿಗೆ ಕೈ ಎತ್ತಿ ರೇಗಿದ್ದರು. ಸ್ವಯಂ ನಿವೃತ್ತಿ ಕೋರಿ ಗೃಹ ಇಲಾಖೆಗೆ ಒಂದು ತಿಂಗಳ ಹಿಂದೆ ಭರಮನಿ ಅವರು ಮನವಿ ಸಲ್ಲಿಸಿದ್ದರು.

ಬೈಕ್ ಅಪಘಾತ: ವಚನಾನಂದ ಶ್ರೀ ಸಹೋದರ ಸಾವು

ಅಥಣಿ: ಯೋಗ ಗುರು, ಹರಿಹರ ಪಂಚಮಸಾಲಿ ಜಗದ್ಗುರು ಪೀಠದ ವಚನಾನಂದ ಸ್ವಾಮೀಜಿ ಅವರ ಸಹೋದರ ಅಶೋಕ ಗೌರಗೊಂಡ (42) ಬುಧವಾರ ತಡರಾತ್ರಿ ಬೈಕ್ ಅಪಘಾತದಲ್ಲಿ ನಿಧನ ಹೊಂದಿದ್ದಾರೆ. ಅಥಣಿ ತಾಲೂಕಿನ ತಾಂವಶಿ ಮೂಲದ ವರಾದ ಅಶೋಕ ದುಂಡಪ್ಪ ಗೌರಗೊಂಡ ಅವರು ಬುಧವಾರ ತಡರಾತ್ರಿ 11 ಗಂಟೆಯ ಸುಮಾರಿಗೆ ತಾಂವಶಿ ಗ್ರಾಮದಿಂದ ಅಥಣಿ ಪಟ್ಟಣಕ್ಕೆ ಬೈಕ್ ಚಲಾಯಿಸಿಕೊಂಡು ಬರುತ್ತಿದ್ದಾಗ ನಾಯಿ ಯೊಂದು ಅಡ್ಡ ಬಂದ ಪರಿಣಾಮ ಬೈಕ್ ಅಪಘಾತ ಸಂಭವಿಸಿ ಮುಖ ಮತ್ತು ತಲೆಗೆ ಭಾರಿ ಪೆಟ್ಟಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಮೃತರಿಗೆ ತಾಯಿ, ಹೆಂಡತಿ, ಮೂರು ಜನ ಮಕ್ಕಳಿದ್ದು, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಶೋಕ ಗೌರಗೊಂಡ ಅವರು ಅಥಣಿ ಪಟ್ಟಣದಲ್ಲಿಯೇ ವಾಸವಾಗಿದ್ದು, ರಿಯಲ್ ಎಸ್ಟೇಟ್ ಉದ್ಯೋಗದಲ್ಲಿ ತಮ್ಮನ್ನ ತೊಡಗಿಸಿಕೊಂಡು ಅನೇಕ ಸಾಮಾಜಿಕ ಮತ್ತು ಕನ್ನಡಪರ ಕಾರ್ಯಕ್ರಮಗಳಲ್ಲಿ, ಹೋರಾಟದಲ್ಲಿ ಭಾಗವಹಿಸುವ ಮೂಲಕ ಅಪಾರ ಅಭಿಮಾನಿಗಳನ್ನು ಹೊಂದಿದ್ದರು. ಮೃತ ಅಶೋಕ ಅವರ ಅಂತ್ಯಕ್ರಿಯೆ ಸ್ವಗ್ರಾಮವಾದ ತಾವಂಶಿ ಗ್ರಾಮದಲ್ಲಿ ಗುರುವಾರ ನೆರವೇರಿತು.

ಚಾಮುಂಡಿ ಬೆಟ್ಟದಲ್ಲಿ ವಸ್ತ್ರ ಸಂಹಿತೆ ಜಾರಿ ಆಗಲಿ

ಮೈಸೂರು: ಚಾಮುಂಡಿ ಬೆಟ್ಟ ದಲ್ಲಿ ವಸ್ತ್ರ ಸಂಹಿತೆ ಜಾರಿ ವಿಚಾರದ ಕೂಗಿಗೆ ಸಂಸದ ಯದುವೀರ್ ಒಡೆಯರ್ ಧ್ವನಿಗೂಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ವಸ್ತ್ರ ಸಂಹಿತೆ ಪರವಾಗಿ ನಾನು ಯಾವಾಗಲೂ ಇದ್ದೇನೆ. ಧಾರ್ಮಿಕ ಕ್ಷೇತ್ರಗಳಿಗೆ ಬಂದಾಗ ಜನರು ಧಾರ್ಮಿಕ ಭಾವನೆಯಿಂದಲೇ ಬರಬೇಕು. ಅದು ನಮ್ಮ ಸಂಸ್ಕೃತಿಯ ಭಾಗವಾಗಿದೆ. ಚಾಮುಂಡಿ ಬೆಟ್ಟದಲ್ಲೂ ವಸ್ತ್ರ ಸಂಹಿತೆ ಜಾರಿಯಾಗಬೇಕು ಎಂದು ಆಗ್ರಹಿಸಿದ್ದಾರೆ. ತಿರುಪತಿ ಮಾದರಿ ಚಾಮುಂಡಿ ಬೆಟ್ಟದಲ್ಲೂ ಮೊಬೈಲ್ ನಿರ್ಬಂಧ ಮಾಡಬೇಕು ಎಂದು ತಿಳಿಸಿದ್ದಾರೆ.

ಬೆಳಗ್ಗೆ ಮದುವೆ, ರಾತ್ರಿ ನೇಣಿಗೆ ಶರಣಾದ ಯುವಕ

ಕೋಲಾರ: ಬೆಳಗ್ಗೆ ಮದುವೆಯಾಗಿದ್ದ ವ್ಯಕ್ತಿ ಅದೇ ದಿನ ರಾತ್ರಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕೋಲಾರದಲ್ಲಿ ನಡೆದಿದೆ. ಬಂಗಾರಪೇಟೆ ತಾಲೂಕಿನ ನಾಯಕರ ಹಳ್ಳಿ ಮೂಲದ ಹರೀಶ್ ಬಾಬು (33) ನೇಣಿಗೆ ಶರಣಾಗಿದ್ದು, ಕಳೆದ 8 ವರ್ಷಗಳಿಂದ ಕೋಲಾರ ಜಿಲ್ಲಾಸ್ಪತ್ರೆಯಲ್ಲಿ ಡೇಟಾ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದರು. ಕಳೆದ ಮೂರು ದಿನಗಳಿಂದ ರಜೆಯಲ್ಲಿದ್ದ ಹರೀಶ್ ಬಾಬು, ಬುಧವಾರ ಬೆಳಗ್ಗೆ ರಿಜಿಸ್ಟಾರ್ ಮ್ಯಾರೇಜ್ ಆಗಿದ್ದರು. ಆದರೆ ಅದೇ ದಿನ ರಾತ್ರಿ 11:30ರ ಸುಮಾರಿಗೆ ಆಸ್ಪತ್ರೆಯ ಇಎನ್‌ಟಿ ವಿಭಾಗದ ಕೊಠಡಿಯ ಕಿಟಕಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹೀಗಾಗಿ ಹಲವು ಅನುಮಾನಗಳಿಗೆ ದಾರಿ ಮಾಡಿಕೊಟ್ಟಿದೆ. ಮೃತ ಹರೀಶ್ ಬುಧವಾರ ರಾತ್ರಿ 11:15ರ ಸುಮಾರಿಗೆ ಆಸ್ಪತ್ರೆಯೊಳಗೆ ಹೋಗಿರುವುದು ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಮದ್ಯ ಸೇವನೆ ಮಾಡಿ ಆತ್ಮಹತ್ಯೆಗೆ ಶರಣಾಗಿದ್ದಾರೆ ಎನ್ನಲಾಗಿದೆ. ಸದ್ಯ ಕೋಲಾರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ
ದೊಡ್ಡಕೆರೆ ಮೈದಾನ, ಇಂದಿರಾನಗರ, ಮೈಸೂರು-570010.
ದೂರವಾಣಿ (ಕಛೇರಿ): 0821-2523626, ಇಮೇಲ್: exhibitionauthority@gmail.com

ಸಂಖ್ಯೆ:ಕವಪ್ರಾ/ಮುಕಾನಿ/01/2025-26 ದಿನಾಂಕ: 03.07.2025

ಪತ್ರಿಕಾ ಪ್ರಕಟಣೆ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ದಿನಾಂಕ: 22.09.2025 ರಿಂದ 20.12.2025 ರವರಗೆ ಒಟ್ಟು 90 ದಿನಗಳು 2025-ದಸರಾ ವಸ್ತುಪ್ರದರ್ಶನ ಆಯೋಜಿಸಲಾಗುತ್ತಿದ್ದು ಈ ಅವಧಿಯಲ್ಲಿ ವಾಣಿಜ್ಯ ಮಳಿಗೆ/ ಆಹಾರ ಮಳಿಗೆಗಳು / ಖಾಸಗಿ ಕಂಪನಿಗಳಿಂದ ಹಾಗೂ ಇನ್ನಿತರೆ ಸಂಸ್ಥೆಗಳಿಂದ ಜಾಹಿರಾತುಗಳನ್ನು ತಾವೇ ಪಡೆದು ಪ್ರಾಧಿಕಾರದ ಆವರಣದಲ್ಲಿ ತಮ್ಮದೇ 04 ಎಲ್.ಇ.ಡಿ ಸ್ಕ್ರೀನ್‌ಗಳನ್ನು ಅಳವಡಿಸಿಕೊಂಡು ಜಾಹಿರಾತುಗಳನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗಿದ್ದು ಈ ಸಂಬಂಧ ತಮ್ಮ ಅಂದಾಜು ದರವನ್ನು ನಮೂದಿಸಿ **ದಿನಾಂಕ:11.07.2025** ರಂದು ಸಂಜೆ: 04:00 ಗಂಟೆಯವರೆಗೆ ಪ್ರಾಧಿಕಾರಕ್ಕೆ ಸಲ್ಲಿಸಬಹುದಾಗಿದೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಿ ಅರ್ಜಿಯನ್ನು ಮತ್ತು ನಮೂನೆಯನ್ನು ಪಡೆಯಬಹುದು.

ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ, ಮೈಸೂರು.
DIPR/MYS/KAVITA/567/2025-26

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ3:ಇ.ಟೆಂಡರ್:05:2025-26 ದಿನಾಂಕ:01.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮುಖಾಂತರ)

2025-26 ನೇ ಪಾಲಿಕೆ ಸಾಮಾನ್ಯ ನಿಧಿ-02 ಸಂಖ್ಯೆಯ ಅಲ್ಪಾವದಿ ಕಾಮಗಾರಿ,01 ಸಂಖ್ಯೆಯ ವಾರ್ಷಿಕ ನಿರ್ವಹಣಾ ಅಲ್ಪಾವದಿ ಟೆಂಡರ್ ಮತ್ತು 01 ಸಂಖ್ಯೆಯ ಅಲ್ಪಾವದಿ ಸೇವಾ ಟೆಂಡರ್, 2021-22 ನೇ ಸಾಲಿನ 15ನೇ ಹಣಕಾಸು ಯೋಜನೆ ಆಯೋಗದ ಮಿಲಿಯನ್ ಪ್ಲಸ್ ಸಿಟಿ ನಿಧಿ- 03 ಸಂಖ್ಯೆಯ ಅಲ್ಪಾವದಿ ಕಾಮಗಾರಿ, 2024-25 ನೇ ಸಾಲಿನ ಎನ್.ಸಿ.ಎ.ಪಿ ಅನುದಾನ/ ಪಾಲಿಕೆ ಸಾಮಾನ್ಯ ನಿಧಿ- 01 ಸಂಖ್ಯೆಯ ಅಲ್ಪಾವದಿ ಕಾಮಗಾರಿ, 2025-26ನೇ ಶೇಕಡಾ 7.25ರ ಪಾಲಿಕೆ ಸಾಮಾನ್ಯ ನಿಧಿ - 01 ಸಂಖ್ಯೆಯ ಕಾಮಗಾರಿ ಟೆಂಡರ್, 2025-26ನೇ ಸಾಲಿನ ಶೇಕಡ 5ರ ಸಾಮಾನ್ಯ ನಿದಿ- 02 ಸಂಖ್ಯೆಯ ಸರಬರಾಜು ಟೆಂಡರ್, ಎಸ್.ಎಫ್.ಸಿ ಶೇ.5 2014-15ನೇ ಮತ್ತು ಅದಕ್ಕಿಂತ ಹಿಂದಿನ ಸಾಲುಗಳಲ್ಲಿನ ಉಳಿಕೆ- 01 ಸಂಖ್ಯೆಯ ಸರಬರಾಜು ಟೆಂಡರ್, 2024-25ನೇ ಸಾಲಿನ ಶೇ 24.10 ಎಸ್.ಸಿ.ಎಸ್.ಪಿ ಸಾಮಾನ್ಯ ನಿದಿ- 01 ಸಂಖ್ಯೆಯ ಸರಬರಾಜು, 2025-26 ನೇ ಪಾಲಿಕೆ ಸಾಮಾನ್ಯ ನಿಧಿ-01 ಸಂಖ್ಯೆಯ ಅಲ್ಪಾವದಿ ಮರು ಟೆಂಡರ್ ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ದತಿಯಲ್ಲಿ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು(ವಿದ್ಯುತ್/ ನೀರುಸರಬರಾಜು) ರವರು ಅಲ್ಪಾವದಿ ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು/ ಏಜನ್ಸಿದಾರರು/ ಸರಬರಾಜುದಾರರು ಕೆಪಿಪಿಪಿ ಪೋರ್ಟಲ್ ವೆಬ್ ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮಹಾನಗರ ಪಾಲಿಕೆಯ ಕಛೇರಿಯ ವಿದ್ಯುತ್ ಶಾಖೆಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಮಹಾನಗರ ಪಾಲಿಕೆಯ ಸಹಾಯಕ ದೂರವಾಣಿ ಸಂಖ್ಯೆ: 08192 234444 ರಿಂದ ಮಾಹಿತಿ ಪಡೆಯಬಹುದು.

ಸೂಚನೆ : 1) ಈ ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿದ ಅಂದಾಜು ಮೊತ್ತ ಹಾಗೂ ಟೆಂಡರ್‌ಗಿಟ್ಟ ಮೊತ್ತ ದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತವು ಅಂತಿಮವಾಗಿರುತ್ತದೆ. 2) ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರತ್ಯೇಕ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಅಲ್ಪಾವಧಿ ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ : 10.07.2025 ಸಮಯ: 17.00 ಅಲ್ಪಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 11.07.2025 ಸಮಯ 17.00 ಅಲ್ಪಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 14.07.2025 ಸಮಯ : 11.00 ನಂತರ

ವಾಸಾಇ/ದಾವಣಗೆರೆ/173/ ಕೆಎಸ್‌ಎಂಸಿಎ/2025-26
ಸಹಿ/-ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ದಾವಣಗೆರೆ

ಜಂಟಿ ನಿರ್ದೇಶಕರ ಕಛೇರಿ ಸಮಾಜ ಕಲ್ಯಾಣ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ
ಇ-mail: jointdirector.kolar@gmail.com, ಕಛೇರಿ: 08152-240073, ಮೊ:9008059912
ಸಂ:ಜಂನಿ/ಸಕಇ/ಕೋ/ಕ.ವ.ಶಿ.ಸ.ಸಂ..ಹೊ.ಗು/ಸಿಬ್ಬಂದಿ/ಸಿಆರ್-08/2025-26
ದಿನಾಂಕ:21.06.2025

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕೋಲಾರ ಜಿಲ್ಲೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ / ಡಾ॥ ಬಿ.ಆರ್.ಅಂಬೇಡ್ಕರ್ / ಏಕಲವ್ಯ ವಸತಿ ಶಾಲೆಗಳು, ಖಾಲಿ ಇರುವ ಸಿಬ್ಬಂದಿಗಳನ್ನು ಮಾನವ ಸಂಪನ್ಮೂಲ ಸಂಸ್ಥೆಯಿದ ಸೇವೆಯನ್ನು ಒದಗಿಸುವ ಬಗ್ಗೆ ಕರ್ನಾಟಕ ಪಾರದರ್ಶಕ ಅಧಿನಿಯಮ -1999 ಮತ್ತು ನಿಯಮಗಳು 2000 **(updated upto 22-12-2020)** ರನ್ವಯ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಕರೆಯಲಾಗಿದೆ. ನಿಗಧಿತ ಟೆಂಡರ್ ಫಾರಂನ್ನು **https://eproc.karnataka.gov.in**ನಲ್ಲಿ ಪಡೆಯಬಹುದಾಗಿದೆ. (**ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ) ಬದಲಾವಣೆಗೆ ಒಳಪಟ್ಟಿರುತ್ತದೆ.**)

ಕ್ರ. ಸಂ	ಹೊರಸಂಪನ್ಮೂಲ ಏಜೆನ್ಸಿಯಿಂದ ಒದಗಿಸಬೇಕಾದ ಹುದ್ದೆ ಹೆಸರು	ಅಗತ್ಯವಿರುವ ಹುದ್ದೆಗಳ ಸಂಖ್ಯೆ (ಅಂದಾಜು ಮಾತ್ರ)
1	ಮುಖ್ಯ ಅಡುಗೆಯವರು	56
2	ಅಡುಗೆ ಸಹಾಯಕರು	41
3	ಕಾವಲುಗಾರರು	37
4	ಪ್ರದಸ	08
5	ದ್ವಿ.ದ.ಸ	02
6	ಸ್ಟಾಫ್ ನರ್ಸ	14
7	ಸ್ವಚ್ಚತಾ ಸಿಬ್ಬಂದಿ	57
8	ಗ್ರೂಪ್ ಡಿ	22
	ಒಟ್ಟು	**237**

(1) ಟೆಂಡರ್ ಪ್ರಕಟಣೆ ಸಂಖ್ಯೆ: **SWD/2025-26/SE0183**
(2) ಟೆಂಡರ್‌ಗಿಟ್ಟ ಅಂದಾಜು ಮೊತ್ತ: **ರೂ.3,88,99,512/-**
(3) ಇ.ಎಂ.ಡಿ ಮೊತ್ತ: **ರೂ.5,83,516/-**
(4) **e-portal** ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ: **ದಿನಾಂಕ: 20.07.2025 ಸಂಜೆ 5.00 ಗಂಟೆಗೆ**
(5) ಪ್ರಿ ಬಿಡ್ ಸಭೆ ನಡೆಸುವ **ದಿನಾಂಕ & ಸಮಯ: 27.06.2025 ಬೆಳ್ಳಿಗ್ಗೆ: 11.00 ಗಂಟೆಗೆ.**
(6) **e-portal**ನ ಟೆಂಡರ್ ದಾಖಲಾತಿಗಳನ್ನು & ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ: **ದಿನಾಂಕ: 22.07.2025 ಸಂಜೆ 05:30 ಗಂಟೆಗೆ (ಸ್ಥಳ ಮತ್ತು ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ).**
(7) **e-portal**ನಲ್ಲಿ & ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ: **ದಿನಾಂಕ: 23.07.2025 ಸಂಜೆ 5.30 ಗಂಟೆಗೆ (ಸ್ಥಳ ಮತ್ತು ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ).**
(8) ವ್ಯವಹರಿಸಬೇಕಾದ ಕಛೇರಿ ವಿಳಾಸ: ಡಾ॥ ಬಿ ಆರ್ ಅಂಬೇಡ್ಕರ್ ಭವನ, ಶ್ರೀನವಾಸಪುರ ರಸ್ತೆ, ಕೋಲಾರ ಜಿಲ್ಲೆ-563101

ಸಹಿ/-
ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ,
ಕೋಲಾರ ಜಿಲ್ಲೆ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:153/ಕೆಎಸ್‌ಎಂಸಿಎ/2025-26

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ:15ಇ:2025-26:ಜೆಇ-1 ದಿನಾಂಕ: 01.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ / ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಲೆಕ್ಕಶೀರ್ಷಿಕೆ: 4059-80-051-0-29-386 ಇಲಾಖಾ ಕಟ್ಟಡಗಳು ಯೋಜನೆಯಡಿ ಇಂಡೆಂಟ್ ನಂ: 15545 ಮತ್ತು **ಲೆಕ್ಕಶೀರ್ಷಿಕೆ: 8443-ಠೇವಣಿ ಕೊಡುಗೆಯಡಿ** ಇಂಡೆಂಟ್ ನಂ: 22291. ಈ ಕಾಮಗಾರಿಗಳಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರನ್ನು ಸಲ್ಲಿಸುವ **ಕೊನೆಯ ದಿನಾಂಕ: 18.07.2025 (ಅಪರಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಕೆ,ಡಬ್ಲ್ಯೂ-3 & 4 ಬಿಡ್ ಡಾಕ್ಯುಮೆಂಟ್ ಪ್ರಕಾರ ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ. 88.00 ಲಕ್ಷ ಮತ್ತು ಗರಿಷ್ಠ ಮೊತ್ತ ರೂ. 300.00 ಲಕ್ಷ ಆಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ **https://kppp.karnataka.gov.in**ನ್ನು ಸಂಪರ್ಕಿಸಲು ಕೋರಲಾಗಿದೆ.

DIPR/MNG/KSMCA/414/25-26 dt.03.07.2025
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

ನಗರಸಭಾ ಕಾರ್ಯಾಲಯ, ನೆಲಮಂಗಲ
ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ-562123, ದೂ.: 080-27722735, ಸಹಾಯವಾಣಿ: 080-27723627, Web : www.nelamangala.mrc.gov.in, Email : itstaffnelamangala@gmail.com
ಸಂಖ್ಯೆ: ನಸನೆ/ಆ.ಶಾ/ಸಿಆರ್/03/2025-26 ದಿನಾಂಕ: 02.07.2025

"ಕೊಟೇಶನ್ ಪ್ರಕಟಣೆ"

ನೆಲಮಂಗಲ ನಗರಸಭೆಯ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ OWC Organic Waste Converter (2 TPD) ಯಂತ್ರದ ದರಪಟ್ಟಿಗಳನ್ನು ಆಹ್ವಾನಿಸಲಾಗಿದ್ದು, ಅಧಿಕೃತ ಸಂಸ್ಥೆ/ ಸರಬರಾಜುದಾರರ OWC (Organic Waste Converter) (2 TPD) ಯಂತ್ರ ದರಪಟ್ಟಿಗಳನ್ನು ದಿನಾಂಕ:- 09.07.2025 ರ ಸಂಜೆ 5.00 ಗಂಟೆಯೊಳಗೆ ನಗರಸಭೆಯ ಕಛೇರಿಗೆ ಸಲ್ಲಿಸುವುದು.

ಸಹಿ/-
ಶ್ರೀ ಮನುಕುಮಾರ್ ಹೆಚ್.ಎಂ.
(ಕೆ.ಎಂ.ಎ.ಎಸ್) ಪೌರಾಯುಕ್ತರು,
ನಗರಸಭೆ, ನೆಲಮಂಗಲ
ವಾ.ಸಾ.ಸಂ.ಇ/ವಾಪ್ರ/1603/ಶಿರಡಿಸಾಯಿ/2025-26

ಕೃಷಿ ಇಲಾಖೆ
ಉಪ ಕೃಷಿ ನಿರ್ದೇಶಕರ ಕಛೇರಿ-1, ಕೋಲಾರ ಉಪ ವಿಭಾಗ
ಹಳೇ ಡಿ.ಸಿ ಆಫೀಸ್ ಆವರಣ, ಜಂಟಿ ಕೃಷಿ ನಿರ್ದೇಶಕರ ಕಛೇರಿ ಕಾಂಪೌಂಡ್, ಕೋಲಾರ ಜಿಲ್ಲೆ, ಕೋಲಾರ-563101 ದೂರವಾಣಿ ಸಂಖ್ಯೆ:08152-200158, ಇಮೇಲ್-dda1kolar@gmail.com
ಸಂಖ್ಯೆ:ಉಕೃನಿ-1/ಕೋ/ಆ-1/NGO/2025-26 ದಿನಾಂಕ: 01.07.2025

ಟೆಂಡರ್ ಪ್ರಕಟಣೆ

2025-26 ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ -ಜಲಾನಯನ ಅಭಿವೃದ್ಧಿ ಘಟಕ (PMKSY-WDC-2.0) ರ ಯೋಜನಾ ಪ್ರದೇಶದಲ್ಲಿ ಬರುವ ಬಂಗಾರಪೇಟೆ ತಾಲ್ಲೂಕಿನಲ್ಲಿ 2500 ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿ ಪಡಿಸುವ ಯೋಜನೆ ಅನುಷ್ಠಾನ ಮಾಡಲು ಅವಶ್ಯಕವಿರುವ ಸರ್ಕಾರೇತರ ಸಂಸ್ಥೆಯ ಆಯ್ಕೆಗೆ ಅರ್ಹರಿಂದ ಟೆಂಡರ್ ಕರೆಯಲಾಗಿದೆ.

www.kppp.karnataka.gov.in ಮುಖಾಂತರ ಹರಾಜಿನ ದಿನಾಂಕಗಳ ವಿವರಗಳು

ಟೆಂಡರ್ ಶೀರ್ಷಿಕೆ	ಪ್ರಾರಂಭ ದಿನಾಂಕ	ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
Selection of Voluntary Organization (Vos)/Non-Government Organizations (NGOs)/ Agencies for Implementing Activities under WDC-PMKSY 2.0 Scheme in Bangarpete Taluk, Kolar District.	01.07. 2025	18.07. 2025	23.07. 2025

ಟೆಂಡರ್ ಮೌಲ್ಯ ಮತ್ತು ಇ.ಎಂ.ಡಿ ವಿವರಗಳನ್ನು **www.kppp.karnataka.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಕಂಡ ಅಧಿಕಾರಿಗಳ ಕಛೇರಿಯಲ್ಲಿ ಸಂಪರ್ಕಿಸಬಹುದು.

ಸಹಿ/-
ಉಪ ಕೃಷಿ ನಿರ್ದೇಶಕರು-1
ಕೋಲಾರ ಜಿಲ್ಲೆ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:162/ಕೆಎಸ್‌ಎಂಸಿಎ/2025-26

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ (ವಿ) ಹುಬ್ಬಳ್ಳಿ

ಇ-ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಿಕ ಆದೇಶ 1999-2000 ರ ಪ್ರಕಾರ ಆ್ಯಕ್ಟ 2000 ರ ನಿಯಮದಂತೆ ಕರ್ನಾಟಕ ವಿದ್ಯುತ್ ಪರೀವೀಕ್ಷಕರಿಂದ ಗುತ್ತಿಗೆದಾರಿಕೆ ಪರವಾನಿಗೆ ಹೊಂದಿರುವ / ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ /ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು:- ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು.

ಹೆಚ್ಚಿನ ಮಾಹಿತಿಯನ್ನು ಕಾರ್ಯನಿರ್ವಾಹಕ ಇಂಜಿನೀಯರ (ವಿದ್ಯುತ್) ಇವರ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: ಹುಬ್ಬಳ್ಳಿ ಕಚೇರಿ **0836-2351024** ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp.karnataka.gov.in/ ರಲ್ಲಿ ಪಡೆಯಬಹುದು. ಕೋಟೆಶನ್ / ಇಮೇಲ್ (hdmc.ele@gmail.com) /ಅಂಚೆ /ಖುದ್ದಾಗಿ ಗುತ್ತಿಗೆದಾರರಿಂದ ದರಗಳನ್ನು ಆಹ್ವಾನಿಸಲಾಗಿದ್ದು ಜಿ.ಎಸ್.ಟಿ ಹೊರತುಪಡಿಸಿ ಕೋಟ ಮಾಡಲು ಕೋರಿದೆ. ಸದರ ಇ ಕೊಟೆಶನ & ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ kppp portal ನಲ್ಲಿ ದಿನಾಂಕ: **07-07-2025** ರಿಂದ ಪಡೆಯಬಹುದು. ಒಂದು ವೇಳೆ ಸದರಿ ಟೆಂಡರ್‌ಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ-ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪೂರ್ಣಾವಧಿ ಟೆಂಡರ್‌ಗಳು

15ನೇ ಹಣಕಾಸು ಯೋಜನೆ ಕಾಮಗಾರಿ
1. 44291 Amt 150.00 lakhs, 03 months
2. 44299 Amt 40.00 lakhs, 03 months
3. 44296 Amt 60.00 lakhs, 03 months

ಸಾಮಾನ್ಯ ವರ್ಗ
1. 42027 Amt 10.00 lakhs, 03 months

ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 21-07-2025 ಸಂಜೆ 4.00 ಗಂಟೆಯವರೆಗೆ.
ಟೆಂಡರ್ ತೆರೆಯುವ ದಿನಾಂಕ: 22-07-2025 ಸಂಜೆ 4.30 ಗಂಟೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ವಿ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ,
ಧಾರವಾಡ
ವಾ.ಸಾ.ಇ/ಧಾರವಾಡ/374/ದೇಶಪಾಂಡೆಪಬ್ಲಿಸಿಟಿ/2025-26

ಮೀನುಗಾರಿಕೆ ಇಲಾಖೆ
ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರ ಕಛೇರಿ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
ಸಂಖ್ಯೆ : ಹ.ಗು.ಪ./ಇ-ಟೆಂಡರ್/02/2025-26 ದಿನಾಂಕ : 03-07-2025

ಇ-ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ **ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲ್ಲೂಕಿನ ಕೆಳಕಂಡ ಸರ್ಕಾರಿ ಜಲಸಂಪನ್ಮೂಲಗಳ (ಕೆರೆಗಳು, ಇತ್ಯಾದಿ) ಮೀನು ಪಾಶುವಾರು ಹಕ್ಕನ್ನು 2025-26 ನೇ ಮೀನುಗಾರಿಕೆ ಫಸಲಿ ವರ್ಷದಿಂದ 2029-30 ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ (ಅಂದರೆ ದಿನಾಂಕ : 01-07-2025 ರಿಂದ 30-06-2030 ರವರೆಗೆ) ಒಟ್ಟು 05 (ಐದು) ವರ್ಷಗಳ ಅವಧಿಗೆ ಇ-ಟೆಂಡರ್ ಮೂಲಕ ಈ ಕೆಳಗೆ ನಮೂದಿಸಿರುವ ವೇಳಾಪಟ್ಟಿ ಅನ್ವಯ ವಿಲೇವಾರಿ ಮಾಡಲಾಗುವುದು.** ಸರ್ಕಾರದ ಮೀನುಗಾರಿಕೆ ಇಲಾಖೆಯ ಷರತ್ತು ಮತ್ತು ನಿಬಂಧನೆಗೊಳಪಟ್ಟಂತೆ ವಿಲೇವಾರಿ ಮಾಡಲು ಕರ್ನಾಟಕ ಸರ್ಕಾರ ಇ-ಸಂಗ್ರಹಣಾ ಪೋರ್ಟಲ್ **(https://kppp.karnataka.gov.in)** ಮೂಲಕ ಟೆಂಡರ್ ಅಹ್ವಾನಿಸಲಾಗಿದೆ.

100 ಹೇಕ್ಟರ್‌ಗಿಂತ ಹೆಚ್ಚಿನ ಜಲ ವಿಸ್ತೀರ್ಣ ಇರುವ ಕಳಸಕೊಪ್ಪ ಏತ ನೀರಾವರಿ ಕೆರೆ.

ವಿಲೇವಾರಿ ಮಾಡಲು ಪ್ರಸ್ತಾಪಿಸಿರುವ ಸರ್ಕಾರಿ ಜಲಸಂಪನ್ಮೂಲಗಳ (ಕೆರೆ / ಜಲಾಶಯದ) ವಿವರಗಳು

ಕ್ರ. ಸಂ.	ಇ-ಟೆಂಡರ್ ಸಂಖ್ಯೆ	ಜಲ ಸಂಪನ್ಮೂಲದ ಹೆಸರು	ಗ್ರಾಮದ / ಹೋಬಳಿ	ಜಲ ವಿಸ್ತೀರ್ಣ ಪ್ರದೇಶ (ಹೆ.)	ಅಚ್ಚುಕಟ್ಟು ಪ್ರದೇಶ (ಹೆ.)	ಸರ್ಕಾರಿ ಸವಾಲು ಮೊತ್ತ (ರೂ. ಗಳಲ್ಲಿ)	ಭದ್ರತಾ ಠೇವಣಿ ಮೊತ್ತ. (ರೂ. ಗಳಲ್ಲಿ)	ನಿಗಧಿಪಡಿಸಿದ ಮೀಸಲಾತಿ
01	DOF/2025-26/ SE3432	ಕಳಸಕೊಪ್ಪ ಕೆರೆ	ಕಳಸಕೊಪ್ಪ	179.00	1,142.00	2,685.00	40,275	ಸಾಮಾನ್ಯ

ಇ-ಟೆಂಡರ್ ವೇಳಾಪಟ್ಟಿ : **1) ಇ-ಟೆಂಡರ್ ದಸ್ತಾವೇಜು ಪಡೆಯುವ ದಿನಾಂಕ : 03-07-2025, 2) ಇ-ಟೆಂಡರ್ ಬಿಡ್ ಸಲ್ಲಿಕೆ ಅಂತಿಮ ದಿನಾಂಕ ಮತ್ತು ಸಮಯ : 19-07-2025 ರ ಸಂಜೆ 5.30 ಗಂಟೆಗೆ, 3) ಇ-ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ & ಸ್ಥಳ : 10-07-2025 ರ ಬೆಳಿಗ್ಗೆ 11.00 ಗಂಟೆಗೆ, ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ, ಬಾದಾಮಿ, 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ & ಸ್ಥಳ : 21-07-2025 ರ ಬೆಳಿಗ್ಗೆ 11.00 ಗಂಟೆಗೆ, ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ, ಬಾದಾಮಿ, 5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ & ಸ್ಥಳ : 22-07-2025 ರ ಬೆಳಿಗ್ಗೆ 11.00 ಗಂಟೆಗೆ, ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ, ಬಾದಾಮಿ.**

ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in** ಇ-ಸಂಗ್ರಹಣಾ ಪೋರ್ಟಲ್ ಭೇಟಿ ಮಾಡುವುದು.

ಸಹಿ/- ಮೀನುಗಾರಿಕೆ ಸಹಾಯಕ ನಿರ್ದೇಶಕರು,
ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
ವಾಸಾಸಂಇ/ಬಾಗಲಕೋಟೆ/152/ಮಣಿಪಾಲ್/2025-26

C2C ADVANCED SYSTEMS LIMITED
(Formerly known as C2C ADVANCED SYSTEMS PRIVATE LIMITED)
CIN: U72200KA2018PLC110361
Registered office: NO 86, Wings of Eagles, S S Commercial Estate Varthur Road, Nagavarapalya, C V Raman Nagar, Bangalore, Karnataka, India, 560093
E-mail ID:**compliance@c2c -as.com** Website:**www.c2c-as. com**

NOTICE OF THE EXTRA ORDINARY GENERAL MEETING OF THE COMPANY AND E-VOTING

NOTICE is hereby given that the 01/2025-2026 Extra Ordinary General Meeting (EGM) of the Members of C2C Advanced Systems Limited (Formerly known as C2C Advanced Systems Private Limited) be held on Friday, July 25, 2025 at 05:30 P.M. through Video Conferencing ("VC") / Other Audio Visual Means ("OAVM") to transact the Special Businesses as set out in the notice of EGM. The venue of the meeting shall be deemed to the Registered Office of the Company i.e. NEIL RAO TOWERS, 4TH FLOOR, CENTAL WING, 117 & 118, ROAD NO 3, VIJAYANAGAR, EPIP PHASE-1, WHITE FIELD, BANGALORE- 560066.

In accordance with the General Circular No. 14/2020 dated April 08, 2020, Circular No. 17/2020 dated April 13, 2020 and Circular No. 20/2020 dated May 05, 2020 and Circular No. 02/2021 dated January 13, 2021 and Circular No. 21/2021 dated December 14, 2021 and 02/2022 dated May 05, 2022, 10/2022 dated December 28, 2022 and latest being 09/2023 dated September 25, 2023 ("MCA Circulars") and Circular no. SEBI/HO/CFD/CMD1/CIR/P/2020/79 dated May 12, 2020 Circular No. SEBI/HO/CFD/CMD2/CIR/P/2021/11 dated January 15, 2021, Circular No. SEBI/HO/CFD/ CMD2/ CIR/P/2022/62 dated May 13, 2022, SEBI/ HO/CRD/PoD-2/P/CIR/2023/4 dated January 05, 2023 and Circular No. SEBI/HO/CFD/CFD-PoD-2/P/ CIR/2023/167 dated October 07, 2023 issued by the Securities Exchange Board of India ("SEBI Circular") the Extra Ordinary General Meeting through VC/ OAVM, the Notice of EGM is being sent through electronic mode to those Members whose email addresses are registered with the Company/ Depositories. Member may note that Notice will be uploaded on the website of the Company at www.c2c-as.com, website of NSE Limited at www.nseindia.com

In light of the MCA Circulars, the shareholders whether holding equity shares in demat form or physical form and who have not submitted their email addresses and in consequence to whom the notice of EGM could not be serviced, may temporarily get their e-mail addresses registered by following the procedure given below:

1. In case shares are held in physical mode, please provide Folio No., Name of shareholder, scanned copy of the share certificate (front and back), PAN (self-attested scanned copy of PAN card), AADHAR (self-attested scanned copy of Aadhar Card) by email to Compliance@c2c-as.com
2. In case shares are held in demat mode, please provide DPID-CLID (16 digit DPID + CLID or 16 digit beneficiary ID), Name, client master or copy of Consolidated Account statement, PAN (self-attested scanned copy of PAN card), AADHAR (self-attested scanned copy of Aadhar Card) to Compliance@c2c-as.com
3. Alternatively member may send an e-mail request to instameet@linkintime.co.in for obtaining User ID and Password by proving the details mentioned in Point (1) or (2) as the case may be.

Post successful registration of the e-mail address, the shareholder would get soft copies of notice of EGM and the procedure for e-voting along with the user-id and the password to enable e-voting for EGM. In case of any queries, shareholder may write to the Company at Compliance@c2c-as.com. Shareholders are requested to register/ update their Email Ids with their Depository Participant(s) with whom they maintain their demat accounts if shares are held in dematerialized mode by submitting the requisite documents.

Members whose names are recorded in the Register of Members or in the Register of Beneficial Owners maintained by the Depositories as on **Monday, June 30, 2025** shall only be entitled to avail the facility of remote e-voting as well as e-voting on the Extra ordinary General Meeting.

Pursuant to the provisions of Section 108 of the Companies Act, 2013 read with Rules made thereunder (as amended) and Regulation 44 of SEBI (LODR) Regulations, 2015 (as amended) and above-mentioned MCA Circulars, the Company is providing facility of remote e-voting and e-voting on the date of the EGM to its Members in respect of the businesses to be transacted at the EGM. For this purpose, the Company has entered into an agreement with MUFG Intime India Private Limited, for facilitating voting through electronic means.

The remote e-voting will commence on 9.00 a.m. on Tuesday, July 22, 2025 and will end on 5:00 P.M. on Thursday, July 24, 2025.. During this period, the members of the Company holding shares as on Cut-off date may cast their vote electronically (Remote E-Voting). Members may note that

a) the remote e-voting module shall be disabled by MUFG Intime India Private Limited after the aforesaid date and time for voting and once the vote on a resolution is cast by the member, the member shall not be allowed to change it subsequently;

b) the facility of e-voting shall be made available at the EGM; and

c) the members who have cast their vote by remote e-voting prior to the EGM may also attend the EGM but shall not be entitled to cast their vote again.

Detailed procedure for remote e-voting/ e-voting is provided in the Notice of the Extra Ordinary General Meeting.

Any person, who acquires shares of the Company and become member of the Company after dispatch of the Notice of EGM and holding shares as on the cut-off date i.e. Monday, June 30, 2025, are requested to refer to the Notice of EGM for the process to be adopted for obtaining the USER ID and Password for casting the vote.

In case of any queries for e-voting, send a request at instameet@linkintime.co.in Members may also contact Mr. Manjeet Singh, Company Secretary of the Company by writing an e-mail to Compliance@c2c-as.com for any further clarification.

Members can attend and participate in the Extra Ordinary General Meeting through VC/OAVM facility. The instructions for joining the Extra Ordinary General Meeting through VC/OAVM are provided in the Notice of the Extra Ordinary General Meeting. In case the shareholders/members have any queries or issues regarding participation in the EGM, you can write an email to instameet@linkintime.co.in or Call: - Tel: 022 – 4918 6000. Members attending the meeting through VC/OAVM shall be counted for the purposes of reckoning the quorum under Section 103 of the Companies Act, 2013.

For, C2C Advanced Systems Limited
(Formerly Known as C2C Advanced Systems Private Limited)
Sd/-

Manjeet Singh
Company Secretary
A61378

Bangalore
03.07.2025

ಸಮಾಚಾರ ಸಣ್ಣದಲ್ಲ

ಕೃಷ್ಣಮೂರ್ತಿ ಇನ್ನಿಲ್ಲ

ಬೆಂಗಳೂರು: ಕಂದಾಯ ಇಲಾಖೆ ವಿವಿಧ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದ ಎಚ್.ಎಸ್. ಕೃಷ್ಣಮೂರ್ತಿ ಅವರು ಬುಧವಾರ ಮಧ್ಯಾಹ್ನ ಕೊನೆಯುಸಿರು ಎಳೆದಿದ್ದು, ಗುರುವಾರ ಮಧ್ಯಾಹ್ನ ಚಿತ್ರದುರ್ಗದಲ್ಲಿ ಅಂತಿಮ ವಿಧಿವಿಧಾನಗಳು ನೆರವೇರಿವೆ.

ವಯೋಸಹಜ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ 86 ವರ್ಷದ ಎಚ್.ಎಸ್. ಕೃಷ್ಣಮೂರ್ತಿ ಅವರು ಕೆಲ ದಿನಗಳಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಬುಧವಾರ ಚಿಕಿತ್ಸೆ ಫಲಕಾರಿಯಾಗದೇ ಆಸ್ಪತ್ರೆಯಲ್ಲಿಯೇ ಕೊನೆಯುಸಿರು ಎಳೆದಿದ್ದಾರೆ. ಗುರುವಾರ ಮಧ್ಯಾಹ್ನ ಚಿತ್ರದುರ್ಗದಲ್ಲಿ ಅಂತಿಮ ವಿಧಿವಿಧಾನಗಳನ್ನು ನೆರವೇರಿಸಲಾಯಿತು. ಮೂಲತಃ ಜಗಳೂರು ತಾಲೂಕಿನ ಹೊಸಕರೆ ಗ್ರಾಮದ ಕೃಷ್ಣಮೂರ್ತಿ ಅವರು ಧರ್ಮಪತ್ನಿ ಯಶೋಧಮ್ಮ, ಪುತ್ರ ಎಚ್.ಕೆ. ವಿಜಯ್ ಕುಮಾರ್, ಪುತ್ರಿ ಜಯಲಕ್ಷ್ಮೀ ಸೇರಿದಂತೆ ಸೊಸೆ, ಮೂರು ಮೊಮ್ಮಕ್ಕಳು ಸೇರಿದಂತೆ ಅನೇಕ ಬಂಧುಮಿತ್ರರನ್ನು ಅಗಲಿದ್ದಾರೆ.

ಮಗನ ಸಾವಿನ ಸುದ್ದಿ ಕೇಳಿ ತಾಯಿಗೆ ಹೃದಯಾಘಾತ

ಬೀದರ್: ತಾಲೂಕಿನ ಘೋಡಂಪಳ್ಳಿ ಗ್ರಾಮದ ಬಳಿ ಬುಧವಾರ ರಾತ್ರಿ 10ರ ಸುಮಾರಿಗೆ ಗೂಡ್ಸ್ ವಾಹನವೊಂದು ರಸ್ತೆ ಪಕ್ಕದ ಬಾವಿಗೆ ಉರುಳಿ, ಅದರಲ್ಲಿದ್ದ ಇಬ್ಬರು ಸಾವನ್ನಪ್ಪಿದರು. ಗಂಭೀರವಾಗಿ ಗಾಯಗೊಂಡಿರುವ ಐವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮತ್ತೊಂದೆಡೆ ಮಗನ ಸಾವಿನ ಸುದ್ದಿ ತಿಳಿದು ತಾಯಿ ಸಹ ಹೃದಯಾಘಾತದಿಂದ ಸಾವನಪ್ಪಿರುವ ಮನಕಲಕುವ ಘಟನೆ ನಡೆದಿದೆ. ಗೂಡ್ಸ್ ವಾಹನ ಬಾವಿಗೆ ಬಿದ್ದು ಮಗ ಲಕ್ಷ್ಮಿಕಾಂತ್ ಜೋಶಿ ಅಲಿಯಾಸ್ ಕಾಂತರಾಜು(45) ಸಾವನ್ನಪ್ಪಿದ್ದಾರೆ, ಸುದ್ದಿ ಕೇಳಿ ಆಘಾತಗೊಂಡ ತಾಯಿ ಶಾರದಾಬಾಯಿ(86) ಹೃದಯಾಘಾತದಿಂದ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ. ಒಂದೇ ದಿನ ತಾಯಿ-ಮಗನ ಸಾವಿನ ಘಟನೆಯಿಂದ ಘೋಡಂಪಳ್ಳಿ ಗ್ರಾಮದಲ್ಲಿ ಶೋಕದ ಛಾಯೆ ಆವರಿಸಿದ್ದು, ಕುಟುಂಬಸ್ಥರ ಆಕ್ರಂದನ ಮನಕಲಕುವಂತಿದೆ. ಅಪಘಾತದ ದುರ್ಘಟನೆಯಲ್ಲಿ ಘೋಡಂಪಳ್ಳಿ ಗ್ರಾಮದ ರವಿ ಪಾಗದೊಡ್ಡಿ (18) ಸಾವನ್ನಪ್ಪಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ನನ್ನದೇನಿಲ್ಲ...ಎಲ್ಲವೂ ಹೈಕಮಾಂಡ್ ಹೇಳಿದ ಹಾಗೇ- ಡಿಸಿಎಂ

ಸುದ್ದಿ



ವಿಶ್ವವಾಣಿ ಕ್ಲಬ್ ಹೌಸ್
04.07.2025
ಶುಕ್ರವಾರದ ಅತಿಥಿ

ಶ್ರೀ ಪಿ.ಕೆ.ನಂದೀಶ
ವಿಷಯ
ಶ್ರೀ ರಾಮಾಯಣ ದರ್ಶನಂ ಸಮೀಕ್ಷೆ
vishwavani.news

7 ತಿಂಗಳಲ್ಲಿ 1.04 ಲಕ್ಷ ಜಮೀನುಗಳ ಅಳತೆ

ರೈತರಿಗೆ ನನ್ನ ಭೂಮಿ ಗ್ಯಾರಂಟಿ | ಜಿಲ್ಲಾಧಿಕಾರಿಗಳ ಜತೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸಭೆ

ಬೆಂಗಳೂರು: ರೈತರಿಗೆ ಕಾಂಗ್ರೆಸ್ ಸರಕಾರ ನೀಡಿದ ನನ್ನ ಭೂಮಿ ಗ್ಯಾರಂಟಿ ಅಭಿಯಾನ ವೇಗ ಪಡೆದುಕೊಂಡಿದ್ದು, 7 ತಿಂಗಳಲ್ಲಿ 1,04,222 ಜಮೀನುಗಳ ಅಳತೆಗೆ ತೆಗೆದುಕೊಳ್ಳಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾಹಿತಿ ನೀಡಿದರು.

ವಿಕಾಸಸೌಧದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಎಲ್ಲಾ ಜಿಲ್ಲಾಧಿಕಾರಿಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಹಿಂದಿನ ಸರಕಾರದ ಅವಧಿಯಲ್ಲಿ ಮೂರು ವರ್ಷಕ್ಕೆ ಕೇವಲ 5,801 ಪ್ರಕರಣಗಳಲ್ಲಿ ಮಾತ್ರ ರೈತರಿಗೆ ಪೋಡಿ ದುರಸ್ಥಿ ಮಾಡಿಕೊಡಲಾಗಿತ್ತು. ಕಳೆದ ಡಿಸೆಂಬರ್‌ನಿಂದ ನನ್ನ ಭೂಮಿ ಹೆಸರಿನಲ್ಲಿ ಪೋಡಿ ಅಭಿಯಾನ ಕೈಗೊಂಡಿದ್ದು, ಕೇವಲ 7 ತಿಂಗಳಲ್ಲಿ 1,04,222 ಜಮೀನು ಅಳತೆಗೆ ತೆಗೆದುಕೊಳ್ಳಲಾಗಿದೆ ಎಂದರು.

ಈವರೆಗೆ 1,04,222 ಜಮೀನುಗಳನ್ನು ಅಳತೆಗೆ ತೆಗೆದುಕೊಂಡಿದ್ದು, ಈ ಪೈಕಿ ಶೇ.20 ರಷ್ಟು ಭೂಮಿಯ ಅಳತೆ ಕೆಲಸವೂ ಮುಗಿದಿದೆ. ಉಳಿದ ಪ್ರಕರಣಗಳನ್ನು ಮುಂದಿನ 6 ತಿಂಗಳಲ್ಲಿ ಪೋಡಿ ಮಾಡಿಕೊಡಲು ಸೂಚಿಸಲಾಗಿದೆ. ಇದಲ್ಲದೆ, ಇನ್ನೂ 50 ರಿಂದ 70 ಸಾವಿರ ಪೋಡಿ ಪ್ರಕರಣಗಳು ದಾಖಲಾಗುವ ನಿರೀಕ್ಷೆ ಇದೆ. 3-4 ದಶಕಗಳ ಹಿಂದೆ ರೈತರಿಗೆ ದರ್ಖಾಸ್ತಿನಲ್ಲಿ ಮಂಜೂರಾಗಿದ್ದ ಜಮೀನಿಗೆ ಈವರೆಗೆ ಪೋಡಿ ಆಗಿಲ್ಲ. ಇದರಿಂದ ರೈತರು ಸಾಕಷ್ಟು ಸಮಸ್ಯೆ ಎದುರಿಸಿದ್ದರು. ಈ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವ ಸಲುವಾಗಿಯೇ ನನ್ನ ಭೂಮಿ ಹೆಸರಿನಲ್ಲಿ ಪೋಡಿ ಅಭಿಯಾನ ಆರಂಭಿಸಲಾಯಿತು. ಈ ಅಭಿಯಾನದ ಅಡಿ ಜನರ ಅರ್ಜಿಗೆ ಕಾಯದೆ ಸರಕಾರವೇ ರೈತರ ಮನೆ ಬಾಗಿಲಿಗೆ ತೆರಳಿ ಪೋಡಿ ಮಾಡಿಕೊಡುತ್ತಿದೆ. ಹಿಂದೆ ಮಂಜೂರಾಗಿದ್ದ ಜಮೀನಿಗೆ ಪಕ್ಕಾ ದಾಖಲೆಗಳನ್ನು ಅವರ ಕೈಗೆ ಕೊಟ್ಟು ಅವರ ಭೂ ಮಾಲೀಕತ್ವಕ್ಕೆ ಗ್ಯಾರಂಟಿ ನೀಡುವುದು ಈ ಕಾರ್ಯಕ್ರಮದ ವಿಶೇಷ ಎಂದು ವಿವರಿಸಿದರು.

ವಿಕಾಸಸೌಧದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಎಲ್ಲಾ ಜಿಲ್ಲಾಧಿಕಾರಿಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಕಂದಾಯ ಸಚಿವ ಕೃಷ್ಣ ಬೈರೇಗೌಡ ನಡೆಸಿದರು.

> ತಹಸೀಲ್ದಾರ್ ಕಚೇರಿಗಳಲ್ಲಿ ಅವಧಿ ಮೀರಿದ 10,774 ಪ್ರಕರಣಗಳ ಸಂಖ್ಯೆ 457ಕ್ಕೆ ಇಳಿಸಲಾಗಿದೆ. ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಅವಧಿ ಮೀರಿದ 62,857 ಪ್ರಕರಣಗಳಲ್ಲಿ 20,211ಕ್ಕೆ ಇಳಿಸಲಾಗಿದೆ. ಉಳಿದ ಪ್ರಕರಣ 4 ತಿಂಗಳಲ್ಲಿ ನ್ಯಾಯಯುತ ವಿಲೇವಾರಿಗೆ ಒಳಪಡಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ.
>
> -ಕೃಷ್ಣ ಬೈರೇಗೌಡ ಕಂದಾಯ ಸಚಿವ

29.8 ಕೋಟಿ ಪುಟಗಳ ಡಿಜಿಟಲೀಕರಣ

ಭೂ ಸುರಕ್ಷಾ ಯೋಜನೆಯ ಅಡಿಯಲ್ಲಿ ಈವರೆಗೆ 29.8 ಕೋಟಿ ಮೂಲ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲೀಕರಣಗೊಳಿಸಲಾಗಿದ್ದು, ವರ್ಷಾಂತ್ಯದೊಳಗೆ ತಹಸೀಲ್ದಾರ್ ಕಚೇರಿಗಳಲ್ಲಿರುವ ಎಲ್ಲಾ ಮೂಲ ಕಡತಗಳನ್ನೂ ಸ್ಕ್ಯಾನ್ ಮಾಡಿ ಡಿಜಿಟಲೀಕರಿಸಲಾಗುವುದು. ರೈತರಿಗೆ ಶೋಷಣೆಗಳಿಂದ ಮುಕ್ತಿ ನೀಡುವ ಸಲುವಾಗಿಯೇ ಭೂ ಸುರಕ್ಷಾ ಯೋಜನೆ ಜಾರಿಗೆ ತರಲಾಗಿದ್ದು, ರೈತರು ಅನಗತ್ಯವಾಗಿ ಸರಕಾರಿ ಕಚೇರಿ ಅಲೆಯುವುದನ್ನು ತಪ್ಪಿಸುವುದರ ಜತೆಗೆ ಮನೆಯಿಂದ ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಿ ದಾಖಲೆ ಪಡೆದುಕೊಳ್ಳಬಹುದು. ಈ ಯೋಜನೆ ಪ್ರಾಯೋಗಿಕವಾಗಿ 31 ತಾಲೂಕುಗಳಲ್ಲಿ ಆರಂಭಿಸಿ ಇದೀಗ ಎಲ್ಲಾ ತಾಲೂಕುಗಳಲ್ಲಿ ಕೆಲಸ ಆರಂಭಿಸಲಾಗಿದೆ. ರಾಜ್ಯಾದ್ಯಂತ ತಹಸೀಲ್ದಾರ್, ಎಸಿ-ಡಿಸಿ ಕಚೇರಿಗಳಲ್ಲಿ ಸುಮಾರು 100 ಕೋಟಿ ಮೂಲ ದಾಖಲೆ ಪುಟಗಳಿವೆ ಎಂದು ಅಂದಾಜಿಸಲಾಗಿದ್ದು, ಡಿಸೆಂಬರ್ ಅಂತ್ಯದೊಳಗೆ ಎಲ್ಲಾ ಪುಟಗಳನ್ನೂ ಸ್ಕ್ಯಾನ್ ಮಾಡಿ ಡಿಜಿಟಲೀಕರಿಸುವ ಗುರಿ ಹೊಂದಲಾಗಿದೆ ಎಂದರು.

ಗ್ರಾಮ ಆಡಳಿತಾಧಿಕಾರಿಗೆ ಕಚೇರಿ

ಗ್ರಾಮ ಆಡಳಿತ ಅಧಿಕಾರಿಗಳಿಗೆ ಜಿಲ್ಲಾ ಪಂಚಾಯತ್ ಕಚೇರಿ ಆವರಣದಲ್ಲಿ ಕಚೇರಿ ವ್ಯವಸ್ಥೆ ಮಾಡಿಕೊಡುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸೂಚಿಸಲಾಗಿದೆ. ಈಗಾಗಲೇ ರಾಜ್ಯಾದ್ಯಂತ ಸುಮಾರು 2,600 ಕಡೆಗಳಲ್ಲಿ ವಿಎ ಗಳಿಗೆ ಕಚೇರಿ ನೀಡಲಾಗಿದೆ. ಗ್ರಾಮ ಪಂಚಾಯತ್ ಕಚೇರಿಗಳಲ್ಲೇ ಗ್ರಾಮ ಆಡಳಿತ ಅಧಿಕಾರಿಗಳಿಗೂ ಕಚೇರಿ ವ್ಯವಸ್ಥೆ ಮಾಡುವ ಸಂಬಂಧ ಗ್ರಾಮೀಣಾಭಿವೃದ್ಧಿ ಸಚಿವರ ಜತೆ ಚರ್ಚೆ ನಡೆಸಲಾಗಿದ್ದು, ಅದರಂತೆ ಈ ಹಿಂದೆ 1,200 ಅಧಿಕಾರಿಗಳಿಗೆ ಕಚೇರಿ ವ್ಯವಸ್ಥೆ ನೀಡಲಾಗಿದೆ. ಉಳಿದ 3500 ಅಧಿಕಾರಿಗಳಿಗೂ ಶೀಘ್ರದಲ್ಲೇ ಕಚೇರಿ ನೀಡಲಾಗುವುದು ಎಂದು ಸಚಿವ ಕೃಷ್ಣಬೈರೇಗೌಡ ಹೇಳಿದರು.

ಬಾಬಾನಗರದ ಬಳಿ ಹೊಸ ಕೆರೆ ನಿರ್ಮಾಣದ ಉದ್ದೇಶ

550 ಕೋಟಿ ರು. ಅನುದಾನ ಒದಗಿಸಲು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಸಚಿವ ಎಂ.ಬಿ.ಪಾಟೀಲ ಮನವಿ

ಬೆಂಗಳೂರು: ವಿಜಯಪುರ ಜಿಲ್ಲೆಯ ಬಬಲೇಶ್ವರ ಮತ್ತು ತಿಕೋಟಾ, ಬಾಗಲಕೋಟೆ ಜಿಲ್ಲೆಯ ಜಮಖಂಡಿ ಮತ್ತು ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನಲ್ಲಿ ನೀರಾವರಿ ಮತ್ತು ಕುಡಿಯುವ ನೀರು ಪೂರೈಸುವ ತುಬುಚಿ- ಬಬಲೇಶ್ವರ ಏತ ನೀರಾವರಿ ಯೋಜನೆಯಡಿಯಲ್ಲಿ ಬಾಬಾನಗರದ ಬಳಿ ಹೊಸದಾಗಿ ಕೆರೆ ನಿರ್ಮಿಸಲು 550 ಕೋಟಿ ರು. ಅನುದಾನ ಒದಗಿಸಬೇಕೆಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಉಪಮುಖ್ಯಮಂತ್ರಿ ಅವರನ್ನು ಸದಾಶಿವನಗರದ ನಿವಾಸದಲ್ಲಿ ಭೇಟಿಯಾಗಿ ನಂತರ ಮಾತನಾಡಿದ ಎಂ.ಬಿ.ಪಾಟೀಲ್, ತುಬುಚಿ-ಬಬಲೇಶ್ವರ ಏತ ನೀರಾವರಿ ಯೋಜನೆಯಲ್ಲಿ 6.3 ಟಿಎಂಸಿ ನೀರನ್ನು ಮೇಲ್ಕಂಡ ತಾಲೂಕುಗಳ 1.30 ಲಕ್ಷ ಎಕರೆಗೆ ಹರಿಸಲಾಗುತ್ತಿದೆ. ಇಲ್ಲಿ ಶೇ.60ರಷ್ಟು ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದ್ದು, ಬೇಸಿಗೆಯಲ್ಲಿ ನೀರಿನ ಕೊರತೆ ಎದುರಾಗುತ್ತಿದೆ. ಇದನ್ನು ಬಗೆಹರಿಸಲು ಬಾಬಾನಗರದ ಸಮೀಪ ಕೆರೆ ಕಟ್ಟಿ, 0.775 ಟಿಎಂಸಿ ನೀರನ್ನು ತುಂಬಲು ಅವಕಾಶವಿದೆ. ಇಲ್ಲಿ 679.25 ಎಕರೆ ಸರಕಾರಿ ಜಮೀನಿದ್ದು, ಈ ಪೈಕಿ 434 ಎಕರೆಯಲ್ಲಿ ಕೆರೆ ಕಟ್ಟಬೇಕೆಂದು ರೈತರು ಆಗ್ರಹಿಸುತ್ತಿದ್ದಾರೆ ಎಂದು ವಿವರಿಸಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜತೆ ಸಚಿವ ಎಂ.ಬಿ. ಪಾಟೀಲ ಚರ್ಚೆ ನಡೆಸಿದರು.

556.5 ಕೋಟಿ ವೆಚ್ಚದಲ್ಲಿ ಹೊಸ ಕೆರೆಯನ್ನು ನಿರ್ಮಿಸಲು ಚಿಂತಿಸಲಾಗಿದೆ. ಈ ನೀರನ್ನು ಬೇಸಿಗೆ ಕಾಲದಲ್ಲಿ ಜನ, ಜಾನುವಾರು ಮತ್ತು ಬೆಳೆಗಳಿಗೆ ಉಪಯೋಗಿಸಿಕೊಳ್ಳಬಹುದಾಗಿ. ಇದಕ್ಕೆ ತುಬುಚಿ-ಬಬಲೇಶ್ವರ ಏತ ನೀರಾವರಿ ಯೋಜನೆಯ ಎರಡನೆಯ ವಿತರಣಾ ತೊಟ್ಟಿಯಿಂದ ನೀರು ಹರಿಸಲು ಅವಕಾಶವಿದೆ. ಇದಕ್ಕೆ ಜಲಸಂಪನ್ಮೂಲ ಇಲಾಖೆಯು ಸಕಾರಾತ್ಮಕವಾಗಿ ಸ್ಪಂದಿಸುವ ನಿರೀಕ್ಷೆ ಇದೆ ಎಂದರು.

ರೈತರಿಗೆ ಸೂಕ್ತ ಪರಿಹಾರ ಸಿಗಬೇಕು: ದೇವನಹಳ್ಳಿ ತಾ.ನ ಚನ್ನರಾಯಪಟ್ಟಣ ಹೋಬಳಿಯಲ್ಲಿ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ ನಿರ್ಮಾಣಕ್ಕೆ 10 ಗ್ರಾಮಗಳ ವ್ಯಾಪ್ತಿಗೆ ಸೇರಿರುವ 1,282 ಎಕರೆ ಭೂಮಿ ಅಗತ್ಯವಿದೆ. ಆದರೆ, ರೈತರು ಇದಕ್ಕೆ ವಿರೋಧ ವ್ಯಕ್ತಪಡಿಸಿ ಹೋರಾಡುತ್ತಿದ್ದಾರೆ. ಈ ಸಂಬಂಧ ಜುಲೈ 4ರ ಶುಕ್ರವಾರ ಸಿಎಂ ಜತೆ ಸಭೆ ಏರ್ಪಡಿಸಲಾಗಿದೆ. ಕೈಗಾರಿಕೆಗಳಿಗೆ ಜಮೀನು ಬೇಕಾಗುತ್ತದೆ. ಭೂಮಿ ಕಳೆದುಕೊಳ್ಳಲಿರುವ ರೈತರಿಗೆ ಹೊಸ ಕಾಯ್ದೆಯನ್ವಯ ಸೂಕ್ತ ಪರಿಹಾರ ಕೊಡಲಾಗುವುದು. ಕೈಗಾರಿಕಾ ರಂಗದಲ್ಲಿ ತಮಿಳುನಾಡು, ಗುಜರಾತ್, ಒಡಿಶಾ, ಅಸ್ಸಾಂ ಮತ್ತಿತರ ರಾಜ್ಯಗಳಿಂದ ನಮಗೆ ತೀವ್ರ ಸ್ಪರ್ಧೆ ಇದೆ. ಅಲ್ಲೆಲ್ಲ ಉದ್ಯಮಿಗಳಿಗೆ ಏನೇನು ಸೌಲಭ್ಯ ಕೊಡಲಾಗುತ್ತಿದೆ, ಕೈಗಾರಿಕಾ ನೀತಿಗಳು ಹೇಗಿವೆ ಎನ್ನುವುದರ ಅರಿವು ನನಗಿದೆ. ಕೈಗಾರಿಕೆ ಮತ್ತು ಕೃಷಿ ಎರಡೂ ಮುಖ್ಯವಾಗಿದ್ದು, ಸರಿದೂಗಿಸಿಕೊಂಡು ಹೋಗುವ ಕೆಲಸ ಅಗತ್ಯವಾಗಿದೆ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು.

ಕಾಂಗ್ರೆಸ್‌ನಲ್ಲಿ ರಾಜಕೀಯ ಬೆಳವಣಿಗೆ ಆಗ್ತಿದೆ: ನಿಖಿಲ್

ಬೀದರ್: ಸೆಪ್ಟೆಂಬರ್ ಕ್ರಾಂತಿ ಆಗುತ್ತಾ ಗೊತ್ತಿಲ್ಲ, ಆದರೆ ಕಾಂಗ್ರೆಸ್‌ನಲ್ಲಿ ರಾಜಕೀಯ ಬೆಳವಣಿಗೆ ಆಗುತ್ತಿದೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅದೇನೋ ಸೆಪ್ಟೆಂಬರ್‌ಗೆ ಕ್ರಾಂತಿ ಆಗುತ್ತೆ, ಕ್ರಾಂತಿಯಾಗುತ್ತದೆ ಎನ್ನುತ್ತಿದ್ದಾರೆ. ಆದರೆ ಆ ಕ್ರಾಂತಿಯಾಗುತ್ತದೋ ಇಲ್ವೋ ಗೊತ್ತಿಲ್ಲ. ಆದರೆ ಕಾಂಗ್ರೆಸ್‌ನಲ್ಲಿ ರಾಜಕೀಯ ಬೆಳವಣಿಗಳು ಆಗುತ್ತಿವೆ. ಕಾದು ನೋಡೋಣ ಎಂದರು.

ಸಿದ್ದರಾಮಯ್ಯನವರು ಐದು ವರ್ಷ ನಾನೇ ಸಿಎಂ ಎಂದು ಹೇಳುತ್ತಿದ್ದಾರೆ. ಆದರೆ ಒಂದಅತು ಸತ್ಯ ಕಾಂಗ್ರೆಸ್‌ನಲ್ಲಿ ಹಲವು ಗುಂಪುಗಳಿದ್ದು, ಕೆಲವು ಗುಂಪುಗಳು ಸೈಲೆಂಟಾಗಿ ಕೆಲಸ ಮಾಡುತ್ತಿವೆ. ಕೆಲವು ಗುಂಪುಗಳು ನೇರವಾಗಿಯೇ ಗುಂಪುಗಾರಿಕೆ ಮಾಡುತ್ತಿದ್ದು, ಈ ಬಗ್ಗೆ ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ನೀಡಿದ್ದಾರೆ. ಈ ಸರಕಾರದ ಮೇಲೆ ರಾಜ್ಯದ ಜನರು ವಿಶ್ವಾಸ ಕಳೆದುಕೊಂಡು ಬಹಳ ದಿನವಾಗಿದ್ದು, ಸರಕಾರ ಕಾಲಹರಣ ಮಾಡುತ್ತಿದೆ ಎಂದರು.

> ಸರಕಾರದ ಆರ್ಥಿಕ ಸ್ಥಿತಿ ತೆರೆದ ಪುಸ್ತಕದ ರೀತಿಯಾಗಿದೆ. ನಿಮ್ಮ ಪಕ್ಷದ ಶಾಸಕರೇ ಅನುದಾನ ಸಿಗುತ್ತಿಲ್ಲ ಎಂದು ಅಸಮಾಧಾನ ಹೊರಹಾಕಿದ್ದಾರೆ. ಶಾಸಕರು ಅಸಹಾಯಕತೆಯಿಂದ ಹೇಳಿಕೆ ನೀಡುತ್ತಿದ್ದು, ಕ್ಷೇತ್ರದ ಅಭಿವೃದ್ಧಿಗೆ ಒಂದು ನಯಾಪೈಸೆಯನ್ನು ನೀಡಿಲ್ಲ.
>
> -ನಿಖಿಲ್ ಕುಮಾರಸ್ವಾಮಿ ಜೆಡಿಎಸ್ ಯುವ ಘಟಕದ ಅಧ್ಯಕ್ಷ

ಎಂಜಿನ್‌ನಲ್ಲಿ ಬೆಂಕಿ: ತಪ್ಪಿದ ಅನಾಹುತ

ರಾಮನಗರ: ತಾಲೂಕಿನ ವಂದಾರಗುಪ್ಪೆ ಬಳಿ ಮೈಸೂರು-ಉದಯಪುರ ನಡುವೆ ಸಂಚರಿಸುವ ಪ್ಯಾಲೇಸ್ ಕ್ವೀನ್ ಹಮ್ ಸಫರ್ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ: 19668) ರೈಲಿನ ಎಂಜಿನ್ ನಲ್ಲಿ ಗುರುವಾರ ಬೆಂಕಿ ಕಾಣಿಸಿಕೊಂಡಿದೆ. ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಮೈಸೂರಿನಿಂದ ಹೊರಟಿದ್ದ ರೈಲು ಬೆಳಗ್ಗೆ 11.45ರ ಸುಮಾರಿಗೆ ಚನ್ನಪಟ್ಟಣ ನಿಲ್ದಾಣ ದಾಟಿ ವಂದಾರಗುಪ್ಪೆ ಬಳಿ ಸಾಗುವಾಗ ಇದ್ದಕ್ಕಿದ್ದಂತೆ ಎಂಜಿನ್ ನಲ್ಲಿ ಬೆಂಕಿ ಕಾಣಿಸಿಕೊಂಡಿತು. ಬೆಂಕಿ ಗಮನಿಸಿದ ಲೋಕೊಪೈಲಟ್ ಕೂಡಲೇ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿ ರೈಲು ನಿಲ್ಲಿಸಿದರು. ಸ್ಥಳಕ್ಕೆ ಬಂದ ಚನ್ನಪಟ್ಟಣದ ಅಗ್ನಿಶಾಮಕ ದಳದ ಸಿಬ್ಬಂದಿ ರೈಲ್ವೆ ನೌಕರರ ಸಹಕಾರದೊಂದಿಗೆ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದರು. ಬಳಿಕ ಸ್ಥಳಕ್ಕೆ ಬೇರೆ ಎಂಜಿನ್ ತಂದು ಅಳವಡಿಸಿದಾಗ ರೈಲು ಹೊರಟಿತು. ಘಟನೆಯಿಂದಾಗಿ ಕೆಲ ರೈಲುಗಳ ಸಂಚಾರದಲ್ಲಿ ವ್ಯತ್ಯಯವಾಗಿದೆ ಎಂದು ರೈಲ್ವೆ ಇಲಾಖೆ ಮೂಲಗಳು ತಿಳಿಸಿವೆ.

ಮೆಮು ರೈಲುಗಳ ಸಂಚಾರ ಭಾಗಶಃ ರದ್ದು: ಜೋಲಾರಪೇಟ್ಟೈಯಲ್ಲಿ ನಡೆಯುತ್ತಿರುವ ಸುರಕ್ಷತಾ ಕಾಮಗಾರಿಗಳ ಹಿನ್ನೆಲೆಯಲ್ಲಿ,ಜು.7 ರಿಂದ 10ರವರೆಗೆ ನಾಲ್ಕು ದಿನಗಳ ಕಾಲ ಕೆಳಗಿನ ಮೆಮು ರೈಲು ಸೇವೆಗಳನ್ನು ಭಾಗಶಃ ರದ್ದುಗೊಳಿಸಲಾಗಿದೆ ಎಂದು ದಕ್ಷಿಣ ರೈಲ್ವೆ ತಿಳಿಸಿದೆ.

ಸ್ವಭಾಷಾ ಚಾತುರ್ಮಾಸ್ಯ ಜು.10ರಿಂದ

ಭಾಷೆ ಸಂವಹನದ ಸಾಧನ ಮಾತ್ರವಲ್ಲ, ಅದು ಸಂಸ್ಕೃತಿ ವಾಹಕವೂ ಹೌದು: ರಾಘವೇಶ್ವರ ಶ್ರೀ

ಗೋಕರ್ಣ: ಗೋಕರ್ಣ ಮಂಡಲಾಧೀಶ್ವರ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿಯವರ 32ನೇ ಚಾತುರ್ಮಾಸ್ಯ ವ್ರತ ಆಷಾಢ ಶುದ್ಧ ಪೂರ್ಣಿಮೆಯಿಂದ ಅಂದರೆ ಜು.10ರಿಂದ ಭಾದ್ರಪದ ಶುದ್ಧ ಪೂರ್ಣಿಮೆಯವರಗೆ ಅಂದರೆ 7ನೇ ಸೆಪ್ಟೆಂಬರ್ 2025ರವರೆಗೆ ಗೋಕರ್ಣ ಅಶೋಕೆಯ ಪುಣ್ಯ ಪರಿಸರದಲ್ಲಿ ಸಂಪನ್ನಗೊಳ್ಳಲಿದೆ ಎಂದು ರಾಘವೇಶ್ವರ ಶ್ರೀಗಳು ತಿಳಿಸಿದರು.

ಅಶೋಕೆಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಚಾತುರ್ಮಾಸ್ಯ ವೈಶಿಷ್ಟ್ಯಗಳ ಬಗ್ಗೆ ವಿವರ ನೀಡಿದ ಅವರು, ಭಾಷೆ ಸಂವಹನದ ಸಾಧನ ಮಾತ್ರವಲ್ಲ. ಅದು ಸಂಸ್ಕೃತಿ ವಾಹಕವೂ ಹೌದು. ಭಾಷೆಯೊಡನೆ ಪರಂಪರೆ ಸಾಗಿಬಂದಿರುತ್ತದೆ. ಹಾಗಾಗಿ ಸ್ವಭಾಷೆಯನ್ನು ಸಂರಕ್ಷಿಸಿಕೊಳ್ಳಬೇಕು. ಅದರಿಂದ ಸ್ವಸಂಸ್ಕೃತಿಯ ಸಂರಕ್ಷಣೆಯಾಗುತ್ತದೆ. ಭಾಷೆಯನ್ನು ರಕ್ಷಿಸುವುದೆಂದರೆ ಅದರಲ್ಲಿ ಮಾತನಾಡುವುದು. ಶುದ್ಧವಾಗಿ ಮಾತನಾಡುವುದು. ಮರೆತು ಹೋದ ಮನೆಮಾತನ್ನು ಮರಳಿ ನೆನಪಿಸುವ ಉದ್ದೇಶದಿಂದ ಈ ಬಾರಿಯ ಚಾತುರ್ಮಾಸ್ಯವನ್ನು ಸ್ವಭಾಷಾ ಚಾತುರ್ಮಾಸ್ಯ ಎಂಬ ಅಭಿದಾನದೊಂದಿಗೆ ಆಚರಿಸಲಾಗುತ್ತಿದೆ. ಈ ಚಾತುರ್ಮಾಸ್ಯ ಸ್ವಭಾಷೆಯನ್ನು ಪರಿಶುದ್ಧವಾಗಿ ಮಾತನಾಡಲು ಪ್ರೇರೇಪಿಸುತ್ತದೆ ಎಂದರು.

ನಾವು ನಮ್ಮ ಭಾಷೆಯನ್ನು ಮಾತನಾಡುವುದು ದೇಶ, ಸಂಸ್ಕೃತಿ, ಭಾಷೆ, ಪರಂಪರೆಗೆ ನಾವು ಸಲ್ಲಿಸುವ ಅತಿದೊಡ್ಡ ಸೇವೆ. ಇದು ಜೀವನಕ್ಕೆ ಸ್ವಾರಸ್ಯವನ್ನೂ ತರುತ್ತದೆ. ಶುದ್ಧವಾದ ಮಾತೃಭಾಷೆಯನ್ನು ಮಾತನಾಡುವ ಪ್ರಯತ್ನ ಸ್ವಭಾಷಾ ಚಾತುರ್ಮಾಸ್ಯದ ತಿರುಳು. ಮರೆತ ಪದಗಳನ್ನು ನೆನಪಿಸಿಕೊಳ್ಳೋಣ. ಪರಕೀಯತೆ ನಮ್ಮ ನಾಲಿಗೆಯಲ್ಲೇ ಇದೆ. ನಮ್ಮ ನಾಲಿಗೆ ಕೆಡಿಸಿಕೊಳ್ಳದಿರೋಣ. ಸಂಸ್ಕಾರದಿಂದ ಶಬ್ದ. ಶಬ್ದದಿಂದ ವಾಕ್ಯ. ಅದು ಭಾಷೆಯ ಮೂಲ. ಆದ್ದರಿಂದ ಪ್ರತಿ ಪದವೂ ತನ್ನೊಂದಿಗೆ ಆ ಭಾಷೆಯ ಸಂಸ್ಕಾರವನ್ನು ತರುತ್ತದೆ ಎಂದು ವಿವರಿಸಿದರು.

ನಮ್ಮ ಮಾತೃಭಾಷೆಯ ಹಲವು ಪದಗಳು ಮರೆತು ಹೋಗಿವೆ. ಕನ್ನಡ ಮಾತನಾಡುವ ಪ್ರಯತ್ನ ಇಂದಿನಿಂದಲೇ ಆರಂಭವಾಗಲಿ. ಕನ್ನಡ ಮಾತನಾಡಬೇಕಾದಲ್ಲಿ ಕನ್ನಡವನ್ನೇ ಮಾತನಾಡೋಣ. ಪರಿಸ್ಥಿತಿಗೆ ಅನುಗುಣವಾಗಿ ಆಂಗ್ಲಭಾಷೆ ಮಾತನಾಡಿದರೆ ತಪ್ಪಲ್ಲ. ಆದರೆ ಕನ್ನಡದ ಜತೆ ಅದನ್ನು ಬೆರೆಸುವುದು ಬೇಡ. ಹಾಗೆ ಮಾಡಿದರೆ ಇಡೀ ಸಮಾಜವೇ ಭಾಷೆ ಇಲ್ಲದ ಸಮಾಜವಾಗಿ ಮಾರ್ಪಾಡಾಗುತ್ತದೆ. ಈ ಸಮಾಜವನ್ನು ಬದಲಾಯಿಸುವ ಕಾರ್ಯ ಇಂದಿನಿಂದಲೇ ಆರಂಭವಾಗಲಿ. ಚಾತುರ್ಮಾಸ್ಯದಲ್ಲಿ ನಾಲಿಗೆ ಶುದ್ಧೀಕರಣದ ಕಾರ್ಯ ಮಾಡೋಣ. ನಮ್ಮತನವನ್ನು ಉಳಿಸಿಕೊಳ್ಳೋಣ ಎಂದು ಆಶಿಸಿದರು.

ಚಾತುರ್ಮಾಸ್ಯ ಸೇವಾಬಿಂದುಗಳಾದ ಮಂಜುನಾಥ ಸುವರ್ಣಗದ್ದೆ, ಪ್ರಸನ್ನ ಕುಮಾರ್ ಟಿ.ಜಿ, ಜಿ.ಕೆ.ಹೆಗಡೆ, ಶ್ರೀಕಾಂತ್ ಪಂಡಿತ್, ಉದಯಶಂಕರ ಭಟ್, ಮಧು ಜಿ.ಕೆ, ಜಿ.ಎಸ್.ಹೆಗಡೆ, ಸುಬ್ರಾಯ ಭಟ್, ಆರ್.ಜಿ.ಹೆಗಡೆ, ಕೆ.ಎಲ್.ಹೆಗಡೆ, ರಾಜು ಹೆಬ್ಬಾರ್, ಉದಯ ಭಟ್, ರಾಜಾರಾಂ ಭಟ್, ಜಿ.ವಿ.ಹೆಗಡೆ, ಮಹೇಶ್ ಹೆಗಡೆ ಮತ್ತಿತರರು ಉಪಸ್ಥಿತರಿದ್ದರು.

ನಾನಾ ಕಾರ್ಯಕ್ರಮಗಳು

ಗುರುವಾರ ಜುಲೈ 10ರಂದು ಶ್ರೀ ವ್ಯಾಸಪೂಜೆಯೊಂದಿಗೆ ಚಾತುರ್ಮಾಸ್ಯ ವ್ರತ ಆರಂಭವಾಗಲಿದೆ. ಚಾತುರ್ಮಾಸ್ಯ ಸಂದರ್ಭದಲ್ಲಿ 13ರಂದು ಶ್ರೀವರ್ಧಂತಿ ಕಾರ್ಯಕ್ರಮ ನಡೆಯಲಿದೆ. ಜುಲೈ 21 ಮತ್ತು ಆಗಸ್ಟ್ 19ರಂದು ಎರಡು ಸ್ವಭಾಷಾ ಗೋಷ್ಠಿ ನಡೆಯಲಿದೆ. ಆಗಸ್ಟ್ 16ರಂದು ಶ್ರೀಕೃಷ್ಣ ಜನ್ಮಾಷ್ಟಮಿ, 27ರಂದು ಶ್ರೀಗಣೇಶ ಚತುರ್ಥಿ ಆಚರಿಸಲಾಗುತ್ತದೆ. ಸೆಪ್ಟೆಂಬರ್ 7ರಂದು ಸೀಮೋಲ್ಲಂಘನದೊಂದಿಗೆ ಚಾತುರ್ಮಾಸ್ಯ ಸಂಪನ್ನಗೊಳ್ಳಲಿದೆ ಎಂದು ಶ್ರೀಗಳು ಹೇಳಿದರು.

> ಮನೆಮಾತು ಮರೆತು ಹೋಗಿದೆ. ಉಪಭಾಷೆಗಳು ಬಹುತೇಕ ನಶಿಸಿವೆ. ಕನ್ನಡ ಮಾತನಾಡುವ ಸಂದರ್ಭದಲ್ಲೂ ಕನ್ನಡವನ್ನು ಕಡೆಗಣಿಸುತ್ತೇವೆ. ನಮ್ಮ ಭಾಷೆಯಲ್ಲಿ ಬೇರೆ ಭಾಷೆ ತೂರಿಕೊಂಡಿದೆ. ಈ ಬಾರಿ ಚಾತುರ್ಮಾಸ್ಯ ಭಾಷೆ ಶುದ್ಧಗೊಳಿಸುವ ಪ್ರಯತ್ನಕ್ಕೆ ಶ್ರೀಕಾರ ಹಾಕಲಿದೆ.
>
> -ರಾಘವೇಶ್ವರ ಶ್ರೀ

ಆನ್‌ಲೈನ್ ಗೇಮ್‌ನಲ್ಲಿ 18 ಲಕ್ಷ ಕಳೆದುಕೊಂಡ ಯುವಕ

ದಾವಣಗೆರೆ: ಆನ್‌ಲೈನ್ ಗೇಮ್‌ನಲ್ಲಿ ಬರೋಬ್ಬರಿ 18 ಲಕ್ಷ ರು. ಹಣ ಕಳೆದುಕೊಂಡು ಯುವಕನೊಬ್ಬ ನೇಣಿಗೆ ಶರಣಾದ ಘಟನೆ ದಾವಣಗೆರೆಯಲ್ಲಿ ನಡೆದಿದೆ.

ಮೃತನನ್ನು ಸರಸ್ವತಿ ನಗರದ ಶಶಿ ಕುಮಾರ್ (25) ಎಂದು ಗುರುತಿಸಲಾಗಿದೆ. ಯುವಕ ಆನ್‌ಲೈನ್ ಗೇಮ್‌ನಲ್ಲಿ 18 ಲಕ್ಷ ರು. ಕಳೆದುಕೊಂಡಿದ್ದ. ಇದರಿಂದ ನೊಂದು ಆನ್‌ಲೈನ್ ಗೇಮ್ ನಿಷೇಧಿಸುವಂತೆ ಪ್ರಧಾನಿ, ಮುಖ್ಯಮಂತ್ರಿಗಳಿಗೆ ಡಿಸಿ ಹಾಗೂ ಎಸ್ಪಿ ಮುಖಾಂತರ ಮನವಿ ಮಾಡಿಕೊಂಡಿದ್ದ. ದೂರು ನೀಡಿದರು ಯಾವುದೇ ಕ್ರಮವಾಗದ ಹಿನ್ನೆಲೆ ಸೆಲ್ಫಿ ವಿಡಿಯೊ ಮಾಡಿ ಯುವಕ ನೋವು ತೋಡಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ.

ಸೆಲ್ಫಿ ವಿಡಿಯೊ ಮಾಡಿಟ್ಟು ನೇಣಿಗೆ ಶರಣು

ಡೆತ್‌ನೋಟ್‌ನಲ್ಲಿ ಗೇಮ್‌ನ ಅಕ್ರಮದ ಬಗ್ಗೆ ಯುವಕ ಅನಾವರಣ ಮಾಡಿದ್ದಾನೆ. ಅದರಲ್ಲಿ, ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಅವರ ಹೆಸರು ಪ್ರಸ್ತಾಪ ಮಾಡಿ, ಕ್ರಮಕೈಗೊಳ್ಳುವಂತೆ ಮನವಿ ಮಾಡಿದ್ದಾನೆ. ನನ್ನಂತೆ ಹಣ ಕಳೆದುಕೊಂಡು ನೋವು ಅನುಭವಿಸುವುದು ಕಡಿಮೆಯಾಗಲಿ ಎಂದು ವಿಡಿಯೊದಲ್ಲಿ ಹೇಳಿಕೊಂಡಿದ್ದಾನೆ. ಕೆಟಿಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

www.pravasiprapancha.com
ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್ ವಿಸಿಟ್ ಮಾಡಿ

ವಿಶ್ವವಾಣಿ

ಸಂಪಾದಕೀಯ

ಮತ್ತೊಮ್ಮೆ ಸತ್ಯದ ಅನಾವರಣ

ಯಶಸ್ಸಿಗೆ ಅಪ್ಪಂದಿರು ಹಲವರು, ಆದರೆ ಸೋಲು ಮಾತ್ರ ಅನಾಥ' ಎಂಬುದೊಂದು ಮಾತಿದೆ. ನಿಯೋಜಿತ ಕಾರ್ಯಭಾರದ ನೆರವೇರಿಕೆಯ ಹಾದಿಯಲ್ಲಿ ಮುಳ್ಳುಗಳೇ ತುಂಬಿವೆ, ಹೆಜ್ಜೆ ಹೆಜ್ಜೆಗೂ ಸಂಕಷ್ಟ-ಸವಾಲುಗಳು ಎದುರಾಗುತ್ತವೆ ಎಂಬುದು ಪೂರ್ವಭಾವಿಯಾಗಿ ಅರಿವಾಗುತ್ತಿದ್ದಂತೆ ಆ ಕಡೆ ತಲೆಯಿಟ್ಟೂ ಮಲಗದವರು, ಒಂದೊಮ್ಮೆ ಆ ಕಾರ್ಯಭಾರ ಯಶಸ್ಸು ಕಂಡಿತೆಂದರೆ, 'ಇದರಲ್ಲಿ ನನ್ನ ಯೋಗದಾನವೂ ಇತ್ತು' ಎಂದು ಹೇಳಿಕೊಳ್ಳಲು ಹಪಹಪಿಸುವುದಿದೆ. ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕಿಸ್ತಾನ-ಪ್ರೇರಿತ ಉಗ್ರರು ನಡೆಸಿದ ಅಮಾಯಕರ ಮಾರಣಹೋಮಕ್ಕೆ ಪ್ರತೀಕಾರ ತೀರಿಸಿಕೊಳ್ಳಲು ಮುಂದಾದ ಭಾರತವು ಪಾಕಿಸ್ತಾನದ ಮೇಲೆ 'ಆಪರೇಷನ್ ಸಿಂದೂರ' ಹೆಸರಲ್ಲಿ ದಾಳಿಗೆ ಶುರುವಿಟ್ಟುಕೊಂಡಿತು. ಇದರ ತೀವ್ರತೆಯನ್ನು ತಡೆದುಕೊಳ್ಳಲಾಗದೆ ಪಾಕಿಸ್ತಾನ ದಮ್ಮಯ್ಯಗುಡ್ಡೆ ಹಾಕಿದಾಗ 'ಕದನವಿರಾಮ'ಕ್ಕೆ ಭಾರತ ಒಪ್ಪಿತು. ಆದರೆ ಇದು ತಮ್ಮಿಂದಾಗಿಯೇ ನೆರವೇರಿದ್ದು ಎಂಬ ರೀತಿಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಲ್ಲೆಂದರಲ್ಲಿ ಹೇಳಿಕೊಂಡು ತಿರುಗಾಡತೊಡಗಿದಾಗ, ವಾಸ್ತವ ಸಂಗತಿಯೇನು ಎಂಬುದನ್ನು ಭಾರತದ ಪ್ರಧಾನಿ ಮೋದಿಯವರು ಸೂಕ್ಷ್ಮವಾಗಿ ಮಂಡಿಸಿದ್ದುಂಟು. ಇಷ್ಟಾಗಿಯೂ ಟ್ರಂಪ್ ಬಡಬಡಿಕೆ ನಿಂತಿರಲಿಲ್ಲ. ಈಗ ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ನೀಡಿರುವ ಹೇಳಿಕೆಯನ್ನು ಗಮನಿಸಿಯಾದರೂ ಟ್ರಂಪ್ ತಮ್ಮ ಬಾಯಿಗೆ ಬೀಗ ಹಾಕಿಕೊಳ್ಳುವರೇ ಎಂಬುದನ್ನು ಕಾದುನೋಡಬೇಕಿದೆ. ''ಭಾರತವು 'ಆಪರೇಷನ್ ಸಿಂದೂರ' ಕಾರ್ಯಾಚರಣೆಯನ್ನು ನಿಲ್ಲಿಸಲು ಹಾಗೂ ಭಾರತ-ಪಾಕ್ ನಡುವೆ ಕದನವಿರಾಮದ ಸ್ಥಿತಿ ಏರ್ಪಡಲು ಪಾಕಿಸ್ತಾನ ಸೇನೆಯ ಉನ್ನತಾಧಿಕಾರಿಯು ಬೇಡಿಕೊಂಡಿದ್ದೇ ಕಾರಣ. ಈ ಕದನವಿರಾಮ ಏರ್ಪಡುವುದರಲ್ಲಿ ಅಮೆರಿಕ ಸೇರಿದಂತೆ ಬೇರಾವ ದೇಶದ ಪಾತ್ರವೂ ಇಲ್ಲ'' ಎಂದು ಜೈಶಂಕರ್ ಅವರು ನ್ಯೂಯಾರ್ಕ್‌ನಲ್ಲಿ ಇತ್ತೀಚೆಗೆ ಪಾಲ್ಗೊಂಡ ಮಾಧ್ಯಮ ಸಂದರ್ಶನದಲ್ಲಿ ನೇರವಾಗಿ ಹೇಳಿರುವುದು ಈ ಅಭಿಪ್ರಾಯಕ್ಕೆ ಕಾರಣ. ಡೊನಾಲ್ಡ್ ಟ್ರಂಪ್ ಅವರು ಇನ್ನಾದರೂ ವಿವೇಚನೆಯಿಂದ ನಡೆದುಕೊಂಡರೆ ಒಳಿತು.

ಸೊಂಪಾದಕೀಯ

ಎಲ್ಲಮ್ಮನ್ ದುಡ್ಡು, ಯಾರದ್ದೋ ಜಾತ್ರೆ

ಜನರಿಗೆ ದೇವರ ಬಗ್ಗೆ ಎಷ್ಟೇ ಭಕ್ತಿ ಇದ್ರೂ, ದೇವಸ್ಥಾನಗಳಲ್ಲಿ ಹುಂಡಿ ಕಳ್ಳತನ ಆಗೋ ಕೆಲಸ ಮಾತ್ರ ಇನ್ನೂ ನಡೆಯುತ್ತಲೇ ಇದೆ. ಹಾಗಂತ ಭಗವಂತನನ್ನು ನಂಬುವವರು ಹುಂಡಿಗೆ ಹಣ ಹಾಕ್ತಾರೆ, ನಂಬದೇ ಇರುವವರು ಹುಂಡಿಯಿಂದ ಹಣ ಕದೀತಾರೆ ಅನ್ನೋ ಹಾಗೂ ಇಲ್ಲ. ಯಾಕಂದ್ರೆ, ಕೆಲ ದಿನಗಳ ಹಿಂದೆ ಸಿಕ್ಕಿಬಿದ್ದ ಖತರ್‌ನಾಕ್ ಕಳ್ಳನೊಬ್ಬ ಪ್ರತಿಸಲ ಕದ್ದಾಗಲೂ ತನ್ನ ಊರಿನ ದೇವಸ್ಥಾನಕ್ಕೆ ಹೋಗಿ ಅಲ್ಲಿನ ದೇವರಿಗೆ ತಪ್ಪು ಕಾಣಿಕೆ ಹಾಕಿ ಆಮೇಲೆ ಕದ್ದ ಬಂಗಾರವನ್ನು ಮಾರಾಟ ಮಾಡುತ್ತಿದ್ದನಂತೆ. ಅದಕ್ಕಿಂತ ಗಾಬರಿ ಬೀಳಿಸೋ ವಿಷಯ ಅಂದ್ರೆ, ಅವನು ಮೊದಲು ಅದೇ ದೇವಸ್ಥಾನದಲ್ಲಿ ಪೂಜಾರಿ ಆಗಿದ್ದನಂತೆ ಅನ್ನೋದು. ಹಾಗಾಗಿ ಹುಂಡಿಗೆ ಕನ್ನ ಹಾಕುವವರೆಲ್ಲ ನಾಸ್ತಿಕರು ಅನ್ನಂಗಿಲ್ಲ. ಒಟ್ಟಿನಲ್ಲಿ ಸುಲಭವಾಗಿ ಸಿಕ್ಕರೆ ದೇವರ ದುಡ್ಡನ್ನೂ ಕಳ್ಳರು ಬಿಡ್ತಾ ಇಲ್ಲ. ಕೆಲ ದಿನಗಳ ಹಿಂದೆ ಎಲ್ಲಮ್ಮದೇವಿಯ ದೇವಸ್ಥಾನದ ಹುಂಡಿಗೆ ಕನ್ನ ಹಾಕಿ ಕಳ್ಳರು ಎಲ್ಲವನ್ನೂ ದೋಚಿದ ಮೇಲೆ 'ಎಲ್ಲಮ್ಮನ್ ದುಡ್ಡು, ಯಾರದ್ದೋ ಜಾತ್ರೆ' ಅಂತ ಜನ ತಮಗೆ ತೋಚಿದಂತೆ ಮಾತಾಡಿದ್ದು ಕೇಳಿಬಂದಿತ್ತು. ಇದನ್ನೆಲ್ಲ ನೋಡಿಯೇ ಏನೋ ಕೆಲ ದಿನಗಳ ಹಿಂದೆ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನದಲ್ಲಿ ಗರ್ಭಗುಡಿಯ ಬಾಗಿಲ ಸಂದಿನಲ್ಲಿ ಹಾವೊಂದು ಒಂದಷ್ಟು ದಿನ ಠಿಕಾಣಿ ಹೂಡಿತ್ತು. ಸಾಮಾನ್ಯವಾಗಿ ಹಾವುಗಳು ನಿಧಿ ಕಾಯುತ್ತವೆ ಅನ್ನೋದು ನಂಬಿಕೆಯ ಮಾತು. ಹಾಗಾಗಿ ಈಗ ನಾಗರಾಜ ಕೂಡಾ ದೇವಸ್ಥಾನದ ಹುಂಡಿಯನ್ನು ಕಾಯುತ್ತಾ ಅಲ್ಲೇ ಮೊಕ್ಕಾಂ ಹೂಡಿದ್ದನಾ ಅನ್ನೋ ಅನುಮಾನ ಬಂದರೆ ತಪ್ಪೇನಿಲ್ಲ. ಯಾಕಂದ್ರೆ, ಆಮೇಲೆ ಎಷ್ಟೋ ಹೊತ್ತಿನ ನಂತರ ನಾಗಪ್ಪ ಜಾಗ ಖಾಲಿಮಾಡಿದನಂತೆ!

ಸಂಪಾದಕರ ಸದ್ಯಶೋಧನೆ

ಕಿಸ್ಸಿಂಗ್ ಲ್ಯಾಂಡಿಂಗ್ ಅಂದರೇನು?

ಕೆಲ ದಿನಗಳ ಹಿಂದೆ ನಾನು ಬೆಂಗಳೂರಿನಿಂದ ಸಿಂಗಾಪುರಕ್ಕೆ ಹೋಗುವಾಗ, ವಿಮಾನ ಸಿಂಗಾಪುರದ ಚಾಂಗಿ ವಿಮಾನ ನಿಲ್ದಾಣದಲ್ಲಿ ಇಳಿದಾಗ ಪೈಲಟ್, Ladies and Gentlemen, that was a kissing landing! ಎಂದು ಉದ್ಗರಿಸಿದ. ನನ್ನ ಪಕ್ಕದಲ್ಲಿದ್ದ ಮಹಿಳೆಯೊಬ್ಬಳು, 'ಕಿಸ್ಸಿಂಗ್ ಲ್ಯಾಂಡಿಂಗ್' ಎಂಬ ಪದವನ್ನು ಕೇಳಿ ಕಿಸಕ್ಕನೆ ನಕ್ಕಳು. ಪ್ರಾಯಶಃ ಪೈಲಟ್ ಜೋಕ್ ಮಾಡುತ್ತಿರಬಹುದು ಎಂದು ಆಕೆ ಭಾವಿಸಿರಬೇಕು. ನಿಜ, ಒಮ್ಮೊಮ್ಮೆ ವಿಮಾನ ಭೂಸ್ಪರ್ಶ ಮಾಡಿದ್ದು ಗೊತ್ತೇ ಆಗುವುದಿಲ್ಲ. ಅಷ್ಟು smooth ಆಗಿ ಲ್ಯಾಂಡ್ ಆಗುತ್ತದೆ. ವಿಮಾನದ ಹಿಂದಿನ ಚಕ್ರಗಳು ರನ್‌ವೇ ಮೇಲೆ ಇಳಿದಿದ್ದು ಗೊತ್ತೇ ಆಗುವುದಿಲ್ಲ. ಇದನ್ನು 'ಕಿಸ್ಸಿಂಗ್ ಲ್ಯಾಂಡಿಂಗ್' (Kissing Landing) ಅಂತ ಕರೆಯುತ್ತಾರೆ. ಇದು ವಿಮಾನ, ರನ್‌ವೇಗೆ ಹಿತವಾಗಿ ಚುಂಬಿಸಿದಂತಿರುವುದರಿಂದ ಆ ಹೆಸರು. ವಿಮಾನ ಪ್ರಯಾಣದ ಸಮಯದಲ್ಲಿ ಇಳಿಯುವ ಕ್ಷಣ ಬಹು ಮುಖ್ಯ. ಆ ಕ್ಷಣದಲ್ಲಿ ಪ್ರಯಾಣಿಕರೂ ಉದ್ವಿಗ್ನತೆಗೆ ಒಳಗಾಗಿರುತ್ತಾರೆ. ಕೆಲವೊಮ್ಮೆ, ವಿಮಾನ ರನ್‌ವೇಗೆ ಜೋರಾಗಿ ಅಪ್ಪಳಿಸುವುದುಂಟು. ಇದು ಪ್ರಯಾಣಿಕರಲ್ಲಿ ಅತೀವ ಭಯವನ್ನು ಹುಟ್ಟಿಸುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ, ವಿಮಾನದ ಎಂಜಿನ್‌ನ ಶಬ್ದವನ್ನು ಬಿಟ್ಟರೆ, ವಿಮಾನ ಇಳಿದಿದ್ದೇ ಗೊತ್ತಾಗುವುದಿಲ್ಲ. ಇದನ್ನೇ 'ಕಿಸ್ಸಿಂಗ್ ಲ್ಯಾಂಡಿಂಗ್' ಅಂತ ಕರೆಯುವುದು. ಇದು ಪೈಲಟ್‌ನ ನೈಪುಣ್ಯದ ಸೂಚಕ. ವಾಸ್ತವವಾಗಿ, ವಿಮಾನವನ್ನು ಹೀಗೆ ಇಳಿಸಲು ಅನೇಕ ಸಾಂದರ್ಭಿಕ ಹಾಗೂ ತಾಂತ್ರಿಕ ಅಂಶಗಳು ಕಾರಣವಾಗುತ್ತವೆ. ಆ ಪೈಕಿ ವಿಮಾನ ಇಳಿಕೆಯ ಗತಿ (Rate of Descent) ಮುಖ್ಯ. ವಿಮಾನ ಎಷ್ಟು ವೇಗದಲ್ಲಿ ಇಳಿಯುತ್ತಿದೆ ಎಂಬುದು ಬಹಳ ಮುಖ್ಯವಾಗುತ್ತದೆ. ಇಳಿಯುವ ವೇಗ ಹೆಚ್ಚಿದ್ದರೆ, ಅದು ರನ್‌ವೇಗೆ ಅಪ್ಪಳಿಸಬಹುದು. ಕಡಿಮೆ ವೇಗದ ಇಳಿಕೆ ಮೃದು ಸ್ಪರ್ಶಕ್ಕೆ ಕಾರಣವಾಗಬಹುದು. ವಿಮಾನವನ್ನು ಇಳಿಸುವಾಗ ಫ್ಲೇರ್ ಟೆಕ್ನಿಕ್ (Flare Technique) ಬಳಸುತ್ತಾರೆ. 'ಫ್ಲೇರ್' ತಂತ್ರದಲ್ಲಿ, ರನ್‌ವೇಗೆ ಹತ್ತಿರ ಬಂದ ನಂತರ ವಿಮಾನದ ಮೂತಿಯನ್ನು ಸ್ವಲ್ಪ ಮೇಲಕ್ಕೆ ಎತ್ತಲಾಗುತ್ತದೆ. ಇದರಿಂದ ವಿಮಾನದ ಹಿಂಭಾಗ ಕೆಲ ಕ್ಷಣ ರನ್‌ವೇ ಮೇಲೆ ಹಾರಿ ನಿಧಾನವಾಗಿ ಭೂಮಿಗೆ ಸ್ಪರ್ಶಿಸುತ್ತದೆ. ಈ ಸ್ಪರ್ಶವೇ 'ಕಿಸ್ಸಿಂಗ್ ಲ್ಯಾಂಡಿಂಗ್'. ಈ ಸಮಯದಲ್ಲಿ ಪೈಲಟ್ ವಿಮಾನದ ಎತ್ತರ ಹಾಗೂ ವೇಗವನ್ನು ನಿಖರವಾಗಿ ನಿಯಂತ್ರಿಸುತ್ತಾನೆ. ಟಚ್‌ಡೌನ್ ಸಮಯದಲ್ಲಿ ವಿಮಾನವು ಹೇಗೆ (vertically) ಇಳಿಯುತ್ತಿದೆ ಎಂಬುದು ಈ ಸ್ಪರ್ಶದ ಗತಿಯನ್ನು ನಿರ್ಧರಿಸುತ್ತದೆ. ಕಡಿಮೆ ವರ್ಟಿಕಲ್ ಸ್ಪೀಡ್ ಇದ್ದರೆ ಕಿಸ್ಸಿಂಗ್ ಲ್ಯಾಂಡಿಂಗ್ ಸಾಧ್ಯವಾಗುತ್ತದೆ. ರನ್‌ವೇ ಆರಂಭದ 1000–1500 ಅಡಿ ಒಳಗಡೆ ವಿಮಾನ ಇಳಿಯಬೇಕು. ಹೆಚ್ಚಿನ ಸಮಯ ರನ್‌ವೇ ಮೇಲೆ ಹಾರು(ಹೋವರ್)ವುದರಿಂದ ರನ್‌ವೇ ಮುಗಿಯುವ ಅಪಾಯವಿರುತ್ತದೆ. ಕೆಲವೊಮ್ಮೆ ನಿಖರ ಕಿಸ್ ಮಾಡುವ ಉದ್ದೇಶದಿಂದ ಸುರಕ್ಷಿತ ಟಚ್‌ಡೌನ್ ಮಿಸ್ ಆಗಬಹುದು. ಹೇಗೆಯೇ ಲ್ಯಾಂಡ್ ಮಾಡುವುದಿದ್ದರೂ, ಸುರಕ್ಷಿತ ರನ್‌ವೇ ವಲಯದಲ್ಲಿಯೇ ಮಾಡಬೇಕು. ವೈಮಾನಿಕ ಸುರಕ್ಷಾ ಮಾರ್ಗದರ್ಶಿ ಈ ವಿಷಯದಲ್ಲಿ ಒಂದು ಸ್ಪಷ್ಟ ಮಾತನ್ನು ಹೇಳಿದೆ- Smooth is nice, but safety is necessary. ಅನುಭವಿ ಪೈಲಟ್‌ಗಳು ಬಲವಾದ ಗಾಳಿ ಇರುವಾಗಲೂ ಮೃದು ಲ್ಯಾಂಡಿಂಗ್ ಅಥವಾ ಕಿಸ್ಸಿಂಗ್ ಲ್ಯಾಂಡಿಂಗ್ ಮಾಡುತ್ತಾರೆ. ಕಡಿಮೆ ದೃಶ್ಯವ್ಯಾಪ್ತಿಯಲ್ಲಿಯೂ ವಿಮಾನವನ್ನು ನಿರ್ದಿಷ್ಟ ಸ್ಥಳದಲ್ಲಿಯೇ ಕಿಸ್ಸಿಂಗ್ ಲ್ಯಾಂಡಿಂಗ್ ಮಾಡುತ್ತಾರೆ. ಇಲ್ಲಿ ಪ್ರಯಾಣಿಕರು ತಿಳಿಯಬೇಕಾದ ಒಂದು ಸಂಗತಿಯಿದೆ. ಅದೇನೆಂದರೆ, ಸಾಮಾನ್ಯವಾಗಿ ಎಲ್ಲ ವಿಮಾನಗಳು Autoland ಅಥವಾ Assisted Landing featureಗಳನ್ನು ಹೊಂದಿರುತ್ತವೆ. ಇವು ರನ್‌ವೇ ಮೇಲೆ ಇರುವ instrument landing system (ILS)ನ ಸಹಾಯದಿಂದ ಪೈಲಟ್‌ಗೆ ದಿಕ್ಕಿನ ಬಗ್ಗೆ ಸ್ಪಷ್ಟ ಮಾರ್ಗದರ್ಶನ ನೀಡುತ್ತವೆ. ಆದರೂ, ಈ ವ್ಯವಸ್ಥೆಗಳನ್ನು ಸರಿಯಾಗಿ ಬಳಸುವುದು, ತುರ್ತು ಸಂದರ್ಭಗಳಲ್ಲಿ ನಿಖರ ನಿರ್ಧಾರಗಳನ್ನು ತೆಗೆದುಕೊಳ್ಳುವುದು, ಪೈಲಟ್‌ನ ನೈಪುಣ್ಯಕ್ಕೆ ಬಿಟ್ಟ ವಿಚಾರ. ಕಿಸ್ಸಿಂಗ್ ಲ್ಯಾಂಡಿಂಗ್ ಮಾಡುವಾಗ ಗಾಳಿಯ ವೇಗ, ದಿಕ್ಕು, ಮಳೆ, ಮಂಜು ಇತ್ಯಾದಿ ಲ್ಯಾಂಡಿಂಗ್‌ನ ಮೇಲೆ ಪರಿಣಾಮ ಬೀರುತ್ತವೆ. ರನ್‌ವೇ ಮೇಲೆ ನೀರು, ಹಿಮವಿದ್ದರೆ, ಮೃದು ಲ್ಯಾಂಡಿಂಗ್ ಕಷ್ಟ. ವಿಮಾನ ಕೊನೆಯ 50–100 ಅಡಿ ಎತ್ತರದಲ್ಲಿ ಹಾರುವಾಗ ಕಿಸ್ಸಿಂಗ್ ಲ್ಯಾಂಡಿಂಗ್ ಗುರಿ ಸಾಧಿಸುವುದು ಸಾಧ್ಯವಾಗುತ್ತದೆ. ಆಟೋಮೇಷನ್ ಮೂಲಕವೂ ವಿಮಾನ ಕಿಸ್ಸಿಂಗ್ ಲ್ಯಾಂಡಿಂಗ್ ಸಾಧಿಸಬಹುದು. ಆದರೆ ಪೈಲಟ್ ಸಮಯಪ್ರಜ್ಞೆ ಮತ್ತು ಚಮತ್ಕಾರವೂ ಅಷ್ಟೇ ಮುಖ್ಯ. ಕಿಸ್ಸಿಂಗ್ ಲ್ಯಾಂಡಿಂಗ್ ಎಂಬುದು ಕೇವಲ ಮೃದು ಸ್ಪರ್ಶವಷ್ಟೇ ಅಲ್ಲ, ಅದು ಪೈಲಟ್‌ಗಳ ತಂತ್ರಜ್ಞಾನ ಅರಿವು, ತರಬೇತಿ ಮತ್ತು ತೀರ್ಮಾನಗಳ ಸಮನ್ವಯದ ಫಲಿತಾಂಶವೂ ಹೌದು.

ಮಂಗಕ್ಕೇ ಐವತ್ತು ಲಕ್ಷವಾದರೆ- ಮನುಷ್ಯನಿಗೆಷ್ಟು?

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಕೆಲವು ಓದುಗರು ಹಿಂದಿನ ವಾರದ ಲೇಖನಕ್ಕೆ ಮನಸ್ಸು ಭಾರವಾಯಿತು, ಓದಿ ಕಷ್ಟವೆನಿಸಿತು ಎಂದು ಅಭಿಪ್ರಾಯ ಹಂಚಿಕೊಂಡಿರಿ. ನನಗೂ ಅಷ್ಟೇ. ಕೆಲವು ಅನುಭವವನ್ನು ಅಕ್ಷರಕ್ಕಿಳಿಸುವಾಗ ಮನಸ್ಸು ಆರ್ದ್ರವಾಗುತ್ತದೆ. ಕೆಲವು ಭಾವ ತೀವ್ರತೆಗಳನ್ನು ಶಬ್ದಗಳಲ್ಲಿ ಅದರಲ್ಲೂ ಬರೆಯುವಾಗ ಪುನರ್‌ಅನುಭವವಾಗಿ ಕಷ್ಟವೆನಿಸುತ್ತದೆ. ಮನಕಲಕುವ ಸನ್ನಿವೇಶ, ಸತ್ಯ ಕಣ್ಣೆದುರಾದಾಗ, ಅದರ ತೀವ್ರತೆ ಎಷ್ಟಿರುತ್ತದೆಯೆಂದರೆ ಆ ಕ್ಷಣಕ್ಕೆ ನಾವು ಕೇವಲ ನಿರ್ಭಾವುಕ ಸಾಕ್ಷಿಯಾಗಿಬಿಡುತ್ತೇವೆ. ಪ್ರಾಣಿಗಳ ಮೇಲಿನ ಪ್ರಯೋಗವನ್ನು ಕಂಡಾಗಲೆಲ್ಲ ನೈತಿಕತೆ ಮತ್ತು ಅಗತ್ಯತೆಗಳೆರಡರ ಪ್ರಶ್ನೋತ್ತರಗಳ ಪೈಕಿ ಯಾವುದು ಸರಿ, ಯಾವುದು ತಪ್ಪು ಎಂಬ ಗೊಂದಲ. ಇಂತಲ್ಲಿ ಸರಿ ತಪ್ಪು ಪ್ರಶ್ನೆಗಳೇ ಅಪ್ರಸ್ತುತವೇ ಎಂಬ ಪ್ರಶ್ನೆ ಏಳುತ್ತದೆ. ಇಂಥ ಪ್ರಶ್ನೆಗಳನ್ನು ಹಾಗೆಯೇ ಓದುಗರ ಮುಂದೆ ಇರಿಸಿ ವಿವೇಚಿಸುವಂತೆ ಮಾಡಿದರೆ ಮಾತ್ರ ಲೇಖನಕ್ಕೆ, ವಿಚಾರಕ್ಕೆ ನ್ಯಾಯ. ಲೇಖನಕ್ಕೆ ಅಭಿಪ್ರಾಯಿಸಿದ ಎಲ್ಲರಲ್ಲಿಯೂ ಈ ಇಡೀ ವ್ಯವಸ್ಥೆಯ ಬಗ್ಗೆ ಮರುಕದ ಜತೆ ಪ್ರಾಣಿಗಳತ್ತ ಕನಿಕರ ಸ್ಪಷ್ಟವಾಗಿತ್ತು. ಅರಿವು ಮತ್ತು ಸಹಾನುಭೂತಿ ಇದುವೇ ಲೇಖನದ ಆಶಯವಾಗಿತ್ತು.

ವೈದ್ಯಕೀಯ ಆವಿಷ್ಕಾರಗಳು ಪ್ರಯೋಗಾಲಯದ ಪಂಜರದೊಳಗೆ ಆರಂಭವಾದರೆ, ಅಲ್ಲಿಂದ ಮುಂದೆ ಸರಕಾರಿ ಒಪ್ಪಿಗೆಗಳು ಇತ್ಯಾದಿ ಮುಗಿಸಿದ ನಂತರ ಮನುಷ್ಯನ ಮೇಲೆ ಪ್ರಯೋಗವಾಗಲು ಅಣಿಯಾಗುತ್ತವೆ. ಅದರಲ್ಲಿ ಒಂದಿಷ್ಟು ಹಂತಗಳಿವೆ.

ಮೊದಲನೇ ಹಂತದಲ್ಲಿ ಮೊಟ್ಟಮೊದಲ ಬಾರಿ ಔಷಧಿ ಮನುಷ್ಯನ ಮೇಲೆ ಪ್ರಯೋಗವಾಗುತ್ತದೆ. ವಿಜ್ಞಾನ ಮನುಷ್ಯನನ್ನು ಸಂಧಿಸುವುದು ಈಗ, ಈ ಹಂತದಲ್ಲಿ. ಆದರೆ ಈ ಪ್ರಯೋಗವಾಗುವುದು ಮಾತ್ರ ರೋಗಿಗಳ ಮೇಲಲ್ಲ. ಬದಲಿಗೆ ಸುಮಾರು 20–100 ಮಂದಿ ಆರೋಗ್ಯವಂತ, ದೃಢಕಾಯದವರ ಮೇಲೆ. ಔಷಧಿ ಇರುವುದು ರೋಗಿಗಳಿಗೆ, ರೋಗಕ್ಕೆ. ಹಾಗಾದರೆ ಆರೋಗ್ಯಕರ ಜನರ ಮೇಲೇಕೆ ಮೊದಲ ಪ್ರಯೋಗ? ಪ್ರಾಣಿಗಳು, ಇಲಿ, ಮಂಗ ಇತ್ಯಾದಿಗಳ ಮೇಲಿನ ಪ್ರಯೋಗವೇ ಬೇರೆ, ಮನುಷ್ಯನ ಮೇಲಿನ ಪ್ರಯೋಗವೇ ಬೇರೆ. ಮನುಷ್ಯನ ವಂಶವಾಹಿನಿಗೆ ಹೋಲಿಕೆಯಾಗುವ ಇಲಿಗಳ ಮೇಲೆ ಔಷಧಿಯನ್ನು ಅದೆಷ್ಟೇ ಬಾರಿ ಪ್ರಯೋಗಿಸಿ, ದೃಢಪಟ್ಟಿದ್ದರೂ ಮನುಷ್ಯನ ಮೇಲೆ ಅದು ಕೆಲಸವನ್ನೇ ಮಾಡದಿರಬಹುದು. ಔಷಧಿ ದೇಹದೊಳಕ್ಕೆ ಸೇರುತ್ತಿದ್ದಂತೆ ಅದನ್ನು ಮಾನವ ದೇಹ ವಿಷವೆಂದು ಗ್ರಹಿಸಿಬಿಡಬಹುದು, ಅಥವಾ ಅದು ಅಂದುಕೊಳ್ಳದ ಅಡ್ಡಪರಿಣಾಮವನ್ನು ಬೀರಬಹುದು. ಆವಿಷ್ಕಾರದ ಗ್ರಹಿಕೆಯಲ್ಲಿ ಕಣ್ಣು ತಪ್ಪಿದ ಏನೋ ಒಂದು ಇಲ್ಲಿ ಪ್ರತ್ಯಕ್ಷವಾಗಬಹುದು ಇತ್ಯಾದಿ. ಸುರಕ್ಷಿತ ಡೋಸೇಜ್ ಎಂದರೆ ಎಷ್ಟು, ಎಷ್ಟುಕೊಟ್ಟರೆ ಔಷಧಿ, ಎಷ್ಟು ಕೊಟ್ಟರೆ ವಿಷ, ಅಲರ್ಜಿ, ಅಡ್ಡಪರಿಣಾಮ ಇವೆಲ್ಲವನ್ನೂ ಆರೋಗ್ಯವಂತರಲ್ಲಿ ಹೆಚ್ಚು ನಿಖರವಾಗಿ ತಿಳಿಯಬಹುದು. ಹಾಗಾದರೆ ಇಂಥ ಪ್ರಯೋಗಕ್ಕೆ ಮುಂದೆ ಬರುವ ಆಸಾಮಿಗಳಾದರೂ ಯಾರು? ಔಷಧಿ ಕಂಪನಿಗಳ ಹತ್ತಿರ ಈ ಪ್ರಶ್ನೆ ಕೇಳಿದರೆ ಇವರು 'ಆರೋಗ್ಯ ಸೈನಿಕರು' ಎಂದೆಲ್ಲ ಬುರುಡೆ ಬಿಡುತ್ತವೆ. ಅಸಲಿಗೆ ಬಡ ವಿದ್ಯಾರ್ಥಿಗಳು, ಕಡು ಬಡವರು ಇದಕ್ಕೆ ತಮ್ಮನ್ನು ನೋಂದಾಯಿಸಿಕೊಳ್ಳುತ್ತಾರೆ. ಅಮೆರಿಕದಲ್ಲಿ ಅವರಿಗೆ ದಿನಕ್ಕೆ ಇಂತಿಷ್ಟು ಎಂದು ಸಂಬಳ.

ಸಾಮಾನ್ಯವಾಗಿ ಔಷಧಿಯ ಗುಣಲಕ್ಷಣಕ್ಕೆ ಅನುಗುಣವಾಗಿ ದಿನಕ್ಕೆ ಐದರಿಂದ ಇಪ್ಪತ್ತು ಸಾವಿರ ರುಪಾಯಿ. ಇದೆಲ್ಲ ಚಿಕ್ಕಪುಟ್ಟ ತಲೆನೋವು ಮೊದಲಾದ ಔಷಧಿಗೆ. ಅದು ಬಿಟ್ಟು ಪೂರ್ಣ ಪ್ರಮಾಣದ ಪ್ರಯೋಗಕ್ಕಾದರೆ ಅಥವಾ ಔಷಧಿಯನ್ನು ಆರೋಗ್ಯಕರ ವ್ಯಕ್ತಿ ಪಡೆಯುವುದರಿಂದ ಹೆಚ್ಚಿನ ಅಪಾಯ ಸಾಧ್ಯತೆಯಿದ್ದರೆ 10 ಸಾವಿರ ಡಾಲರ್ ತನಕ, ಹೆಚ್ಚು ಕಡಿಮೆ 8 ಲಕ್ಷ ರುಪಾಯಿ. ಇಷ್ಟಾದರೂ ಇದು ಪಂಜರದೊಳಗಿನ ಮಂಗಕ್ಕಿಂತ ಅಗ್ಗ!! ಏಡ್ಸ್, ಕ್ಯಾನ್ಸರ್ ಮೊದಲಾದ ಕೆಲವೊಂದಿಷ್ಟು ರೋಗಗಳ ಔಷಧಿಗಳನ್ನು ಹೊರತುಪಡಿಸಿ ಉಳಿದೆಲ್ಲ ಔಷಧಿಗಳು ಈ ರೀತಿ ಆರೋಗ್ಯಕರ ವ್ಯಕ್ತಿಗಳ ಮೇಲೆಯೇ ಮೊದಲು ಪ್ರಯೋಗಿಸಲ್ಪಡುವುದು. ಈ ರೀತಿ ಹಣಕ್ಕಾಗಿ ದೇಹವನ್ನು ಪಣವಿಡುವವರು, ಪ್ರಯೋಗದಲ್ಲಿ ಭಾಗವಹಿಸುವುದಕ್ಕಿಂತ ಮೊದಲು ಯಾವುದೇ ಅಡ್ಡಪರಿಣಾಮವಾದರೂ ಫಾರ್ಮಾ ಕಂಪನಿ ಜವಾಬ್ದಾರಿಯಲ್ಲ ಎಂದು ಸಹಿ ಹಾಕಿಕೊಡಬೇಕಾಗುತ್ತದೆ.

ಈಗ ಎರಡನೇ ಹಂತ. ಈಗ ರೋಗಿಗಳ ಮೇಲಿನ ಪ್ರಯೋಗ, 100–300 ರೋಗಿಗಳ ಮೇಲೆ. ಔಷಧಿ ಮನುಷ್ಯನ ರೋಗದ ಮೇಲೆ ಪರಿಣಾಮ ಬೀರುತ್ತದೆಯೋ ಇಲ್ಲವೋ ಎನ್ನುವುದು ಇಲ್ಲಿ ಈಗ ಮೊದಲಬಾರಿ ಪರೀಕ್ಷೆಗೊಳಗಾಗುವುದು. ಇದು ಅತ್ಯಂತ ಜಾಗರೂಕತೆಯ ಹಂತ. ಇಲ್ಲಿಯೇ ಅಸಲಿ ರೋಗಿಗಳ ಮೇಲಿನ ಅಡ್ಡಪರಿಣಾಮ ಇತ್ಯಾದಿ ವ್ಯಕ್ತವಾಗುವುದು. ಹಿಂದಿನ ಹಂತದಲ್ಲಿ, ಆರೋಗ್ಯಕರ ವ್ಯಕ್ತಿಗಳ ಮೇಲಿನ ಪ್ರಯೋಗದಲ್ಲಿ ಕಾಣಿಸಿಕೊಳ್ಳದ್ದು ಈ ಹಂತದಲ್ಲಿ ಕಾಣಿಸಿಕೊಳ್ಳಬಹುದು. ಈ ಹಂತದಲ್ಲಿ ಪ್ರಯೋಗಕ್ಕೊಳಗಾಗುವ ರೋಗಿಗಳನ್ನು ಯಾದೃಚ್ಛಿಕ ಆಯ್ಕೆ ಮಾಡಲಾಗುತ್ತದೆ. ಏನೆಂದರೆ ಈ 300 ಮಂದಿಯಲ್ಲಿ ಕೆಲವರಿಗೆ ನಿಜವಾದ ಔಷಧಿ ಕೊಟ್ಟರೆ ಇನ್ನು ಕೆಲವರಿಗೆ ಆ ರೋಗಕ್ಕೆ ಈಗಾಗಲೇ ಇರುವ ಹಳೆಯ ಔಷಧಿ ನೀಡಲಾಗುತ್ತದೆ. ಇಲ್ಲವೇ ಔಷಧಿಯನ್ನೇ ಹೋಲುವ ಆದರೆ ಔಷಧಿಯ ಗುಣವಿಶೇಷವನ್ನು ತೆಗೆದು ಸಲೈನ್ ಇತ್ಯಾದಿ ನೀಡಲಾಗುತ್ತದೆ. 'ಪ್ಲೇಸಿಬೋ ಎಫೆಕ್ಟ್' ಬಗ್ಗೆ ನೀವು ಕೇಳಿರಬಹುದು. ಔಷಧ ತೆಗೆದುಕೊಂಡಿದ್ದೇನೆ ಎಂಬುದೇ ಕೆಲವರಲ್ಲಿ ರೋಗವನ್ನು ಗುಣಪಡಿಸಬಲ್ಲದು. ಇದು ಹೇಗೆ ಸಾಧ್ಯ ಎಂಬುದು ವಿಜ್ಞಾನಕ್ಕೆ ಇನ್ನೂ ತಿಳಿದಿಲ್ಲ. ಆದರೆ ಮನುಷ್ಯ ದೇಹವೆಂಬ ವಂಡರ್‌ನಲ್ಲಿ ಇದು ನಡೆಯುತ್ತದೆ. ಹಾಗಾಗಿ ಇಂಥ ಸಾಧ್ಯತೆ ಔಷಧಿಯನ್ನು ಮೀರಿ ಕೆಲಸ ಮಾಡಬಹುದು. ಆದ್ದರಿಂದ ಪರಿಣಾಮ ಔಷಧಿಯದೋ ಅಥವಾ ಪ್ಲೇಸಿಬೋ ಪರಿಣಾಮವೋ ಎಂಬುದನ್ನು ಪ್ರತ್ಯೇಕಿಸಲು ಈ ರೀತಿ ಪ್ರಯೋಗ. ಬಹುತೇಕ ಔಷಧಿಗಳು ಈ ಎರಡನೇ ಹಂತವನ್ನು ದಾಟುವುದಿಲ್ಲ. ಅಂಕಿ-ಸಂಖ್ಯೆಗಳ ಪ್ರಕಾರ ಮೂರರಲ್ಲಿ ಒಂದು ಔಷಧಿ ಮಾತ್ರ ಇಲ್ಲಿ ಪಾಸ್ ಆಗುವುದು! ಒಂದು ಔಷಧಿ ಈ ಹಂತಕ್ಕೆ ತಲುಪುವಲ್ಲಿಯವರೆಗೆ ಅದೆಷ್ಟೋ ಹಣ, ಶ್ರಮ, ಕೆಲವೊಮ್ಮೆ ಎಂಟು-ಹದಿನೈದು ವರ್ಷವೇ ದಾಟಿರುತ್ತದೆ. ಅದಾಗಿಯೂ ಇಲ್ಲಿನ ಯಶಸ್ಸಿನ ಪ್ರಮಾಣ ಶೇ.33 ಮಾತ್ರ. ಪಾಸಿಂಗ್ ಪರ್ಸೆಂಟೇಜ್‌ಗಿಂತ ಕಡಿಮೆ!!

ಇಷ್ಟಾಗಿ ಮೂರನೇ ಹಂತದಲ್ಲಿ ಸಾವಿರಾರು ರೋಗಿಗಳಿಗೆ ಔಷಧಿ ನೀಡಿ ಪ್ರಯೋಗ. ಈ ಹಂತವನ್ನು ತಲುಪುವಾಗ ಫಾರ್ಮಾ ಕಂಪನಿ ಕೋಟಿ ಕೋಟಿ ಹಣ ವ್ಯಯಿಸಿರುತ್ತದೆ. ಅಲ್ಲಿಯವರೆಗೆ ಇದೆಲ್ಲದರಿಂದ ನಾಲ್ಕಾಣೆಯೂ ಹುಟ್ಟಿರುವುದಿಲ್ಲ. ಹಾಗಾಗಿ ಈ ಹಂತದಲ್ಲಿ ಔಷಧಿ ಸೋತರೆ- ಚಿಕ್ಕಪುಟ್ಟ ಕಂಪನಿಯಾದರೆ ಅದು ದಿವಾಳಿಯೆದ್ದು ಮುಳುಗಿಹೋಗಬಹುದು. ಸಾವಿರಾರು ಮಂದಿಗೆ ನೀಡಿರುವುದರಿಂದ ಔಷಧಿ ಸೋತರೆ ಅದು ಆರ್ಥಿಕ ದುರಂತವೂ ಹೌದು, ಮನುಷ್ಯನ ದೊಡ್ಡ ದುರಂತವೂ ಆಗಬಹುದು. ಇದೆಲ್ಲ ಹಂತವನ್ನು ಅತ್ಯಂತ ವೇಗದಲ್ಲಿ ದಾಟಿದ್ದು ಕೋವಿಡ್ ಲಸಿಕೆ (MRNA ತಂತ್ರಜ್ಞಾನದ ಬಗ್ಗೆ ಹಿಂದೆ ಬರೆದಿದ್ದೆ). ಸುಮ್ಮನೆ ಊಹಿಸಿಕೊಳ್ಳಿ, ಒಂದು ವೇಳೆ ಫೈಜರ್, ಜಾನ್ಸನ್ ಆ್ಯಂಡ್ ಜಾನ್ಸನ್, ಮಾಡರ್ನಾ ಲಸಿಕೆಗಳೇನಾದರೂ ಹತ್ತು ವರ್ಷದ ನಂತರ ಏನೋ ಒಂದು ದೊಡ್ಡ ಅಡ್ಡಪರಿಣಾಮಕ್ಕೆ ಕಾರಣವಾದದ್ದು ಗೊತ್ತಾದರೆ ಏನಾಗಬಹುದು ಕಥೆ? ಅಂಥ ಪರಿಣಾಮ ಇಡೀ ಮನುಷ್ಯಕುಲಕ್ಕೆ ಘಾತುಕವಾಗಬಹುದು! ಇರಲಿ, ಇದೆಲ್ಲ ಕಥೆ, ಸವಾಲು ದಾಟಿದರೆ ಆಗ ಔಷಧಿ ಮಾರುಕಟ್ಟೆಗೆ- ಜನಬಳಕೆಗೆ. ಅದಾಗಿಯೂ ಔಷಧೀಯ ಪರಿಣಾಮವನ್ನು ಅಳೆದು ತೂಗುವ ಕೆಲಸ ನಿಲ್ಲುವುದಿಲ್ಲ, ಅದು ನಿರಂತರ, ಏಕೆಂದರೆ ಮನುಷ್ಯ ಮತ್ತು ರೋಗವೂ ಬದಲಾಗುತ್ತಿರುತ್ತದೆಯಲ್ಲ!

ಇವೆಲ್ಲ ಮೇಲೆ ಹೇಳಿದ ರೀತಿಯಲ್ಲೇ ಅಚ್ಚುಕಟ್ಟಾಗಿ ನಡೆಯುತ್ತವೆಯೇ? ಹೌದು ಮತ್ತು ಇಲ್ಲ. ಪ್ರಯೋಗ ಎಲ್ಲಿ ನಡೆಯುತ್ತಿದೆ, ಅಲ್ಲಿನ ರಾಜಕೀಯ ಸ್ಥಿತಿ-ಗತಿ ಏನು, ಕಾನೂನು ಎಷ್ಟು ಕಟ್ಟುನಿಟ್ಟು, ಅಲ್ಲಿನ ಕಾನೂನಿನ ದಂಡದ ಪ್ರಮಾಣ ಎಷ್ಟು ಎಂಬಿತ್ಯಾದಿ ನೂರೆಂಟು ವಿಚಾರಗಳ ಮೇಲೆ ಫಾರ್ಮಾ ಕಂಪನಿಗಳು ವ್ಯವಹರಿಸುವುದು ಅಷ್ಟೇ ಸತ್ಯ. ಪ್ರಯೋಗಗಳು ಅತ್ಯಂತ ತುಟ್ಟಿ ವ್ಯವಹಾರ. ಯಶಸ್ಸಿನ ಸಾಧ್ಯತೆಯೂ ಕಡಿಮೆ. ಹೀಗಾಗಿ ಒಂದು ಔಷಧಿಯನ್ನು ಮಾರುಕಟ್ಟೆಯಲ್ಲಿ ಮಾರಬೇಕೆಂದರೆ ಅದೆಷ್ಟೋ ಖರ್ಚಾಗಿರುತ್ತದೆ, ಅದೆಲ್ಲ ವಸೂಲಿಯಾಗಬೇಕು. ಹಾಗಾಗಿ ಎಲ್ಲ ಕಂಪನಿಗಳಂತೆಯೇ ವ್ಯವಹರಿಸುವ ಔಷಧಿ 'ಕಂಪನಿ'ಗಳು ಕೂಡ ಲಾಭಕ್ಕಾಗಿ ಅಡ್ಡದಾರಿ ಹಿಡಿಯುವುದು ಇದೆ. ಆಗೀಗ ಕೆಲವು ಬಡದೇಶಗಳಲ್ಲಿ ಇವು ಎಸಗುವ ಅನಾಚಾರಗಳು ಸುದ್ದಿಯಾಗುತ್ತವೆ. ಯಾರು ಏನೇ ಹೇಳಿದರೂ ಫಾರ್ಮಾ ಕಂಪನಿಗಳು ನಮ್ಮ ವ್ಯವಸ್ಥೆಯಲ್ಲಿ ಲಾಭಮಾಡಲೇಬೇಕು. ಔಷಧಿಗೆ ವ್ಯಯಿಸಿದ ಖರ್ಚನ್ನು ಮೀರಿದ ಲಾಭವನ್ನು ಆದಷ್ಟು ಬೇಗ ಪಡೆಯಲೇಬೇಕು. ಪೇಟೆಂಟ್ ಅವಧಿ ಮುಗಿಯುವುದರೊಳಗೆ ಲೆಕ್ಕಾಚಾರ, ಲಾಭ ಎಲ್ಲವೂ ಚುಕ್ತಾ ಆಗಬೇಕು. ಪೇಟೆಂಟ್ ಇರುವುದು 20 ವರ್ಷಕ್ಕೆ. ಆದರೆ ಬಹುತೇಕ ಕಂಪನಿಗಳು ಚಿಕಿತ್ಸಾಪೂರ್ವ ಹಂತದಲ್ಲಿಯೇ ಪೇಟೆಂಟ್ ಪಡೆದುಬಿಡುತ್ತವೆ. ಏಕೆಂದರೆ ಆವಿಷ್ಕಾರದ ಮಾಹಿತಿ ಸೋರಿಕೆಯಾದರೆ, ಇನ್ನೊಂದು ಕಂಪನಿ ಅದನ್ನೇ ತಯಾರಿಸಿಬಿಡಬಹುದು. ಹಾಗಾಗಿದ್ದೂ ಇದೆ. ಹಾಗಾಗಿ ಔಷಧಿ ಮಾರುಕಟ್ಟೆಗೆ ಬರುವಾಗ ಸಾಮಾನ್ಯವಾಗಿ ಪೇಟೆಂಟ್ ಅವಧಿ 10–12 ವರ್ಷ ಮಾತ್ರ ಉಳಿದಿರುತ್ತದೆ. ಕ್ಲಿನಿಕಲ್ ಟ್ರಯಲ್‌ನಲ್ಲಿಯೇ ಆರೆಂಟು ವರ್ಷ ವ್ಯಯವಾಗಿರುತ್ತದೆ. ಈ ಕಾರಣಕ್ಕೇ ಔಷಧಿ ತುಟ್ಟಿಯಾಗುವುದು- ಅಥವಾ ಅದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಫಾರ್ಮಾ ಕಂಪನಿಗಳು ಗಡಿಬಿಡಿಯಲ್ಲಿ ಸುಲಿಗೆಗೆ ಮುಂದಾಗುವುದು. ಎಂಟಾಣೆ ಖರ್ಚಿನ ಔಷಧಿಯನ್ನು ಎಂಟು ಸಾವಿರ ರೂಪಾಯಿಗೆ ಮಾರುವುದು.

ಹೀಗಿರುವ ಮನುಷ್ಯಕೃತ ವ್ಯವಸ್ಥೆಯಲ್ಲಿ ಫಾರ್ಮಾ ಕಂಪನಿಗಳು ಅನಾಚಾರಕ್ಕೆ ಇಳಿದ ಕರಾಳ ಇತಿಹಾಸ ಸಾಕಷ್ಟಿದೆ. ಆ ಅನಾಚಾರಗಳೇ ಇದೆಲ್ಲದರ ಸುತ್ತ ಬಿಗಿ ಕಾನೂನು ರೂಪುಗೊಳ್ಳುವುದಕ್ಕೆ ಕಾರಣವಾಗಿದೆ. 1950ರಲ್ಲಿ ಜರ್ಮನಿಯ ಫಾರ್ಮಾ ಕಂಪನಿ Thalidomide ಎನ್ನುವ ಔಷಧಿಯನ್ನು ಹೆಚ್ಚಿನ ಪ್ರಯೋಗವಿಲ್ಲದೆ ಮಾರುಕಟ್ಟೆಗೆ ಬಿಟ್ಟಿತು. ಹೆಣ್ಣು ಗರ್ಭವತಿಯಾದಾಗ ಬೆಳಗಿನ ಸಮಯದಲ್ಲಿ ಆಗುವ ದೈಹಿಕ ಕಸಿವಿಸಿ (Morning Sickness)ಗೆ ಇದು ಔಷಧಿಯಾಗಿತ್ತು. ಇದನ್ನು ಸುಮಾರು 46 ದೇಶಗಳಲ್ಲಿ ಮಾರಾಟಮಾಡಲಾಯಿತು. ಆದದ್ದೇನೆಂದರೆ ಯಾರು ಗರ್ಭಧಾರಣೆಯ 20–36ನೇ ದಿನ ಇದನ್ನು ತೆಗೆದುಕೊಂಡಿದ್ದರೋ ಅವರಿಗೆಲ್ಲ ಎಲ್ಲಿಲ್ಲದ ಅಡ್ಡಪರಿಣಾಮವಾಯಿತು. ತರುವಾಯ ಆ ದಶಕದಲ್ಲಿ- ಹುಟ್ಟಿದ ಕನಿಷ್ಠ 20 ಸಾವಿರ ಮಕ್ಕಳಿಗೆ ಹುಟ್ಟುವಾಗಲೇ ಒಂದಿಲ್ಲೊಂದು ದೊಡ್ಡ ಅಂಗವೈಕಲ್ಯ! ಅದರಲ್ಲಿ ಸುಮಾರು 3 ಸಾವಿರದಷ್ಟು ಸಂತ್ರಸ್ತರು ಇಂದಿಗೂ ಜೀವಂತವಾಗಿದ್ದಾರೆ, Thalidomide ದುರಂತಕ್ಕೆ ಸಾಕ್ಷಿಯಾಗಿ. ಆದರೆ ಅಮೆರಿಕಾದ FDA (Food and Drug Administration)ನ ವಿಜ್ಞಾನಿ ಡಾ. ಫ್ರಾನ್ಸಿಸ್ ಕೆಲ್ಸಿ ಮಾತ್ರ ಈ ಔಷಧಿಗೆ ಒಪ್ಪಿಗೆ ಸೂಚಿಸಿರಲಿಲ್ಲ, ಹಾಗಾಗಿ ಅಮೆರಿಕ ಬಚಾವಾಯಿತು. ಇವತ್ತಿಗೂ ಅಮೆರಿಕದ FDA ಅನುಮತಿ ಪಡೆಯುವುದು ಕಬ್ಬಿಣದ ಕಡಲೆ. ಇಂದಿಗೂ ಭಾರತದಲ್ಲಿ ಸಿಗುವ ಅದೆಷ್ಟೋ ಔಷಧಿಗಳಿಗೆ ಅಮೆರಿಕದಲ್ಲಿ ಜಾಗವಿಲ್ಲ. ಉದಾಹರಣೆಗೆ Analgin, Baralgan, Nimesulide, Disprin ಇತ್ಯಾದಿ. ಇವುಗಳ ಹೆಸರು ನೀವೆಲ್ಲ ಕೇಳಿರುತ್ತೀರಿ, ಅಥವಾ ನುಂಗಿರುತ್ತೀರಿ. ಹೊಟ್ಟೆನೋವು ಬಂದಾಗ ಬೆರಲ್ಗಾನ್! ಇದನ್ನು ಬಹುತೇಕ ದೇಶಗಳಲ್ಲಿ ನಿಷೇಧಿಸಲಾಗಿದೆ. ಆದರೆ ಭಾರತದಲ್ಲಿ 1996ರಲ್ಲಿ ನಿಷೇಧಕ್ಕೊಳಗಾಗಿದ್ದು ಕ್ರಮೇಣ ಮತ್ತೆ ಅನುಮತಿ ಪಡೆಯಿತು. ಅದಾದ ನಂತರ 2013ರಲ್ಲಿ ಮತ್ತೆ ಸಂಪೂರ್ಣ ನಿಷೇಧಕ್ಕೊಳಗಾಯಿತು. ಈಗ ಅತ್ಯಂತ ಹೆಚ್ಚಿನ ನೋವಿಗಷ್ಟೇ ಅನಾಲ್ಜಿನ್ ಬಳಸಲು ಭಾರತದಲ್ಲಿ ಅನುಮತಿಯಿದೆ. ಈ ರೀತಿ ವ್ಯವಸ್ಥೆ, ರಾಜಕಾರಣದ ಜತೆ ಕೈಜೋಡಿಸಿ ಫಾರ್ಮಾ ಕಂಪನಿಗಳು ವಶೀಲಿಗಿಳಿಯುವುದು, ಸರಕಾರವನ್ನು ಒತ್ತಾಯಿಸಿ, ಅಥವಾ ಹಿಂಬಾಗಿಲಿನಿಂದ ಅನುಮತಿ ಪಡೆಯುವುದು ಸಾಮಾನ್ಯ.

ತೀರಾ ಇತ್ತೀಚೆಗೆ 2006ರಲ್ಲಿ TGN 1412 ಎಂಬ ಔಷಧಿಯನ್ನು ಪ್ರಾಣಿಪ್ರಯೋಗದ ನಂತರದ ಮೊದಲನೇ ಹಂತವಾಗಿ ಆರೋಗ್ಯಕರ ವ್ಯಕ್ತಿಗಳಿಗೆ ನೀಡಿದಾಗ ವ್ಯತಿರಿಕ್ತ ಪರಿಣಾಮವನ್ನು ಉಂಟುಮಾಡಿತು. ಪರಿಣಾಮವೆಂದರೆ ಏನು? ಔಷಧಿ ಪ್ರಯೋಗಕ್ಕೆ ಪಡೆದ ಹತ್ತಾರು ಮಂದಿ ಬಹು ಅಂಗಗಳ ವೈಫಲ್ಯದಿಂದ ತಕ್ಷಣ ಜೀವ ಕಳೆದುಕೊಂಡರು. ಇದೆಲ್ಲ ಉದಾಹರಣೆಗಳಲ್ಲಿ ಕೆಲವು ತೀರಾ ಅಮಾನವೀಯ. ಫೈಜರ್ ಕಂಪನಿ 1996ರಲ್ಲಿ ನೈಜೀರಿಯಾದಲ್ಲಿ meningitis ಎಂಬ ರೋಗಕ್ಕೆ ಔಷಧಿಪ್ರಯೋಗ ನಡೆಸುತ್ತಿತ್ತು. ಈ ಔಷಧಿಯನ್ನು ನೀಡಲು ಎಫ್‌ಡಿಎ ಅನುಮತಿ ನೀಡಿದ್ದು ವಯಸ್ಕರಿಗೆ ಮಾತ್ರ. ಆದರೆ ಅಲ್ಲಿನ ತಂದೆ-ತಾಯಂದಿರ ಅನುಮತಿಯನ್ನು ಪಡೆಯದೆ ಫೈಜರ್ ತನ್ನ ಔಷಧಿಯನ್ನು ಸುಮಾರು 200 ಮಕ್ಕಳ ಮೇಲೆ ಪ್ರಯೋಗಿಸಿಬಿಟ್ಟಿತು. ಪರಿಣಾಮ ಕೆಲವು ಮಕ್ಕಳು ಅಸ್ವಸ್ಥಗೊಂಡರು, ಹಲವು ಮಕ್ಕಳು ಸತ್ತರು. ಕಳೆದ ಐದಾರು ದಶಕದಲ್ಲಿ ಅಮೆರಿಕ, ಗ್ವಾಟೆಮಾಲಾ ಮೊದಲಾದ ದೇಶಗಳ ಜೈಲಿನಲ್ಲಿ ರೋಗಿಗಳ ಪೂರ್ವಾನುಮತಿ ಇಲ್ಲದೆ, ಅವರ ಅರಿವಿಗೆ ಬಾರದಂತೆ ಔಷಧಿಯನ್ನು ಪ್ರಯೋಗಿಸಿದ ಹತ್ತಾರು ಉದಾಹರಣೆಗಳಿವೆ. ಇಂದಿಗೂ ಫಾರ್ಮಾ ಕಂಪನಿಗಳು ಕ್ಲಿನಿಕಲ್ ಟ್ರಯಲ್‌ಗಳನ್ನು ಬಡದೇಶಗಳಲ್ಲಿ ಅಲ್ಲಿನ 'ಅರಾಜಕೀಯ' ವ್ಯವಸ್ಥೆಯನ್ನು ಬಳಸಿ ನಡೆಸುವುದು ಸಾಮಾನ್ಯ.

ಈ ಕ್ಲಿನಿಕಲ್ ಟ್ರಯಲ್ (ಚಿಕಿತ್ಸಾ ಪ್ರಯೋಗ) ಹಂತದಲ್ಲಿ ಆಗುವ ಕೆಲವೊಂದಿಷ್ಟು ಎಡವಟ್ಟಿನಿಂದಾಗಿ ಪ್ರಯೋಗಿಸುವ ಔಷಧಿಯೇ ಇನ್ನೊಂದು ರೋಗಕ್ಕೆ ಪರಿಹಾರವಾಗುವುದು ಅಥವಾ ಇನ್ನೊಂದು ಹೊಸ ಆವಿಷ್ಕಾರವೇ ಆಗುವುದೂ ಇದೆ. ನಿಮಗೆ ಗೊತ್ತಿರಬಹುದು, 'ವಯಾಗ್ರ' ಆವಿಷ್ಕಾರವಾಗಿದ್ದು ಹಾಗೆ. Sildenafil ಎಂಬ ಔಷಧಿಯನ್ನು ಎದೆನೋವು, ಹೃದಯಸಂಬಂಧಿ ಚಿಕಿತ್ಸೆಗೆ ಪ್ರಯೋಗ ನಡೆಸಲಾಗುತ್ತಿತ್ತು. ಆದರೆ ಗಂಡಸರಲ್ಲಿ ಅದರ ಸೈಡ್ ಎಫೆಕ್ಟ್ ಕಾಣಿಸಿಕೊಂಡಿತು. ಉದ್ದವೋ, ಅಡ್ಡವೋ, ಪರಿಣಾಮ ಮಾತ್ರ ಮನುಷ್ಯನ ಅವಶ್ಯಕತೆಗೊಂದು ಪರಿಹಾರವಾಯಿತು. ಅಷ್ಟೇ ಅಲ್ಲ, ಇದು ಎಲ್ಲಿಲ್ಲದ ಮಾರಾಟ ಕಂಡು, ಫೈಜರ್ ಕಂಪನಿಯ ದಿಕ್ಕೆ-ದೆಸೆಯನ್ನೇ ಬದಲಿಸಿತು. ಫೈಜರ್ ಕಂಪನಿಯು ವಯಾಗ್ರಾ ಆವಿಷ್ಕಾರದಿಂದ ಮಾಡಿದ ಹಣ ಎಷ್ಟಿರಬಹುದು ಅಂದಾಜಿಸಿ? ಬರೋಬ್ಬರಿ ಎರಡೂವರೆ ಲಕ್ಷ ಕೋಟಿ ರೂಪಾಯಿ!! 2017ರಲ್ಲಿ ಪೇಟೆಂಟ್ ಮುಗಿಯುತ್ತಿದ್ದಂತೆ ಉಳಿದ ಕಂಪನಿಗಳು ಇದನ್ನು ತಯಾರಿಸಲೂ ಶುರುಮಾಡಿದ ನಂತರವೇ ವಯಾಗ್ರಾ ಅಗ್ಗವಾಗಿದ್ದು, ಫೈಜರ್ ಕಂಪನಿಯ ಲಾಭ ಕುಸಿದದ್ದು.

ಕ್ಲಿನಿಕಲ್ ಟ್ರಯಲ್ ಅನ್ನು ನಾವು ಔಷಧಿ ಕಂಪನಿಯ ಮಸೂರದಲ್ಲಿಯೇ ನೋಡುವುದು ಸಾಮಾನ್ಯ. ಆದರೆ ಖುದ್ದು ಇದೇ ಒಂದು ಪ್ರತ್ಯೇಕ ವ್ಯವಹಾರ ಸಾಮ್ರಾಜ್ಯ. ಪ್ರತಿ ವರ್ಷ ಏನಿಲ್ಲವೆಂದರೂ 3 ಲಕ್ಷ ಔಷಧಿಗಳು ಚಿಕಿತ್ಸಕ ಪ್ರಯೋಗಕ್ಕೆ ನೋಂದಾಯಿಸಲ್ಪಡುತ್ತವೆ. ಅತ್ಯಂತ ಹೆಚ್ಚು ಯುರೋಪ್ ಮತ್ತು ಅಮೆರಿಕದಲ್ಲಿ- ಶೇ.70. ಹಿಂದಿನ ವರ್ಷದ ಲೆಕ್ಕಾಚಾರದ ಪ್ರಕಾರ ಇದು 60 ಬಿಲಿಯನ್ ಡಾಲರ್- ಐದೂವರೆ ಲಕ್ಷ ಕೋಟಿ ರುಪಾಯಿ ವ್ಯವಹಾರ. ಇನ್ನೊಂದು ಹತ್ತು ವರ್ಷದಲ್ಲಿ ಈ ವ್ಯವಹಾರ ದುಪ್ಪಟ್ಟಾಗಲಿದೆ. ಕ್ಲಿನಿಕಲ್ ಟ್ರಯಲ್‌ನಲ್ಲಿ ಈ ಪ್ರಯೋಗಕ್ಕೆ ಜನರನ್ನು ಪಡೆಯುವುದೇ ಕಷ್ಟದ ಕೆಲಸ. ಅಮೆರಿಕದಲ್ಲಿ ಕೆಲವು ವೆಬ್‌ಸೈಟ್‌ಗಳಿವೆ. ಹಣ ಬೇಕೆಂದರೆ ಅದಕ್ಕೆ ಹೋಗಿ ನಮೂದಿಸಿದರೆ ಪ್ರಯೋಗಕ್ಕೆ ಕರೆಯುತ್ತಾರೆ, ಹಣ ಸಿಗುತ್ತದೆ. ನಿರ್ಗತಿಕ ಸ್ಥಿತಿಯಲ್ಲಿ ಇದನ್ನೇ ಬದುಕುವ ಆಸರೆಯಾಗಿ ಮಾಡಿಕೊಳ್ಳುವವರು ಇದ್ದಾರೆ. ಹಾಗಾಗಿ ಈಗೀಗ ಹೆಚ್ಚು ಹೆಚ್ಚು ಕಂಪನಿಗಳು ಭಾರತ, ಆಫ್ರಿಕಾ ದೇಶಗಳು, ಪೂರ್ವ ಯುರೋಪ್ ದೇಶಗಳತ್ತ ಮುಖಮಾಡಿವೆ. ಭಾರತ ಕ್ಲಿನಿಕಲ್ ಟ್ರಯಲ್ ಮಟ್ಟಿಗೆ ಉದಯೋನ್ಮುಖ ಮಾರುಕಟ್ಟೆ. ಖುದ್ದು ಭಾರತವೂ ಆವಿಷ್ಕರಿಸಿ ಕ್ಲಿನಿಕಲ್ ಟ್ರಯಲ್ ನಡೆಸುತ್ತಿದೆ. ಹಿಂದಿನ ವರ್ಷ ಭಾರತದಲ್ಲಿ ದೇಶೀಯವಾಗಿ ಆವಿಷ್ಕಾರಗೊಂಡ ಏಳೂವರೆ ಸಾವಿರ ಔಷಧಿಗಳು ಕ್ಲಿನಿಕಲ್ ಟ್ರಯಲ್ ಹಂತ ತಲುಪಿವೆ. ಅಮೆರಿಕ (ಶೇ.25) ಮತ್ತು ಚೀನಾ (ಶೇ.29)ದ ನಂತರ ಅತ್ಯಂತ ಹೆಚ್ಚಿನ ಔಷಧಿ ಪ್ರಯೋಗಕ್ಕೊಳಗಾಗುವುದು ಭಾರತದಲ್ಲಿ- ಶೇ.8. ಸದ್ಯ ಕ್ಲಿನಿಕಲ್ ಟ್ರಯಲ್‌ನ ಮೊದಲನೇ ಹಂತ- ಆರೋಗ್ಯಕರ ವ್ಯಕ್ತಿಗಳ ಮೇಲಿನ ಪ್ರಯೋಗಕ್ಕೆ ಫಾರ್ಮಾ ಕಂಪನಿಗಳ ನೆಚ್ಚಿನ ಮಾರುಕಟ್ಟೆ- ಪ್ರಯೋಗಶಾಲೆ ಭಾರತ. ಇದಕ್ಕೆ ಖುಷಿಪಡಬೇಕೋ, ದುಃಖಿಸಬೇಕೋ? ಕಾರಣವೇನು? ಅದು ನಿಮ್ಮ ವಿವೇಚನೆಗೆ ಬಿಟ್ಟದ್ದು!

ಭಾರತದ ವಿದೇಶ ವ್ಯಾಪಾರ ನೆಟ್‌ವರ್ಕ್ ಈಗ ಸರ್ವವ್ಯಾಪಿ!

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ನಮ್ಮ ಕಾಲದಲ್ಲಿ ಸ್ವಂತ ಕಾರು ಬಿಡಿ, ಸೈಕಲ್, ರೇಡಿಯೊ ಖರೀದಿ ಕೂಡ ಪ್ರತಿಷ್ಠೆಯ ಸಂಗತಿಯಾಗಿತ್ತು. ಸೈಕಲ್ ಕೊಳ್ಳಲೂ ಲೈಸೆನ್ಸ್ ಬೇಕಾಗುತ್ತಿತ್ತು. ಮನೆಗೊಂದು ಕಾರು, ರೆಫ್ರಿಜರೇಟರ್, ವಾಷಿಂಗ್ ಮಷೀನ್, ಕುಕ್ಕರ್ ಬಂತೆಂದರೆ ಭಾರಿ ವಿಶೇಷ ಮತ್ತು ಹಬ್ಬದ ಸಡಗರ ಇರುತ್ತಿತ್ತು. ಶ್ರೀಮಂತರಾದೆವು ಎಂಬ ಹೆಮ್ಮೆ ಬರುತ್ತಿತ್ತು'' ಎನ್ನುತ್ತಾರೆ 50–80ರ ದಶಕದ ಹಳೆಯ ತಲೆಮಾರಿನವರು ಅಲ್ಲವೇ?

ಈಗ 50–70 ವರ್ಷ ವಯಸ್ಸಿನ ಜನರ ಬಳಿ, ಅವರ ಬಾಲ್ಯದ ದಿನಗಳಲ್ಲಿ ದೇಶದ ಆರ್ಥಿಕ ಸ್ಥಿತಿಗತಿಗಳು ಹೇಗೆ ಇತ್ತು ಎಂಬುದನ್ನು ಕೇಳಿ ನೋಡಿ. ಈಗಿನ 10–20 ವರ್ಷದ ತರುಣ-ತರುಣಿಯರಿಗೆ ಬಹುಶಃ ಅಶ್ಚರ್ಯವಾದೀತು. ಏಕೆಂದರೆ ಉದಾರೀಕರಣಕ್ಕಿಂತ ಮೊದಲು ಭಾರತದ ಪರಿಸ್ಥಿತಿ ಹೇಗಿತ್ತು ಎಂಬ ಅಂದಾಜು ಅವರಿಗೆ ಗಾಢವಾಗಿ ತಟ್ಟದು. ಆದರೆ ಈಗ ಮಧ್ಯವಯಸ್ಕರಾಗಿರುವವರಿಗೆ ಮತ್ತು ಹಿರಿಯ ನಾಗರಿಕರಿಗೆ ಉದಾರೀಕರಣಪೂರ್ವ ಯುಗದ ಪರಿಚಯವೂ ಇದೆ. ಈಗಿನ ಬದಲಾವಣೆಯೂ ಕಣ್ಣಿಗೆ ಕಾಣುತ್ತಿದೆ!

ಅಷ್ಟೇ ಅಲ್ಲ, ಖಾಸಗಿ ವಲಯದ ಉದ್ದಿಮೆಗಳು, ಅವುಗಳು ಸೃಷ್ಟಿಸುವ ಉದ್ಯೋಗಾವಕಾಶಗಳೂ ಆಗ ಇದ್ದಿರಲಿಲ್ಲ. ಅನೇಕ ಮಂದಿಗೆ ಕೃಷಿ-ವ್ಯವಸಾಯ ಮತ್ತು ಸಾಂಪ್ರದಾಯಿಕ ಕಸುಬುಗಳು ಬಿಟ್ಟರೆ ಬೇರೊಂದೂ ಗೊತ್ತಿಲ್ಲ ಎಂಬ ಸ್ಥಿತಿ. ಹೀಗಿದ್ದ ಭಾರತ ಈಗ ಪ್ರಪಂಚದ 4ನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ! ಜರ್ಮನಿಗೆ ಸೆಡ್ಡು ಹೊಡೆಯುತ್ತಿದೆ. ಇನ್ನೆರಡು ವರ್ಷದಲ್ಲಿ ಅಮೆರಿಕ-ಚೀನಾ ಬಿಟ್ಟರೆ ಮೂರನೇ ಸ್ಥಾನಕ್ಕೆ ಏರುವುದು ಕಷ್ಟವೇನಲ್ಲ. 2047ಕ್ಕೆ ಅಭಿವೃದ್ಧಿ ಹೊಂದಿರುವ ದೇಶವಾಗುವ ಮಹತ್ವಾಕಾಂಕ್ಷೆ ಅವಾಸ್ತವಿಕ ಎಂದು ಅನ್ನಿಸುವುದಿಲ್ಲ. ಇದು ಹೇಗೆ ಸಾಧ್ಯವಾಯಿತು? ಎನ್ನುವಾಗ ವಿದೇಶಾಂಗ ವ್ಯಾಪಾರ ನೀತಿಗಳು ನೆನಪಾಗದೆ ಇರುವುದಿಲ್ಲ.

''ವ್ಯಾಪಾರ ಮಾಡುವುದರಿಂದ ಯಾವುದೇ ದೇಶ ನಾಶವಾಗಿರುವ ಉದಾಹರಣೆಯೇ ಇಲ್ಲ, ವ್ಯಾಪಾರ ಅನನುಕೂಲ ಎಂಬಂತೆ ತೋರಿದರೂ, ಇದು ಸತ್ಯ'' ಎಂದು ಅಮೆರಿಕದ ಖ್ಯಾತ ವಿಜ್ಞಾನಿ, ಮುತ್ಸದ್ದಿ, ಲೇಖಕ ಬೆಂಜಮಿನ್ ಫ್ರಾಂಕ್ಲಿನ್ 1774ರಲ್ಲಿ ಹೇಳಿದ್ದರು. ಎರಡನೇ ವಿಶ್ವ ಯುದ್ಧ ಮುಕ್ತಾಯವಾದ ಬಳಿಕ, ಯುರೋಪ್ ಮತ್ತು ಉತ್ತರ ಅಮೆರಿಕದಲ್ಲಿ, ರಾಷ್ಟ್ರಗಳ ಮರುನಿರ್ಮಾಣ ಮತ್ತು ಭವಿಷ್ಯದ ಆರ್ಥಿಕ ಪ್ರಗತಿಗೆ ವ್ಯಾಪಾರದ ಉದಾರೀಕರಣ ಅಗತ್ಯ ಎಂಬ ಆಲೋಚನೆ ಗಟ್ಟಿಯಾಗಿತ್ತು. ವಿಪರ್ಯಾಸವೆಂದರೆ, ಇದೇ ವೇಳೆ ತೃತೀಯ ಜಗತ್ತಿನ ದೇಶಗಳ ಅಭಿವೃದ್ಧಿಗೆ ಇದರಿಂದ ಯಾವ ಪ್ರಯೋಜನವೂ ಆಗದು ಎಂಬ ನಂಬಿಕೆ ಬೇರೂರಿತ್ತು. ಹೀಗಾಗಿ ಉಭಯ ಬಣಗಳ ಚಿಂತಕರು ಮತ್ತು ನೀತಿ ನಿರೂಪಕರು ಮೊದಲಿಗೆ ಪಾಶ್ಚಿಮಾತ್ಯ ದೇಶಗಳ ವ್ಯಾಪಾರ ನೀತಿಗಳನ್ನು ಗ್ಯಾಟ್ (GATT) ಒಪ್ಪಂದಗಳ ಅಡಿಯಲ್ಲಿ (ಸುಂಕ ಮತ್ತು ವ್ಯಾಪಾರ ಕುರಿತ ಸಾಮಾನ್ಯ ಒಪ್ಪಂದ- General Agreement on Tariffs and Trade) ಉದಾರೀಕರಣಗೊಳಿಸಲು ಆದ್ಯತೆ ನೀಡಿದರು.

ಎಂಬತ್ತರ ದಶಕದ ಕೊನೆಯ ತನಕ ಹೊರ ಜಗತ್ತಿಗೆ ಮುಚ್ಚಿಕೊಂಡಿದ್ದ ಭಾರತದ ಆರ್ಥಿಕತೆ 90ರ ದಶಕದಲ್ಲಿ ಉದಾರೀಕರಣದ ಹೊಸ್ತಿಲು ದಾಟಿತು. ಬಳಿಕ ಸಂಭವಿಸಿದ ಕ್ರಾಂತಿಕಾರಕ ಪರಿವರ್ತನೆಯ ಘಟ್ಟಗಳನ್ನು ನಾವು ನೋಡಿದ್ದೇವೆ. ಇದರ ಹಿಂದೆ ಉದಾರೀಕರಣದ ಫಲಶ್ರುತಿ ನಿಸ್ಸಂದೇಹವಾಗಿ ಇದ್ದೇ ಇದೆ. ದೇಶೀಯ ಉದ್ದಿಮೆಗಳು ಹಾಗೂ ಮುಖ್ಯವಾಗಿ ಕೃಷಿ ವಲಯಕ್ಕೆ ಇದರಿಂದ ಸವಾಲುಗಳು ಎದುರಾಗಿದ್ದರೂ, ಕಾಲ ಕಾಲಕ್ಕೆ ಅವುಗಳಿಗೆ ಪ್ರತಿತಂತ್ರವನ್ನೂ, ರಕ್ಷಣಾ ಕವಚವನ್ನೂ ಭಾರತ ಅಳವಡಿಸಿಕೊಂಡಿದೆ. ಮುಕ್ತ ವ್ಯಾಪಾರದ ಪರ ಮತ್ತು ವಿರೋಧ ಚರ್ಚೆಗಳಿಗೂ ದೀರ್ಘ ಇತಿಹಾಸವಿದೆ. ಆದರೆ ಆರಂಭದಲ್ಲಿ 'ಗ್ಯಾಟ್' ಒಪ್ಪಂದ ಬಳಿಕ ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) ಒಪ್ಪಂದಗಳಿಂದ, ನಾನಾ ಬಗೆಯ ಸುಂಕಗಳು ಕಡಿಮೆಯಾಗಿವೆ. ವಿದೇಶಾಂಗ ವ್ಯಾಪಾರಗಳು ಹೆಚ್ಚಾಗಿವೆ. ನಾನಾ ವಲಯಗಳಿಗೆ ವಿದೇಶಿ ಹೂಡಿಕೆಯ ಹರಿವಿನಲ್ಲಿ ಹೆಚ್ಚಳವಾಗಿದೆ. ಭಾರತದ ಸರಕುಗಳು ಮತ್ತು ಸೇವೆಗಳಿಗೆ ಹೊಸ ಮಾರುಕಟ್ಟೆಗಳು ತೆರೆದಿವೆ. ಇದರ ಪರಿಣಾಮ ದೇಶದ ಆರ್ಥಿಕ ಪ್ರಗತಿಯ ಹೊಸ ಯುಗಾರಂಭವಾಗಿದೆ. ಈ ಕುರಿತ ಇತ್ತೀಚಿನ ಬೆಳವಣಿಗೆಗಳೂ ಸ್ವಾರಸ್ಯಕರ.

ಭಾರತದ ವಿದೇಶ ವ್ಯಾಪಾರ ವೇಗವಾಗಿ ವಿಕಸನವಾಗುತ್ತಿದೆ. ಹಲವಾರು ದೇಶಗಳ ಜತೆಗೆ 'ಫ್ರೀ ಟ್ರೇಡ್ ಅಗ್ರಿಮೆಂಟ್' (ಎಫ್‌ಟಿಎ) ಕುರಿತ ಮಾತುಕತೆಗಳು ನಡೆಯುತ್ತಿವೆ. ಈಗಾಗಲೇ ಇರುವ ಡೀಲ್‌ಗಳು ನವೀಕರಣವಾಗುತ್ತವೆ. 2025ರಲ್ಲಿ ಅಮೆರಿಕ, ಬ್ರಿಟನ್, ಯುರೋಪ್ ಮತ್ತು ಆಸಿಯಾನ್ ರಾಷ್ಟ್ರಗಳ ಜತೆಗೆ ಬಿಸಿನೆಸ್ ಮಾತುಕತೆ ನಡೆಸಲಾಗಿದೆ. ಆಫ್ರಿಕಾ, ಲ್ಯಾಟಿನ್ ಅಮೆರಿಕ, ಅರಬ್ ಕೊಲ್ಲಿ ದೇಶಗಳ ಜತೆಗೆ ಹೊಸ ಡೀಲ್‌ಗಳು ನಡೆಯಲಿವೆ. 2025ರಲ್ಲಿ ಭಾರತವು 13 ಸಕ್ರಿಯವಾದ ಮುಕ್ತ ವ್ಯಾಪಾರ ಒಪ್ಪಂದಗಳನ್ನು (Free Trade Agreements) ಒಳಗೊಂಡಿದೆ. ಇವುಗಳು ದ್ವಿಪಕ್ಷೀಯ ಮತ್ತು ಪ್ರಾದೇಶಿಕ ಪಾಲುದಾರಿಕೆಗಳನ್ನು ಬಲಪಡಿಸಲಿವೆ. ಭಾರತವು ತನ್ನ ಆರ್ಥಿಕತೆಯ ವಾಸ್ತವ ಸ್ಥಿತಿಗತಿ ಮತ್ತು ಬೆಳವಣಿಗೆಗೆ ಪೂರಕವಾಗಿ ಸಜ್ಜುಗೊಳ್ಳುತ್ತಿದೆ. ಜಾಗತಿಕ ಮಟ್ಟದಲ್ಲಿ ಹೂಡಿಕೆದಾರರ ರಕ್ಷಣೆ ಮತ್ತು ರಾಷ್ಟ್ರೀಯ ಹಿತಾಸಕ್ತಿ ಎರಡರ ಸಮತೋಲನವನ್ನು ಕಾಯ್ದುಕೊಳ್ಳುತ್ತಿದೆ.

ಎಫ್‌ಟಿಎ ಅಡಿಯಲ್ಲಿ ಎರಡು ಅಥವಾ ಹೆಚ್ಚು ದೇಶಗಳ ನಡುವೆ ವ್ಯವಹಾರ ನಡೆಯುತ್ತದೆ. ವ್ಯಾಪಾರಕ್ಕೆ ಅಡ್ಡಿಯಾಗುವ ಸುಂಕ, ಮೀಸಲು, ನಿರ್ಬಂಧಗಳನ್ನು ತೆರವುಗೊಳಿಸುವುದು ಇದರ ಉದ್ದೇಶ. ಆದ್ಯತಾ ವ್ಯಾಪಾರ ಒಪ್ಪಂದದಲ್ಲಿ ನಿರ್ದಿಷ್ಟ ಸರಕುಗಳ ಮೇಲೆ ಸುಂಕ ಇಳಿಕೆಗೆ ಒಪ್ಪಂದ ಏರ್ಪಡುತ್ತದೆ. ಸಮಗ್ರ ಆರ್ಥಿಕ ಸಹಕಾರದ ಒಡಂಬಡಿಕೆಯ ಅಡಿಯಲ್ಲಿ ಹೂಡಿಕೆ, ಸೇವೆ, ನಿಯಂತ್ರಣದಲ್ಲಿ ಸಹಕಾರ ಇರುತ್ತದೆ. ಇದು ದಕ್ಷಿಣ ಕೊರಿಯಾ ಮತ್ತು ಸಿಂಗಾಪುರದ ನಡುವೆ ಏರ್ಪಟ್ಟಿದೆ. ದ್ವಿಪಕ್ಷೀಯ ಹೂಡಿಕೆ ಒಪ್ಪಂದಗಳಲ್ಲಿ ಉಭಯ ರಾಷ್ಟ್ರಗಳ ನಡುವೆ ರಕ್ಷಣಾತ್ಮಕ ನಿಲುವುಗಳು ಮತ್ತು ಹೂಡಿಕೆಯ ಉತ್ತೇಜನದ ಉದ್ದೇಶವಿರುತ್ತದೆ. ಭಾರತವು ಯುಎಇ ಮತ್ತು ಉಜ್ಬೆಕಿಸ್ತಾನದ ಜತೆಗೆ ಇದನ್ನು ಮಾಡಿಕೊಂಡಿದೆ. ಪ್ರಾದೇಶಿಕ ಮಟ್ಟದ ಒಡಂಬಡಿಕೆಗಳೂ ಇರುತ್ತವೆ. ಆಸಿಯಾನ್, ಏಷ್ಯಾ-ಪೆಸಿಫಿಕ್ ಟ್ರೇಡ್ ಅಗ್ರಿಮೆಂಟ್‌ಗಳು ಇದಕ್ಕೆ ಉದಾಹರಣೆ.

ಇತ್ತೀಚಿನ ಬೆಳವಣಿಗೆಗಳನ್ನು ನೋಡೋಣ.

1. ಭಾರತ-ಬ್ರಿಟನ್: ಭಾರತ ಮತ್ತು ಬ್ರಿಟನ್ ನಡುವೆ ಮಹತ್ವದ ಮುಕ್ತ ವ್ಯಾಪಾರ ಒಪ್ಪಂದ ಅಂತಿಮವಾಗಿದೆ. ಮೂರು ವರ್ಷಗಳ ಮಾತುಕತೆಯ ಬಳಿಕ 2025ರ ಮೇ 6ಕ್ಕೆ ಎಫ್‌ಟಿಎಯನ್ನು ಅಂತಿಮಗೊಳಿಸಲಾಯಿತು. ಇದರ ಪರಿಣಾಮ ಭಾರತೀಯ ಕಂಪನಿಗಳು ತೆರಿಗೆ ಇಲ್ಲದೆ ಬ್ರಿಟಿಷ್ ಮಾರುಕಟ್ಟೆಯನ್ನು ಪ್ರವೇಶಿಸಬಹುದು. ಐಟಿ, ಹಣಕಾಸು, ವೃತ್ತಿಪರ ಸೇವೆಗಳು, ಶೈಕ್ಷಣಿಕ ಸೇವೆ ನೀಡುವ ಸಂಸ್ಥೆಗಳಿಗೆ, ಟೆಕ್ಸ್‌ಟೈಲ್ಸ್, ಆಟೋಮೊಬೈಲ್ ಬಿಡಿಭಾಗಗಳು, ಔಷಧಿ, ಜ್ಯುವೆಲ್ಲರಿ ಮತ್ತು ಎಂಜಿನಿಯರಿಂಗ್ ರಫ್ತಿಗೆ ಅನುಕೂಲವಾಗಲಿದೆ. ಉಭಯ ದೇಶಗಳ ನಡುವೆ ಮಾರಾಟವಾಗುವ ಸರಕುಗಳ ಮೇಲೆ ತೆರಿಗೆಯ ಪ್ರಮಾಣ ಶೇ.90ರ ತನಕ ಕಡಿಮೆಯಾಗಲಿದೆ. ಅದೇ ರೀತಿಯಲ್ಲಿ ಬ್ರಿಟನ್ನಿನ ಮದ್ಯ, ಆಟೋಮೋಟಿವ್, ಲೈಫ್ ಸೈನ್ಸ್, ಅಡ್ವಾನ್ಸ್‌ಡ್ ಮ್ಯಾನ್ಯುಫ್ಯಾಕ್ಚರಿಂಗ್ ಉತ್ಪನ್ನಗಳಿಗೆ ಭಾರತೀಯ ಮಾರುಕಟ್ಟೆಯ ಪ್ರವೇಶ ಸುಗಮವಾಗಲಿದೆ. 2030ರ ವೇಳೆಗೆ ದ್ವಿಪಕ್ಷೀಯ ವ್ಯಾಪಾರ ಇಮ್ಮಡಿಯಾಗುವ ನಿರೀಕ್ಷೆ ಇದೆ.

2. ಭಾರತ-ಅಮೆರಿಕ: ಭಾರತ ಮತ್ತು ಅಮೆರಿಕ ನಡುವೆ ಶೀಘ್ರದಲ್ಲಿಯೇ ಎಫ್‌ಟಿಎ ಏರ್ಪಡುವ ನಿರೀಕ್ಷೆ ಇದೆ. ಇದು ಅಮೆರಿಕದ 'ಸುಂಕ-ಸಮರ'ದ ಪ್ರಭಾವವನ್ನು ತಣ್ಣಗಾಗಿಸಲೂ ಸಹಕಾರಿಯಾಗಲಿದೆ. ಭಾರತದ ಟಾಪ್ ರಫ್ತು ತಾಣಗಳಲ್ಲಿ ಅಮೆರಿಕವೂ ಇರುವುದರಿಂದ ಸ್ಥಿರವಾದ ಆರ್ಥಿಕ ಬೆಳವಣಿಗೆಗೆ ಸೂಕ್ತ ಒಪ್ಪಂದ ಇದ್ದರೆ ಉತ್ತಮ.

3. ಐರೋಪ್ಯ ಒಕ್ಕೂಟ: ಭಾರತ ಮತ್ತು 27 ದೇಶಗಳನ್ನು ಒಳಗೊಂಡಿರುವ ಐರೋಪ್ಯ ಒಕ್ಕೂಟದ ಜತೆಗೆ ವ್ಯವಹಾರ ಕುದುರಿಸಲು 11 ಸುತ್ತಿನ ಮಾತುಕತೆಗಳು ನಡೆದಿದ್ದು ಇವು ಶೀಘ್ರ ಅಂತಿಮವಾಗುವ ನಿರೀಕ್ಷೆ ಇದೆ. ಇದರಲ್ಲಿ ಬೌದ್ಧಿಕ ಆಸ್ತಿ ಹಕ್ಕು, ಸರಕಾರದ ಖರೀದಿ ಪ್ರಕ್ರಿಯೆಗಳು, ಸುಂಕ ವಿಚಾರಗಳೂ ಇರಲಿವೆ. ಒಪ್ಪಂದ ಯಶಸ್ವಿಯಾದರೆ ಭಾರತದಿಂದ ಯುರೋಪಿಗೆ ರೆಡಿಮೇಡ್ ಗಾರ್ಮೆಂಟ್ಸ್, ಔಷಧಿ, ಉಕ್ಕು, ಪೆಟ್ರೋಲಿಯಂ ಉತ್ಪನ್ನಗಳು, ಇಲೆಕ್ಟ್ರಿಕಲ್ ಮಷಿನರೀಸ್ ರಫ್ತು ಸುಗಮವಾಗಲಿದೆ.

4. ಸ್ವಿಜರ್ಲೆಂಡ್: ಸ್ವಿಜರ್ಲೆಂಡ್ ಜತೆಗೆ ಟ್ರೇಡ್ ಆ್ಯಂಡ್ ಇಕನಾಮಿಕ್ ಪಾರ್ಟ್‌ನರ್‌ಶಿಪ್ ಅಗ್ರಿಮೆಂಟ್ (TEPA) ಸಲುವಾಗಿ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರು ಜೂನ್ 10ರಂದು ಸ್ವಿಜರ್ಲೆಂಡ್‌ಗೆ ಭೇಟಿ ನೀಡಿದ್ದರು. ಇದಕ್ಕೂ ಮುನ್ನ ಯುರೋಪ್ ಜತೆಗೆ ಎಫ್‌ಟಿಎಗೆ ಸಹಿ ಹಾಕಲಾಗಿತ್ತು. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಜೂನ್ 5ರಂದು ಕಿರ್ಗಿಸ್ತಾನ್ ಜತೆಗೆ ದ್ವಿಪಕ್ಷೀಯ ಹೂಡಿಕೆ ಒಪ್ಪಂದಕ್ಕೆ ಸಹಿ ಹಾಕಿದ್ದರು.

5. ಚಿಲಿ: ಭಾರತ ಮತ್ತು ಚಿಲಿಯ ನಡುವಿನ ವ್ಯಾಪಾರ-ವ್ಯವಹಾರಗಳಿಗೆ ಮಾತುಕತೆ ನಡೆಯುತ್ತಿದೆ. ಡಿಜಿಟಲ್ ಸೇವೆ, ಹೂಡಿಕೆ, ಎಂಎಸ್‌ಎಂಇ, ಆರೋಗ್ಯ, ಕೃಷಿ, ಹವಾಮಾನ ಬದಲಾವಣೆ, ತಂತ್ರಜ್ಞಾನ, ಕ್ರಿಟಿಕಲ್ ಮಿನರಲ್, ಸಹಕಾರ ವಲಯದಲ್ಲಿ ಒಪ್ಪಂದ ಏರ್ಪಡುವ ನಿರೀಕ್ಷೆ ಇದೆ.

6. ನ್ಯೂಜಿಲೆಂಡ್: ಭಾರತ ಮತ್ತು ನ್ಯೂಜಿಲೆಂಡ್ ನಡುವೆ ಎಫ್‌ಟಿಎ ಕುರಿತ ಮಾತುಕತೆ ಆರಂಭವಾಗಿದೆ. ಹಲವು ವರ್ಷಗಳ ಕಾಲ ಮಾತುಕತೆ ಬಾಕಿಯಾಗಿತ್ತು.

ಇತರ ದೇಶಗಳು: ಭಾರತ ಮತ್ತು ಒಮಾನ್, ಕತಾರ್, ಯುರೋಪಿಯನ್ ಫ್ರೀ ಟ್ರೇಡ್ ಅಸೋಸಿಯೇಶನ್ ಜತೆಗೂ ಮಾತುಕತೆ ಪ್ರಗತಿಯಲ್ಲಿದೆ. ಈ ಒಕ್ಕೂಟದಲ್ಲಿ ಐಸ್ಲೆಂಡ್, ನಾರ್ವೆ, ಸ್ವಿಜರ್ಲೆಂಡ್ ಮತ್ತು ಲಿಚೆನ್‌ಸ್ಟೀನ್ ಇವೆ. ಆಸಿಯಾನ್ ಒಕ್ಕೂಟದ ಜತೆಗಿನ ಒಪ್ಪಂದದ ಪರಾಮರ್ಶೆಗೂ ಮಾತುಕತೆ ನಡೆಯುತ್ತಿದೆ. ಭಾರತ-ಗಲ್ಫ್ ಕೋ-ಆಪರೇಷನ್ ಕೌನ್ಸಿಲ್ ಜತೆಗೆ ಕೂಡ ಎಫ್‌ಟಿಎ ಮಾತುಕತೆ ಚಾಲ್ತಿಯಲ್ಲಿದೆ. ಈ ಒಕ್ಕೂಟದಲ್ಲಿ ಸೌದಿ ಅರೇಬಿಯಾ, ಯುಎಇ, ಕತಾರ್, ಕುವೈತ್, ಒಮಾನ್ ಮತ್ತು ಬಹ್ರೈನ್ ಇವೆ. ಇಸ್ರೇಲ್ ಜತೆಗೂ ಮಾತುಕತೆ ಪ್ರಗತಿಯಲ್ಲಿದೆ. ತಂತ್ರಜ್ಞಾನ, ರಕ್ಷಣೆ, ಸೈಬರ್ ಸೆಕ್ಯುರಿಟಿ ಕ್ಷೇತ್ರದಲ್ಲಿ ಸಹಕಾರ ನಿರೀಕ್ಷಿಸಲಾಗಿದೆ. ಇವುಗಳಲ್ಲದೆ ಭಾರತವು ತನ್ನ ನೆರೆಹೊರೆಯ ದೇಶಗಳ ಜತೆಗೂ ಎಫ್‌ಟಿಎ ಮಾಡಿಕೊಂಡಿದೆ. ಆಗ್ನೇಯ ಏಷ್ಯಾ ವ್ಯಾಪಾರ ಒಪ್ಪಂದವು ಸಾರ್ಕ್ ರಾಷ್ಟ್ರಗಳ ಜತೆಗೆ ಸುಂಕ ಕಡಿತಕ್ಕೆ ಸಹಕಾರಿಯಾಗಿದೆ. ಶ್ರೀಲಂಕಾ, ನೇಪಾಳ, ಭೂತಾನ್, ಸಿಂಗಾಪುರ, ಮಲೇಷ್ಯಾ, ಮಾರಿಷಸ್ ಜತೆಗೂ ವ್ಯಾಪಾರ ನಿಯಮಗಳಿವೆ.

ಯುದ್ಧ ಮತ್ತು ಕದನ ವಿರಾಮ, ಸುಂಕ ಸಮರ ಮತ್ತು ಮುಕ್ತ ವ್ಯಾಪಾರ ಒಪ್ಪಂದಗಳು ಜತೆ ಜತೆಯಲ್ಲಿ ನಡೆಯುತ್ತಿರುವ ಜಮಾನವಿದು! ಉದಾಹರಣೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಗಮನಿಸಿ. ಒಂದೆಡೆ ನಾನಾ ದೇಶಗಳ ವಿರುದ್ಧ ಸುಂಕ ಸಮರ ಸಾರುತ್ತಾರೆ. ಬಳಿಕ ಚೌಕಾಸಿಯ ಆಟ. ಯುದ್ಧೋನ್ಮಾದ-ಕದನ ವಿರಾಮದಲ್ಲೂ ಪ್ರತ್ಯಕ್ಷ. ಬಳಿಕ ಮುಕ್ತ ವ್ಯಾಪಾರಗಳ ಮಾತುಕತೆ, ಚಹಾ ಕೂಟ. ಎಂಥಾ ವೈರಿಯಾದರೂ ಡೀಲ್‌ಗೆ ಸೈ! ಆದರೆ ಭಾರತದ್ದು ಇಂಥ ಕುಟಿಲ ನೀತಿಯಲ್ಲ ಬಿಡಿ.

ಭಟ್ಟರ್ ಸ್ಕಾಚ್

- ಎಂ.ಪರಮೇಶ್ವರ, ಮದ್ದಿಹಳ್ಳಿ
ಭಟ್ರೇ, ಡಿಕೆಶಿಗೆ ಸಿಎಂ ಕುರ್ಚಿ ಕೈಗೆಟುಕದ ದ್ರಾಕ್ಷಿ ಆಗಬಹುದಾ?
- **ತೋತಾಪುರಿ ಎಂದು ಭಾವಿಸಿ ಅಂತ ಹೇಳೋಣವಾ?!**

- ಸಗ್ರಿ ಹಯಗ್ರೀವ, ವಿದ್ಯಾಪೀಠ
ಭಟ್ರೇ, ನಂದಿಬೆಟ್ಟದ ತುತ್ತ ತುದಿಗೆ ಹೋಗಿ ಸಂಪುಟ ಸಭೆ ಮಾಡುವ ಐಡಿಯಾ ಸಿದ್ದುಗೆ ಏಕೆ ಬಂತು?
- **ಎತ್ತರದಲ್ಲಿ ಕುಳಿತು ನೋಡುವಾಗ ಕೆಳಗಿನ ಎಲ್ಲವೂ ಚೆನ್ನಾಗಿ ಕಾಣುವುದು ಸಹಜ ತಾನೇ?!**

- ಚಂದ್ರಶೇಖರ ನಾಗೂರ, (ಇಮೇಲ್ ಮೂಲಕ)
ಭಟ್ರೇ, ಕೆಲವು ಸಲ ಏನು ಆಗ್ತಿದೆ ಅನ್ನೋದೇ ಗೊತ್ತಾಗುವುದಿಲ್ಲವಲ್ಲ?
- **ಹೂಂ.. ಇಸ್ರೇಲ್-ಇರಾನ್ ಯುದ್ಧದಲ್ಲಿ ಯಾರು ಗೆದ್ರು, ಯಾರು ಸೋತ್ರು ಗೊತ್ತಾಗಲಿಲ್ಲ ನೋಡು!**

- ರಾಘಣ್ಣ, ಮೈಸೂರು
ಭಟ್ರೇ, ಔಟ್ ಆಫ್ ಫಾರ್ಮ್ ಆಗಿದ್ದ ಕ್ಯಾತಂದ್ರ ರಾಜಣ್ಣ ಮತ್ತೆ ಹಳಿಗೆ ಮರಳಿದಂತಿದೆ?
- **ಔಟ್ ಆಫ್ ಫಾರ್ಮ್ ಆಗಿರೋದೇ ವಾಸಿ ಅಂತ ಅನಿಸದಿದ್ದರೆ ಸಾಕು!**

- ಪ್ರಕಾಶ್ ನಾಡಿಗ್, ಬೆಂಗಳೂರು
ಭಟ್ರೇ, ಯಾರು ಹೆಚ್ಚು ಪ್ರೀತಿಸುತ್ತಾರೆ ಎಂಬ ದಂಪತಿಗಳ ಜಗಳದಲ್ಲಿ ವಿಜಯಿ ಯಾರು?
- **ನಾನು ಸೋತೆ ಎಂದು ಮೊದಲು ಕೈಚೆಲ್ಲಿದವರು!**

- ವರುಣ್, (ಇಮೇಲ್ ಮೂಲಕ)
ಭಟ್ರೇ, ಜೀವನದಲ್ಲಿ ಒಮ್ಮೊಮ್ಮೆ ರಾಜಕುಮಾರಿ ಭೇಟಿಯಾಗುತ್ತಾಳಂತೆ?
- **ಹಣೆಬರಹ... ಅವಳನ್ನು ಇಷ್ಟಪಡುವುದನ್ನು ಬಿಟ್ಟು ಕೆಲವರು ಆಕೆ ಏರಿ ಬಂದ ಕುದುರೆಯನ್ನೇ ದಿಟ್ಟಿಸುತ್ತಿರುತ್ತಾರೆ!**

- ರಾಜೇಶ ಕಲ್ಲೆಡ, ಬೆಳಗಾವಿ
ಭಟ್ರೇ, ನನ್ನ ಮನೆಯಲ್ಲಿ ನಾನೇ ಬಾಸ್, ಗೊತ್ತಾ?
- **ಹೂಂ.. ಆದರೆ ಎಲ್ಲ ನಿರ್ಧಾರಗಳನ್ನು ನಿನ್ನ ಪತ್ನಿಯೇ ತೆಗೆದುಕೊಳ್ತಾಳಂತೆ!**

- ರಾಜು ಪತ್ತಾರ, ಹುಬ್ಬಳ್ಳಿ
ಭಟ್ರೇ, ದೇಹಕ್ಕೆ ಬೇಕಾದಂತೆ ಮನಸ್ಸಿಗೂ ವ್ಯಾಯಾಮ ಬೇಕಂತೆ?
- **ಅದಕ್ಕಾಗಿಯೇ ನಾನು ದಿನಾ ಬೆಳಗ್ಗೆ ಜಾಗಿಂಗ್ ಬಗ್ಗೆ ಯೋಚಿಸೋದು!**

- ರಮೇಶ ಗೌಡ, ಮಳವಳ್ಳಿ
ಭಟ್ರೇ, ಗಂಡಸರು ಭವಿಷ್ಯದ ಬಗ್ಗೆ ಯೋಚಿಸುತ್ತಾರೆ ಅಂತ ಹೇಗೆ ಹೇಳ್ತೀರಿ?
- **ಅವರು ಯಾವತ್ತೂ ಒಂದರ ಬದಲು ಎರಡು ಕಾಂಡಮ್ ಪ್ಯಾಕೆಟ್ ಖರೀದಿಸುತ್ತಾರೆ!**

- ನವೀನ ಎಂ., ಮೈಸೂರು
ಭಟ್ರೇ, ಪುಸ್ತಕಗಳು ಮನುಷ್ಯ ಇರುವ ತನಕ ಇದ್ದೇ ಇರುತ್ತವಂತೆ?
- **ಹೂಂ.. ನಿದ್ದೆ ಇರುವ ತನಕ ಪುಸ್ತಕಗಳು ಇದ್ದೇ ಇರುತ್ತವೆ!**

ಸದಾ ಓಡುತ್ತಿರುವ ಇದನ್ನು ಕಾಪಾಡಿಕೊಳ್ಳಿ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com
shashidhara.halady@gmail.com

ನಮ್ಮ ಆರೋಗ್ಯದ ಕುರಿತು ಎಷ್ಟೇ ಚರ್ಚೆ ಮಾಡಿದರೂ, ಎಷ್ಟೇ ಎಚ್ಚರ ವಹಿಸಿದರೂ, ದೇವರ ಕೃಪೆ ಇದ್ದರೆ ಮಾತ್ರ ಅದು ಚೆನ್ನಾಗಿರುತ್ತದೆ ಎಂಬ ಮಾತಿದೆ. ಅಂದರೆ, ಆರೋಗ್ಯದ ಕುರಿತು ಅಪಾರ ಕಾಳಜಿ ವಹಿಸಿದ್ದ ಕೆಲವರಿಗೆ ಒಮ್ಮೊಮ್ಮೆ ಗಂಭೀರ ಅನಾರೋಗ್ಯ ಕಾಡುವುದುಂಟು! ಆದ್ದರಿಂದಲೇ, ಅದೃಷ್ಟ, ದೇವರ ಕೃಪೆ, ನಮ್ಮ ಜಾಗ್ರತೆ, ವಾತಾವರಣದ ಪ್ರಭಾವ ಎಲ್ಲವೂ ಚೆನ್ನಾಗಿದ್ದಾಗ, ಆರೋಗ್ಯ ಚೆನ್ನಾಗಿರುತ್ತದೆ! ಅದೇ ರೀತಿ ನಮ್ಮ ಹೃದಯವೂ.

ಹೃದಯದ ಕುರಿತು ಕಳೆದ ನಾಲ್ಕಾರು ವಾರಗಳಿಂದ ಬೆಚ್ಚಿ ಬೀಳಿಸುವ ಸುದ್ದಿಗಳು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿವೆ. ಹಲವು ಊರುಗಳಲ್ಲಿ ಎಳವೆಯಲ್ಲೇ ಹೃದಯಾಘಾತವಾಗುವ ವರದಿಗಳು ವಿವರವಾಗಿ, ಅಂಕಿ-ಅಂಶ ಸಹಿತ ದೃಶ್ಯ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿವೆ. ವರದಿ ಮಾಡುವ ಉತ್ಸಾಹದ ಭರದಲ್ಲಿ, ಈ ಸುದ್ದಿ ಅವೆಷ್ಟು ಪರಿಣಾಮಕಾರಿಯಾಗಿ ಜನರ ಮನ ತಲುಪುತ್ತಿವೆ ಎಂದರೆ, ನಿರಂತರವಾಗಿ ಆ ಸುದ್ದಿಯನ್ನು ನೋಡಿದವರೇ ಬೆದರಿಹೋಗುವಷ್ಟು! ಅದರಲ್ಲೂ, ಕಳೆದ ಒಂದು ತಿಂಗಳಿನ ಅವಧಿಯಲ್ಲಿ ಹಾಸನ ಜಿಲ್ಲೆಯಲ್ಲಿ ಯುವ ವಯಸ್ಸಿನ ಹಲವರು ಹೃದಯಾಘಾತದಿಂದ ಮೃತಪಟ್ಟ ಸುದ್ದಿಯಂತೂ ಎಲ್ಲರನ್ನೂ ತಲ್ಲಣಗೊಳಿಸುವಂತಿದೆ.

ಸಾಮಾನ್ಯವಾಗಿ ಹೃದಯಾಘಾತವು ವಯಸ್ಸಾದವರನ್ನು ಕಾಡುತ್ತದೆ ಎಂಬ ತಿಳಿವಳಿಕೆ ಇತ್ತು. ನಿವೃತ್ತಿಯ ಅಂಚಿನಲ್ಲಿರುವವರು, ಇನ್ನೂ ಹಿರಿಯರು ಹೃದಯಾಘಾತಕ್ಕೆ ಒಳಗಾಗುವ ಸುದ್ದಿಗಳನ್ನು ಕೇಳುತ್ತಿದ್ದೆವು. ಆದರೆ, ಈಗ ಒಂದೆರಡು ವರ್ಷಗಳ ಅವಧಿಯಲ್ಲಿ, ಯುವ ಪೀಳಿಗೆ, ನಡುವಯಸ್ಸಿನವರು ಹೃದಯಾಘಾತಕ್ಕೆ ಒಳಗಾಗುತ್ತಿರುವ ಆಘಾತಕಾರಿ ಸುದ್ದಿಗಳು ಹಲವು ಪ್ರದೇಶಗಳಿಂದ ವರದಿಯಾಗುತ್ತಿವೆ. ಇದೇನು? ಒಮ್ಮೆಗೇ ಯುವ ವಯಸ್ಸಿನವರ ಹೃದಯವು ದುರ್ಬಲವಾಗತೊಡಗಿದೆಯೇ ಎಂಬ ಆತಂಕ ಹಲವರನ್ನು ಕಾಡಿದೆ.

ಹಾಸನ ಜಿಲ್ಲೆಯಿಂದ ಕಳೆದ ಒಂದೆರಡು ವಾರಗಳಿಂದ ಅಂಕಿ-ಅಂಶ ಸಹಿತ ವರದಿಯಾಗುತ್ತಿರುವ ಹೃದಯಾಘಾತಗಳ ಸಂಖ್ಯೆ ನಿಜಕ್ಕೂ ದಿಗಿಲು ಹುಟ್ಟಿಸುವಂಥದ್ದು. ಆ ಜಿಲ್ಲೆಯ ವರದಿಗಾರರು ಅಂಕಿ-ಅಂಶಗಳನ್ನು ನಿಖರವಾಗಿ ಪಟ್ಟಿ ಮಾಡಿ, ಮಾಧ್ಯಮಗಳಿಗೆ ನೀಡಿದ್ದರ ಜತೆಯಲ್ಲೇ, ವರದಿ ಪ್ರಸಾರವಾಗುತ್ತಿರುವ ದಿನಗಳಲ್ಲೇ ಮತ್ತೆ ದಿನಕ್ಕೆ ಎರಡು ಮೂರರಂತೆ ಹೃದಯಾಘಾತಗಳ ವರದಿ ಆ ಜಿಲ್ಲೆಯಿಂದ ಬರುತ್ತಿದೆ.

ಹಾಗೆ ನೋಡಿದರೆ, ಹಾಸನ ಮಾತ್ರವಲ್ಲ, ಇತರ ಹಲವು ಜಿಲ್ಲೆಗಳಿಂದಲೂ ಇಂಥ ಹೃದಯಾಘಾತದ ವರದಿಗಳು ಬರುತ್ತಿವೆ. ಕರಾವಳಿಯ ಜಿಲ್ಲೆಗಳಲ್ಲಿ ಕಳೆದ ಒಂದೆರಡು ವರ್ಷಗಳಿಂದ ಯುವ ವಯಸ್ಸಿನವರು ಹೃದಯಾಘಾತಕ್ಕೆ ಬಲಿಯಾಗುತ್ತಿರುವ ವರದಿಗಳು ಪದೇ ಪದೇ ಬರುತ್ತಿದ್ದು, ಕರಾವಳಿ ಜಿಲ್ಲೆಯ ಕೆಲವು ಪ್ರಾಜ್ಞರು ಮತ್ತು ಪತ್ರಕರ್ತರು ಈ ಕುರಿತು ಸರಕಾರದ ಗಮನ ಸೆಳೆದು, ಎಚ್ಚರಿಕೆಯ ಗಂಟೆಯನ್ನು ಅದಾಗಲೇ ಬಾರಿಸಿದ್ದಾರೆ. ಜತೆಗೆ, ಸರಕಾರವೂ, ನಡುವಯಸ್ಸಿನವರನ್ನು ಆಘಾತಕ್ಕೆ ತಳ್ಳುತ್ತಿರುವ ಇಂಥ ನೋವಿನ ಘಟನೆಗಳ ಕುರಿತು ಸಂಶೋಧನೆ ನಡೆಸುವ ವ್ಯವಸ್ಥೆಯನ್ನೂ ಮಾಡಿದೆ.

ಆದರೂ, ಈಚಿನ ವರ್ಷಗಳಲ್ಲಿ ವರದಿಯಾಗುತ್ತಿರುವ ಇಂಥ ಹೃದಯಾಘಾತಗಳು ಎಂಥವರನ್ನೂ ತಲ್ಲಣಕ್ಕೆ ಒಳಪಡಿಸುತ್ತಿರುವುದಂತೂ ನಿಜ. ಇಲ್ಲಿ ಇನ್ನೊಂದು ವಿಚಾರ ಗಮನಸೆಳೆಯುವಂತಿದೆ: ಕೆಲವು ದಶಕಗಳ ಹಿಂದೆ, ಹೃದಯಾಘಾತವಾದ ವ್ಯಕ್ತಿಯನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡುವಷ್ಟು ಸಮಯ ದೊರಕುತ್ತಿತ್ತು. ಆದರೆ, ಈಚಿನ ಒಂದೆರಡು ವರ್ಷಗಳ ವರದಿಗಳನ್ನು ಗಮನಿಸಿದರೆ, ಯುವ ವಯಸ್ಸಿನ, ನಡುವಯಸ್ಸಿನ ಹಲವರು ಇದ್ದಕ್ಕಿದ್ದಂತೆ ಕುಸಿದು, ಅಲ್ಲೇ ಜೀವ ಕಳೆದುಕೊಳ್ಳುವ ದಾರುಣ ವಿದ್ಯಮಾನ ಕಾಣಿಸುತ್ತಿದೆ. ಅಂದರೆ, ಹೃದಯದ ತೊಂದರೆ ಇದೆ ಎಂದು ಗೊತ್ತಾದ ನಂತರ, ಎದೆಭಾಗದಲ್ಲಿ ನೋವು ಕಾಣಿಸಿದ ನಂತರ, ಸುಸ್ತು ಕಾಣಿಸಿದ ನಂತರ, ವೈದ್ಯರ ಬಳಿ ಹೋಗಿ, ಸೂಕ್ತ ಮತ್ತು ತುರ್ತು ಚಿಕಿತ್ಸೆ ಪಡೆಯುವಷ್ಟು ಸಮಯ ಸಹ ಇಂದು ಹಲವರಿಗೆ ದೊರಕುತ್ತಿಲ್ಲ. ಹೃದಯಾಘಾತವಾದ ಕೆಲವೇ ನಿಮಿಷಗಳಲ್ಲಿ ಜೀವ ಹೋಗುತ್ತಿರುವ ದಾರುಣ ಎನ್ನಬಹುದಾದ ವರದಿಗಳನ್ನು ಕಂಡಾಗ, ನಿಜಕ್ಕೂ ತಲ್ಲಣ ಎನಿಸುತ್ತಿದೆ. ಹಾಸನ ಜಿಲ್ಲೆಯ ವಿಚಾರವನ್ನೇ ಗಮನಿಸಿದರೆ, ಕಳೆದ ವಾರದಲ್ಲಿ ವೈದ್ಯರೊಬ್ಬರು ಸಹ ಕಡಿಮೆ ವಯಸ್ಸಿನಲ್ಲೇ ಹೃದಯಾಘಾತಕ್ಕೆ ಬಲಿಯಾದ ವಿಚಾರ ಮಾಧ್ಯಮಗಳಲ್ಲಿ ವರದಿಯಾಯಿತು! ಜನರಿಗೆ ಆರೋಗ್ಯದ ಕುರಿತು ಸಲಹೆ ನೀಡಿ, ಚಿಕಿತ್ಸೆ ನೀಡುತ್ತಿರುವ ವೈದ್ಯರೇ ಹೃದಯಾಘಾತಕ್ಕೆ ಬಹುಬೇಗನೆ ಬಲಿಯಾಗಿರುವುದು ಇನ್ನಷ್ಟು ತಲ್ಲಣ ಹುಟ್ಟಿಸಿದೆ. ಏಕೆಂದರೆ, ಹೆಚ್ಚಿನ ವೈದ್ಯರಿಗೆ ತಮ್ಮ ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳುವ ಕುರಿತು ವೈಜ್ಞಾನಿಕ ಮಾಹಿತಿ ಇರುತ್ತದೆ. ಅವರಿಗೇ ಅಪರೂಪಕ್ಕೆ ಹೀಗಾದಾಗ, ಇನ್ನು ಜನಸಾಮಾನ್ಯರ ಪಾಡೇನು?

ಹೃದಯಾಘಾತ, ಹೃದಯದ ಆರೋಗ್ಯ ಇವೆಲ್ಲವನ್ನೂ ವಿವರವಾಗಿ ಚರ್ಚಿಸಲು, ಆ ಕುರಿತು ಸೂಕ್ತ ಮಾಹಿತಿ ಮತ್ತು ಎಚ್ಚರಿಕೆ ನೀಡಲು, ಪರಿಣತ ವೈದ್ಯರಿಂದ ಮಾತ್ರ ಸಾಧ್ಯ. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡೇ, ಇತ್ತೀಚೆಗೆ ಯುವಜನರಿಗೆ ಹೆಚ್ಚು ಹೃದಯಾಘಾತವಾಗುತ್ತಿರುವ ವಿದ್ಯಮಾನವನ್ನು ಈ ಅಂಕಣದಲ್ಲಿ ಚರ್ಚಿಸಲಾಗಿದೆ.

ಹೃದಯಾಘಾತ ಏಕೆ ಆಗುತ್ತದೆ ಮತ್ತು ಹೃದಯದ ಆರೋಗ್ಯ ಕಾಪಾಡಿಕೊಳ್ಳಲು ಏನು ಮಾಡಬೇಕು ಎಂಬ ವಿಚಾರ ನಮ್ಮ ವೈದ್ಯರಿಗೆ ಚೆನ್ನಾಗಿ ಗೊತ್ತು. ಆದ್ದರಿಂದ, ಆರೋಗ್ಯಪೂರ್ಣ ಬದುಕು ನಡೆಸಲು, ಹೃದಯಕ್ಕೆ ಒತ್ತಡ ಬೀಳದಂತೆ ದಿನಚರಿ ರೂಪಿಸಲು, ಸೂಕ್ತ ಸಲಹೆಗಳನ್ನು ಈಗಾಗಲೇ ಅಧಿಕೃತವಾಗಿಯೇ ನೀಡಿದ್ದಾರೆ. ಉತ್ತಮ ಆರೋಗ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ, ಜನಪರ ಕಾಳಜಿಯುಳ್ಳ ಹಲವು ವೈದ್ಯರು ಯುಟ್ಯೂಬ್, ಭಾಷಣ, ಕೈಪಿಡಿಗಳ ಮೂಲಕ ಸೂಕ್ತ ಸಲಹೆಯನ್ನು ಈಗಾಗಲೇ ನೀಡಿದ್ದಾರೆ. ಹೃದಯದ ಆರೋಗ್ಯ ಕಾಪಾಡಿಕೊಳ್ಳಲು, ದಿನಕ್ಕೆ ಅರ್ಧ ಗಂಟೆಯಿಂದ ಒಂದು ಗಂಟೆ ನಡಿಗೆ ಅಥವಾ ವ್ಯಾಯಾಮ ಮಾಡುವುದು, ಧೂಮಪಾನವನ್ನು ತ್ಯಜಿಸುವುದು, ಜಿಡ್ಡು ಪದಾರ್ಥಗಳ ಸೇವನೆಯಲ್ಲಿ ಮಿತಿ, ಅತಿಯಾದ ಆಹಾರ ಸೇವನೆಯಿಂದ ದೂರವಿರುವುದು ಇವೇ ಮೊದಲಾದ ಸೂಕ್ತ ಸಲಹೆಗಳನ್ನು ನೀಡಿದ್ದಾರೆ. ಇದನ್ನು ಪಾಲಿಸಿದವರ ಆರೋಗ್ಯ ಚೆನ್ನಾಗಿರುವುದನ್ನು ಸಹ ಗಮನಿಸಲಾಗಿದೆ.

ಆದರೆ, ಈಚಿನ ಒಂದೆರಡು ವರ್ಷಗಳಲ್ಲಿ ಯುವ ವಯಸ್ಸಿನವರು ಮತ್ತು ನಡುವಯಸ್ಸಿನವರೇ ಅಧಿಕ ಸಂಖ್ಯೆಯಲ್ಲಿ ಹೃದಯಾಘಾತಕ್ಕೆ ಬಲಿಯಾಗುತ್ತಿರುವುದರ ನಿರ್ದಿಷ್ಟ ಕಾರಣವನ್ನು ಇನ್ನೂ ನಿಖರವಾಗಿ ಪತ್ತೆ ಹಚ್ಚಲಾಗಿಲ್ಲ. ಬಹುಶಃ ಈ ಕುರಿತು ಇನ್ನಷ್ಟು ವೈದ್ಯಕೀಯ ಸಂಶೋಧನೆಗಳು ಅಗತ್ಯವಾಗಿರಬಹುದು. ಸರಕಾರದ ಅಂಗಸಂಸ್ಥೆಗಳು ನಿನ್ನೆ ತಾನೆ ಹೇಳಿಕೆ ನೀಡಿ, ಕೋವಿಡ್ ತಡೆಯುವ ಲಸಿಕೆಯಿಂದ ಹೃದಯಾಘಾತವಾಗುವ ಸಂದರ್ಭ ತೀರಾ ಕಡಿಮೆ ಎಂದು ಜನರಲ್ಲಿ ಧೈರ್ಯ ತುಂಬಿವೆ. ಹಾಗಿದ್ದರೆ, ಇತ್ತೀಚೆಗೆ ವರದಿಯಾಗುತ್ತಿರುವ ಹೃದಯಾಘಾತಗಳಿಗೆ ಕಾರಣವೇನು?

ಯುವ ವಯಸ್ಸಿನವರು ಅಲ್ಲಲ್ಲಿ ಹೃದಯಾಘಾತಕ್ಕೆ ಬಲಿಯಾಗುತ್ತಿರುವ ವರದಿಗಳು ಅಧಿಕ ಸಂಖ್ಯೆಯಲ್ಲಿ ಹೊರಬರುತ್ತಿರುವ ಈ ದಿನಗಳಲ್ಲಿ, ಜನಸಾಮಾನ್ಯರಲ್ಲಿ ಧೈರ್ಯ ತುಂಬುವ ಕೆಲಸವನ್ನು ಎಲ್ಲರೂ ಮಾಡಬೇಕಾಗಿದೆ. ಸರಕಾರದ ಅಂಗಸಂಸ್ಥೆಗಳು, ಅಧಿಕಾರದಲ್ಲಿರುವವರು, ವೈದ್ಯರು ಎಲ್ಲರೂ ಜನರಿಗೆ ಧೈರ್ಯ ನೀಡುತ್ತಾ, ತಲ್ಲಣಕ್ಕೆ ಒಳಗಾಗದಂತೆ ನೋಡಿಕೊಳ್ಳಬೇಕಿದೆ, ಸ್ಫೂರ್ತಿ ತುಂಬುವ ಮಾತುಗಳನ್ನು ಆಡಬೇಕಾಗಿದೆ. ಇಂಥ ಎಚ್ಚರವನ್ನು ಇಟ್ಟುಕೊಂಡೇ, ಕೆಲವು ಸೂಕ್ಷ್ಮ ಎನಿಸುವ ವಿಚಾರಗಳನ್ನು ಈ ಬರಹದಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

- ಕಳೆದ ಕೆಲವು ದಶಕಗಳಿಂದ ಗಮನಿಸುತ್ತಾ ಬಂದಂತೆ, ಎದ್ದು ಕಾಣಿಸುವ ಒಂದು ವಿಚಾರವೆಂದರೆ, ನಮ್ಮ ಜನರಲ್ಲಿ ಅತಿಯಾದ ವಾಹನ ಬಳಕೆ. ಅಂದರೆ, ಸ್ಕೂಟರ್, ಮೋಟಾರ್ ಸೈಕಲ್ ಮತ್ತು ಕಾರುಗಳನ್ನು ಜನರು ಇತ್ತೀಚಿನ ದಿನಗಳಲ್ಲಿ ಅತಿಯಾಗಿ ಬಳಸಿ, ಅದರಿಂದಾಗಿ ದೈಹಿಕ ಚಟುವಟಿಕೆ ಕಡಿಮೆಯಾಗುತ್ತಿರುವ ಪ್ರಮುಖ ವಿದ್ಯಮಾನ. 1980ರ ದಶಕದಲ್ಲಿ ಈ ಲೇಖಕ ಗಮನಿಸಿದಂತೆ, ಬಹುಪಾಲು ಉದ್ಯೋಗಿಗಳು, ವಿದ್ಯಾರ್ಥಿಗಳು ಸಾರ್ವಜನಿಕ ಸಾರಿಗೆ ಬಳಸುತ್ತಿದ್ದರು. ಅದರಿಂದಾಗುವ ಒಂದು ಲಾಭವೆಂದರೆ, ಬಸ್‌ಸ್ಟ್ಯಾಂಡ್‌ಗೋ, ರೈಲ್ವೆ ನಿಲ್ದಾಣಕ್ಕೋ ತುಸು ದೂರ ನಡೆಯಬೇಕಿತ್ತು. ಅಂದರೆ ನೂರು ಅಡಿ, ಇನ್ನೂರು ಅಡಿ ಆಗಾಗ ನಡೆಯುತ್ತಿದ್ದರು; ಮಧ್ಯಾಹ್ನ ಊಟದ ಅವಧಿಯಲ್ಲಿ, ತುಸು ದೂರ ನಡೆದು ಕ್ಯಾಂಟೀನಿಗೋ, ಬೇರೆಲ್ಲೋ ಹೋಗಿ ಊಟ ಮಾಡಿ, ಪುನಃ ನಡೆದು ವಾಪಾಸು ಬರುತ್ತಿದ್ದರು. ಇಂದಿನ ದಿನಗಳಲ್ಲಿ, ಮನೆಯ ಬಾಗಿಲಿನಿಂದ ಕಚೇರಿ ಬಾಗಿಲಿನ ತನಕ ವಾಹನ ಬಳಕೆ ಸಾಮಾನ್ಯವಾಗಿದೆ, ಇದರಿಂದ ದೈಹಿಕ ಚಟುವಟಿಕೆ ಕಡಿಮೆಯಾಗಿದೆ.
- ಒತ್ತಡದ ಕೆಲಸ ಮಾಡುವ ಕೆಲವರು ಗಂಟೆಗೊಮ್ಮೆಯಂತೆ, ಎರಡು ಗಂಟೆಗೊಮ್ಮೆಯಂತೆ ಕಾಫಿ ಮತ್ತು ಚಹಾ ಸೇವನೆ ಮಾಡುವ ಚಟುವಟಿಕೆಯೂ, ದೈಹಿಕ ಆರೋಗ್ಯಕ್ಕೆ ತೊಡಕನ್ನುಂಟುಮಾಡುತ್ತದೆ. ನಮ್ಮ ದೇಶದಲ್ಲಿ ಸಕ್ಕರೆ ಬೆರೆಸಿದ ಕಾಫಿ, ಚಹಾ ಸಾಮಾನ್ಯ. ಪ್ರತಿ ಬಾರಿ ಕಾಫಿ ಕುಡಿದಾಗಲೂ, ಅರ್ಧ ಚಮಚ ಸಕ್ಕರೆ ಸೇವನೆ. ಈ ಸಕ್ಕರೆಯನ್ನು ಜೀರ್ಣಿಸಿಕೊಳ್ಳಲು, ನಮ್ಮ ದೇಹವು, ತಾನು ಶೇಖರಿಸಿಟ್ಟಿರುವ ವಿಟಮಿನ್‌ಗಳನ್ನು ಖರ್ಚು ಮಾಡಬೇಕಂತೆ! ಇದರಿಂದಾಗಿ ನಿಧಾನವಾಗಿ ಅಗತ್ಯ ವಿಟಮಿನ್ ಕೊರತೆ, ಅದರಿಂದ ಒಟ್ಟಾರೆ ಆರೋಗ್ಯಕ್ಕೆ ಕುಂದು.
- ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯಪೂರ್ವದಲ್ಲಿ ಸಕ್ಕರೆಯ ವಿರುದ್ಧ ಚಳವಳಿ ನಡೆಸಿದ್ದರು. ಅವರು ನೀಡಿದ ಕಾರಣ, 'ಸಕ್ಕರೆಯಿಂದ ಹೃದಯದ ಆರೋಗ್ಯ ಕುಂದುತ್ತದೆ!'. ಈಚಿನ ವರ್ಷಗಳಲ್ಲಿ ಆಹಾರದಲ್ಲಿ ಅತಿಯಾಗಿ ಬಳಸುತ್ತಿರುವ ಸಕ್ಕರೆಯಿಂದಲೂ, ಇಂದಿನ ಯುವಜನರ ಆರೋಗ್ಯಕ್ಕೆ ಹಾನಿಯಾಗಿರುವ ಸಾಧ್ಯತೆ ಇದೆ.
- ಕಳೆದ ಒಂದೆರಡು ದಶಕದಲ್ಲಿ ವಿದ್ಯಾರ್ಥಿಗಳ ಜಂಕ್‌ಫುಡ್ ಮತ್ತು ಸಕ್ಕರೆ ಬೆರೆಸಿದ ಆಹಾರ ಸೇವನೆಯ ಪ್ರಮಾಣ ಜಾಸ್ತಿಯಾಗಿದೆ! ಬಿಸ್ಕಿಟ್, ಚಾಕೊಲೇಟ್, ಐಸ್‌ಕ್ರೀಂ, ಬೇಕರಿ ತಿನಿಸುಗಳು ಇವೆಲ್ಲವನ್ನೂ ಪ್ರತಿದಿನವೆಂಬಂತೆ ತಿನ್ನುತ್ತಾ ಬಂದಿರುವ ಒಂದು ತಲೆಮಾರನ್ನು ನಾವಿಂದು ಕಾಣಬಹುದು. ಅವರು ಇಂದಿನ ಯುವಜನತೆಯ ಭಾಗವಾಗಿದ್ದಾರೆ. ಸಕ್ಕರೆ ಬೆರೆಸಿದ ಇಂಥ ತಿನಿಸುಗಳ ನಿರಂತರ ಸೇವನೆಯಿಂದ ಆಗುವ ದುಷ್ಪರಿಣಾಮವನ್ನು ಅಧ್ಯಯನಗಳು ಗುರುತಿಸಬೇಕಾಗಿದೆ.
- ಎಣ್ಣೆ, ಮೈದಾ, ಪಾಲಿಶ್ ಮಾಡಿದ ಅಕ್ಕಿಯ ಬಳಕೆ ಈಗ ತೀರಾ ಸಾಮಾನ್ಯ. ಎಣ್ಣೆಯ ಬಳಕೆಯಲ್ಲೂ ಇನ್ನೊಂದು ಆಯಾಮವಿದೆ. ಅದೇನೆಂದರೆ ಆರೋಗ್ಯಕ್ಕೆ ಹಾನಿಮಾಡುವುದೆಂದು ಖಚಿತವಾಗಿ ಗುರುತಿಸಲಾಗಿರುವ ಪಾಮ್ ಆಯಿಲ್ ಬಳಕೆ! ಎಲ್ಲಾ ಬೇಕರಿ ತಿನಿಸು, ಬಿಸ್ಕೆಟ್ ಮೊದಲಾದವುಗಳಲ್ಲಿ ಪಾಮ್ ಆಯಿಲ್ ಬಳಕೆಯನ್ನು ಅಧಿಕೃತಗೊಳಿಸಲಾಗಿದ್ದು, ಇದನ್ನು ಹಲವು ವರ್ಷಗಳ ಕಾಲ ತಿನ್ನುತ್ತಾ ಬಂದಿರುವವರ ಆರೋಗ್ಯ ಕುಂದಿರುವ ಸಾಧ್ಯತೆ ಇದ್ದೇ ಇದೆ.
- ಈಚಿನ ಒಂದು ದಶಕಗಳಿಂದ ಗಮನಿಸಿದ ಪ್ರಮುಖ ಮತ್ತು ಕಳವಳಕಾರಿ ವಿಚಾರವೆಂದರೆ, 'ನಿದ್ದೆ ಮಾಡದ ಯುವಜನತೆ!' ಅಂದರೆ, ಅಗತ್ಯ ಪ್ರಮಾಣ ನಿದ್ದೆಯನ್ನು ಮಾಡದೇ, ಕೆಲಸದ ಒತ್ತಡದಲ್ಲೋ, ಮೊಬೈಲ್ ನೋಡುತ್ತಲೋ ಕಾಲ ಕಳೆಯುತ್ತಿರುವ ಒಂದಿಡೀ ತಲೆಮಾರನ್ನು ನಾವಿಂದು ಕಾಣಬಹುದು. ವಿದ್ಯಾರ್ಥಿಗಳು, ಹೊಸದಾಗಿ ಕೆಲಸಕ್ಕೆ ಸೇರಿರುವವರು, ಜನಸಾಮಾನ್ಯರು- ಇವರಲ್ಲಿ ಹೆಚ್ಚಿನವರು ರಾತ್ರಿ ಮಲಗುವ ಮುನ್ನ ಹಲವು ನಿಮಿಷಗಳ ಕಾಲ ಮೊಬೈಲ್ ನೋಡುತ್ತಾ (ಕೆಲವು ಬಾರಿ ಗಂಟೆಗಟ್ಟಲೆ) ಸಾಮಾಜಿಕ ಜಾಲತಾಣದಲ್ಲಿ ವಿಹರಿಸುತ್ತಿರುವ ವಿದ್ಯಮಾನ. ಇದು ಎಷ್ಟು ಸಾರ್ವತ್ರಿಕವಾಗಿದೆ ಎಂದರೆ, ಈ ಬರಹ ಓದುತ್ತಿರುವ ಮನೆಗಳಲ್ಲಿ ಒಬ್ಬರಾದರೂ ಈ ರೀತಿ ನಿದ್ದೆಗೆಟ್ಟು ಮೊಬೈಲ್ ನೋಡುವ ಪ್ರವೃತ್ತಿಯನ್ನು ಅಂಟಿಸಿಕೊಂಡಿರಬಹುದು! ಅಂದರೆ, ಅಷ್ಟು ನಿಮಿಷಗಳ ಕಾಲ ಅಂಥವರ ನಿದ್ರೆಯನ್ನು ಕಸಿದುಕೊಂಡಿವೆ ಈ ಸಾಮಾಜಿಕ ಜಾಲತಾಣಗಳು! ದೇಹದ ಆರೋಗ್ಯ ಮತ್ತು ಹೃದಯದ ಆರೋಗ್ಯ ಕಾಪಾಡಲು ಪ್ರತಿದಿನ ಸರಾಸರಿ 7ರಿಂದ 8 ಗಂಟೆಗಳ ಕಾಲ ನಿದ್ದೆ ಅಗತ್ಯ ಎಂದು ವೈದ್ಯಕೀಯ ಸಂಶೋಧನೆಗಳು ಸ್ಪಷ್ಟವಾಗಿ ಹೇಳಿವೆ. ಇಂದಿನ ದಿನಚರಿಯಲ್ಲಿ, ಈ ರೀತಿ ವರ್ಷಗಟ್ಟಲೆ ನಿದ್ದೆಗೆಡುವ ಪ್ರವೃತ್ತಿ ಸಾಮಾನ್ಯವಾಗಿರುವುದರಿಂದ, ಇದರಿಂದಲೂ ಹೃದಯದ ಆರೋಗ್ಯಕ್ಕೆ ಕುಂದುಂಟಾಗಿರಬಹುದು.
- ಪ್ರತಿದಿನ 30ರಿಂದ 60 ನಿಮಿಷ ನಡಿಗೆಯೂ ಇಂದಿನ ಯುವಜನತೆಯಿಂದ ದೂರಾಗಿದೆ! ಅಂದರೆ, ಅದಾಗಿ ದೂರಾಗಿದ್ದು ಅಲ್ಲ, ಬದಲಿಗೆ ಇಂದಿನ ಜನರು ಈ ಕನಿಷ್ಠ ವ್ಯಾಯಾಮವನ್ನು ಮಾಡುತ್ತಿಲ್ಲ, ಮಾಡಲು ಅವರಿಗೆ ಸಮಯ ದೊರಕುತ್ತಿಲ್ಲ!

ಇಂಥ ಹಲವು ಕಾರಣಗಳಿಂದಾಗಿ, ಹೆಚ್ಚು ಹೃದಯಾಘಾತಗಳು ಆಗುತ್ತಿರುವ ಸಾಧ್ಯತೆ ಇದೆ. ಈ ಕುರಿತು ವೈದ್ಯಕೀಯ ವಲಯವು ಇನ್ನಷ್ಟು ಸಂಶೋಧನೆಗಳನ್ನು ಕೈಗೊಂಡು, ಯುವಜನರಿಗೆ ಸೂಕ್ತ ಸಲಹೆಗಳನ್ನು ನೀಡಬೇಕೆಂಬುದು ಈ ಅಂಕಣದ ಉದ್ದೇಶವೇ ಹೊರತು ಯಾರೂ ಸ್ವಯಂವೈದ್ಯ ಮಾಡಿಕೊಳ್ಳಬಾರದು ಎಂದೇ ಸಲಹೆ ನೀಡಲಾಗಿದೆ. ಪ್ರತಿದಿನವೆಂಬಂತೆ ಮಾಧ್ಯಮಗಳಲ್ಲಿ ವರದಿಯಾಗುತ್ತಿರುವ ಹೃದಯಾಘಾತದ ಸುದ್ದಿಗಳನ್ನು ನಿರಂತರವಾಗಿ ನೋಡುತ್ತಿರುವ ಜನಸಾಮಾನ್ಯರು ಧೃತಿಗೆಡದೇ, ಸಮಚಿತ್ತದಿಂದ ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಇಂದಿನ ಅಗತ್ಯ. ಈ ಕುರಿತು ನಮ್ಮ ಸರಕಾರವು ಸಹ, ಜನಸಾಮಾನ್ಯರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕಾದ ದಿನಗಳು ಇದಾಗಿವೆ.

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್

- **ಸರಕು ಮತ್ತು ಸೇವಾ ತೆರಿಗೆಯಲ್ಲಿ (ಜಿಎಸ್‌ಟಿ) ಶೇ.12ರ ತೆರಿಗೆಯ 'ಸ್ಲ್ಯಾಬ್' ಅನ್ನು ರದ್ದುಗೊಳಿಸಲು ಕೇಂದ್ರ ಸರಕಾರ ಆಲೋಚಿಸುತ್ತಿದೆ ಎನ್ನಲಾಗಿದೆ: ಸುದ್ದಿ**
- ಹಾಗಾದಲ್ಲಿ ಅದು ನಿಜಕ್ಕೂ ಖುಷಿಯ ಸಂಗತಿಯೇ. ಏಕೆಂದರೆ, 'ಸ್ಲ್ಯಾಬ್' ಅಂದರೆ 'ಚಪ್ಪಡಿ' ಅನ್ನೋ ಅರ್ಥವೂ ಇದೆ. ತಲೆಮೇಲೆ ಏರಿರುವ (ಹೇರಿರುವ!) 'ಚಪ್ಪಡಿ'ಯೊಂದು ಹೀಗೆ ಕೆಳಗಿಳಿದರೆ ಅದು ಸ್ವಾಗತಾರ್ಹವೇ ಅಲ್ಲವೇ?!

- **9000 ಉದ್ಯೋಗಿಗಳನ್ನು ವಜಾಗೊಳಿಸಲು ಮೈಕ್ರೋಸಾಫ್ಟ್ ಕಂಪನಿ ಚಿಂತನೆ: ಸುದ್ದಿ**
- ಮತ್ತೆ ಮತ್ತೆ 'ಡಿಲೀಟ್' ಬಟನ್ ಒತ್ತುವುದಕ್ಕೆ ಮೈಕ್ರೋಸಾಫ್ಟ್ ತವಕಿಸುತ್ತಿದೆ ಅಂತಾಯ್ತು..!

- **ಸಿಎಂ ಬದಲಾವಣೆಗೆ ಯಾರೂ ಪಟ್ಟು ಹಿಡಿದಿಲ್ಲ, ಯಾರೂ ಒತ್ತಾಯ ಮಾಡಿಲ್ಲ: ಕಾಂಗ್ರೆಸ್ ಸಂಸದ ರಾಜಶೇಖರ್ ಹಿಟ್ನಾಳ್ ವಾಗ್ದಾಳಿ**
- 'ಹೌದಾ... ಹಾಗಿದ್ದರೆ ಬೆಂಕಿಯಿಲ್ಲದೆ ಹೊಗೆ ಎದ್ದಿದ್ದು ಹೇಗೆ?' ಎಂಬುದು ಜನರನ್ನು ಕಾಡುತ್ತಿರುವ ಯಕ್ಷಪ್ರಶ್ನೆ!

- **ಭಾರತದ ಜತೆಗೂಡಿ ಭಯೋತ್ಪಾದನೆ ವಿರುದ್ಧ ಹೋರಾಡಿ ಪ್ರಾದೇಶಿಕ ಶಾಂತಿಯನ್ನು ಬೆಳೆಸಲು ಮತ್ತು ಐತಿಹಾಸಿಕ ಪಾಲುದಾರಿಕೆಯನ್ನು ರೂಪಿಸಲು ಪಾಕಿಸ್ತಾನ ಸಿದ್ಧವಿದೆ: ಪಾಕಿಸ್ತಾನದ ಮಾಜಿ ಸಚಿವ ಬಿಲಾವಲ್ ಭುಟ್ಟೋ**
- ದುಷ್ಟರಿಗೆ ಅಥವಾ ಸ್ವಾರ್ಥಿಗಳಿಗೆ ಅಧಿಕಾರ ಕೊಟ್ಟರೆ ಏನಾಗುತ್ತೆ ಅನ್ನೋದನ್ನು ತಿಳಿಸಲು 'ಚೇಳಿಗೆ ಪಾರುಪತ್ಯ ಕೊಟ್ಟ ಹಾಗೆ' ಎಂಬ ಗಾದೆಯನ್ನು ಜನರು ಬಳಸುವುದು ವಾಡಿಕೆ. ಭಯೋತ್ಪಾದನೆಯ ವಿರುದ್ಧ ಪಾಕ್ ಹೋರಾಡುತ್ತೆ ಅನ್ನೋ ಬಿಲಾವಲ್ ಮಹಾಶಯರ ಮಾತು ಈ ಗಾದೆಯನ್ನು ನೆನಪಿಸಿದರೆ ಅಚ್ಚರಿಯಿಲ್ಲ!

- **ಭಾರಿ ಮಳೆ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಮತ್ತು ಜೋಯಿಡಾ ತಾಲೂಕುಗಳ ಅಂಗನವಾಡಿ ಹಾಗೂ ಶಾಲೆಗಳಿಗೆ ಗುರುವಾರ ರಜೆ ಘೋಷಣೆ: ಸುದ್ದಿ**
- ಈ ಸುದ್ದಿಯನ್ನು ಓದಿದ ರಾಜ್ಯದ ಮಿಕ್ಕ ಭಾಗಗಳ ಮಕ್ಕಳು, 'ಛೇ, ನಮ್ಮೂರಲ್ಲಿ ಯಾವಾಗ ಭಾರಿ ಮಳೆ ಬರುತ್ತೋ?' ಅಂತ ಗೊಣಗುತ್ತಾ ಆಕಾಶ ನೋಡಿದವಂತೆ!

- **ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಹತ್ವಾಕಾಂಕ್ಷೆಯ, ತೆರಿಗೆ-ವೆಚ್ಚ ಕಡಿತದ ಆಶಯವನ್ನು ಹೊಂದಿರುವ One Big Beautiful Bill' ಹೆಸರಿನ ವಿಧೇಯಕಕ್ಕೆ ಅಮೆರಿಕದ ಸೆನೆಟ್‌ನಲ್ಲಿ ಒಂದು ಮತದ ಅಂತರದಲ್ಲಿ ಅಂಗೀಕಾರ: ಸುದ್ದಿ**
- Beautifulಎಂಬ ಹೆಸರನ್ನು ಹೊಂದಿದ್ದರೂ, ಅಂಗೀಕರಿಸಲ್ಪಡುವುದಕ್ಕೆ ಅಷ್ಟೊಂದು ತಿಣುಕಾಡಿದ್ದು ನೋಡಿದರೆ ಅದೆಷ್ಟು Ugly ವಿಧೇಯಕ ಇರಬಹುದು, ಅಲ್ಲವೇ?!

- **ಇರಾನ್-ಇಸ್ರೇಲ್ ನಡುವಿನ 'ಕದನವಿರಾಮ' ಬಳಿಕ ಈಗ ಇಸ್ರೇಲ್-ಹಮಾಸ್ ಉಗ್ರರ ನಡುವಿನ ಸಂಘರ್ಷ ಕೊನೆಗೊಳಿಸಲು ಮುಂದಾದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್: ಸುದ್ದಿ**
- ''ಇಲ್ಲಿ ಯಾವುದೇ ಯುದ್ಧಕ್ಕೆ ಸಂಬಂಧಿಸಿದ 'ಕದನ ವಿರಾಮ'ಕ್ಕೆ ವ್ಯವಸ್ಥೆ ಮಾಡಲಾಗುವುದು ಮತ್ತು 'ಸಂಘರ್ಷ'ವನ್ನು ಕೊನೆಗೊಳಿಸಲಾಗುವುದು'' ಎಂಬ ಬೋರ್ಡು ಅಮೆರಿಕದ ಶ್ವೇತಭವನದ ಬಾಗಿಲಿಗೆ ಬೀಳೋದೊಂದು ಬಾಕಿ ಕಣ್ರೀ!!

ಈ ಹನ್ನೊಂದು ವರ್ಷದಲ್ಲಿ ನೀವು ಸಾಧಿಸಿದ್ದೇನು ಸ್ವಾಮೀ?



ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಕೇಂದ್ರದಲ್ಲಿ ಪ್ರಧಾನಿ ಮೋದಿಯವರ ಸರಕಾರ ಅಧಿಕಾರಕ್ಕೆ ಬಂದು 11 ವರ್ಷ ಪೂರೈಸಿರುವುದು ನಿಮಗೆಲ್ಲಾ ಗೊತ್ತಿರುವ ಸಂಗತಿಯೇ. ಆದರೆ, ವಿರೋಧ ಪಕ್ಷವಾದ ಕಾಂಗ್ರೆಸ್, ಮೋದಿಯವರ ಕಡೆಗೆ ಬೆರಳುಮಾಡಿ ತೋರಿಸಿ ಉಲ್ಲೇಖಿಸಿರುವ ಅವರ ಬಹುದೊಡ್ಡ ವೈಫಲ್ಯವೆಂದರೆ- 'ಮೋದಿಯವರು ಕಳೆದ 11 ವರ್ಷದಲ್ಲಿ ಒಂದೇ ಒಂದು ಪತ್ರಿಕಾಗೋಷ್ಠಿಯನ್ನೂ ಮಾಡಿಲ್ಲ' ಎಂಬುದು! ಕೇಂದ್ರ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವಂಥ ಯಾವುದೇ ಗಂಭೀರ ಸಮಸ್ಯೆಗಳನ್ನು ಪಟ್ಟಿಮಾಡಲು ದೇಶದ ಪ್ರಮುಖ ವಿರೋಧ ಪಕ್ಷಕ್ಕೆ ಆಗಿಲ್ಲ ಎಂಬುದನ್ನು ಇದು ಸೂಚಿಸುತ್ತದೆ.

ವರ್ಷ ಕಳೆಯುತ್ತಿದ್ದಂತೆ, ಆಡಳಿತಾರೂಢ ಸರಕಾರದ ಮೌಲ್ಯಮಾಪನವನ್ನು ಮಾಡುವಂತೆಯೇ, ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸುತ್ತಿರುವವರ ಹೊಣೆಗಾರಿಕೆಯ ಬಗ್ಗೆಯೂ ಮೌಲ್ಯಮಾಪನ ಮಾಡುವುದು ಆರೋಗ್ಯಕರ ಪ್ರಜಾಪ್ರಭುತ್ವಕ್ಕೆ ಅತ್ಯವಶ್ಯಕವಾಗಿದೆ. ಮೋದಿ ಸರಕಾರವು 11 ವರ್ಷವನ್ನು ಪೂರೈಸಿದಾಗ, ಅದರ ವೈಫಲ್ಯಗಳ ಬಗ್ಗೆ ವಿರೋಧ ಪಕ್ಷವು ತರಾಟೆಗೆ ತೆಗೆದುಕೊಳ್ಳುತ್ತದೆ ಎಂಬುದನ್ನು ಜನರು ನಿರೀಕ್ಷಿಸಿರುವಾಗ, 'ಪ್ರಧಾನಮಂತ್ರಿಗಳು ಕಳೆದ 11 ವರ್ಷದಲ್ಲಿ ಪತ್ರಿಕಾಗೋಷ್ಠಿಯನ್ನೇ ಮಾಡಿಲ್ಲ' ಎಂಬುದು ಅದು ಪಟ್ಟಿಮಾಡಿದ ಪ್ರಮುಖ 'ವೈಫಲ್ಯ'ವಾದರೆ, ಅದು ಕಾಂಗ್ರೆಸ್ ಪಕ್ಷವು ಜನರ ನಾಡಿಮಿಡಿತದಿಂದ ಬಹುದೂರ ಇರುವುದರ ದ್ಯೋತಕ ಎನ್ನಬಹುದು. ಒಂದಿಷ್ಟು ಫ್ಲ್ಯಾಷ್‌ಬ್ಯಾಕ್ ಕಡೆಗೆ ಗಮನಹರಿಸೋಣ. ಕೇಂದ್ರದಲ್ಲಿ ಹತ್ತು ವರ್ಷಗಳ ಕಾಲ ಆಡಳಿತ ನಡೆಸಿದ ತರುವಾಯ 2014ರಲ್ಲಿ ಅಧಿಕಾರವನ್ನು ಕಳೆದುಕೊಂಡ ಕಾಂಗ್ರೆಸ್ ಪಕ್ಷವು, ಅಧಿಕೃತ ವಿರೋಧ ಪಕ್ಷ ಎನಿಸಿಕೊಳ್ಳುವುದಕ್ಕೆ ಅಗತ್ಯವಿದ್ದ ಸೀಟುಗಳನ್ನೂ ಗೆದ್ದಿರಲಿಲ್ಲ. ಆ ಪಕ್ಷದ ಆತ್ಮಸ್ಥೈರ್ಯ ಉಡುಗಿಹೋಗಿತ್ತು, ಸೋಲಿನ ಆಘಾತದಿಂದಾಗಿ ಅದಕ್ಕೆ ಮಂಕು ಕವಿದಿತ್ತು. ತೃಣಮೂಲ ಕಾಂಗ್ರೆಸ್, ಬಿಜೆಡಿ, ಡಿಎಂಕೆ, ಬಿಆರ್‌ಎಸ್‌ನಂಥ ಪ್ರಾದೇಶಿಕ ಪಕ್ಷಗಳು ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡಿದ್ದವು. 2009ರಲ್ಲಿ ಯುಪಿಎ ಮೈತ್ರಿಕೂಟವು ಎರಡನೆಯ ಬಾರಿ ಅಧಿಕಾರಕ್ಕೆ ಬಂದಾಗ, ಕಾಂಗ್ರೆಸ್‌ನ ನಾಯಕ ರಾಹುಲ್ ಗಾಂಧಿಯವರು ಕೇಂದ್ರದಲ್ಲಿ ಸಚಿವರಾಗಿ ಆಡಳಿತದ ಅನುಭವವನ್ನು ದಕ್ಕಿಸಿಕೊಳ್ಳಬೇಕಿತ್ತು. ಆದರೆ, 'ಒಂದೋ ಪ್ರಧಾನಿಯಾಗುವೆ, ಇಲ್ಲವೆಂದರೆ ಯಾವುದೂ ಬೇಡ' ಎಂಬ ಧೋರಣೆಯಿಂದಾಗಿ ಅವರು ಪ್ರಧಾನಿ ಮನಮೋಹನ್ ಸಿಂಗ್ ಅವರ ಸಂಪುಟವನ್ನು ಸೇರಲಿಲ್ಲ. ಹೀಗಾಗಿ ಆಡಳಿತದ ಒಳಸುಳಿಗಳನ್ನು ಅರಿಯುವಂಥ ಸುವರ್ಣಾವಕಾಶವನ್ನು ಅವರು ಕಳೆದುಕೊಂಡರು. 2014ರಲ್ಲಿ ಯುಪಿಎ ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿತರಾಗಿದ್ದ ರಾಹುಲರು, ಚುನಾವಣೆಯ ನಂತರ ಲೋಕಸಭೆಯ ಕಾಂಗ್ರೆಸ್ ಸಂಸದೀಯ ಗುಂಪಿನ ನಾಯಕತ್ವವನ್ನು ವಹಿಸಿಕೊಳ್ಳಬೇಕಿತ್ತು. ಆದರೆ ಮತ್ತೆ ಆ ಅವಕಾಶವನ್ನು ತಿರಸ್ಕರಿಸಿ, ಅದನ್ನು ಮಲ್ಲಿಕಾರ್ಜುನ ಖರ್ಗೆಯವರಿಗೆ ನೀಡಿದರು.

ಪ್ರಸ್ತುತ ಬಿಜೆಪಿಯು 'ಸಮ್ಮಿಶ್ರ ಸರಕಾರ'ದ ಹಂಗಿನಿಂದ ಹೊರಬಂದು ಏಕಾಂಗಿಯಾಗಿ ಬಹುಮತ ಪಡೆದಿರುವಾಗ, ಮೋದಿಯವರ ಆಡಳಿತವನ್ನು ಒರೆಗೆ ಹಚ್ಚಲು ವಿಶೇಷ ಪರಿಶ್ರಮವಿರುವ ವಿಪಕ್ಷ ನಾಯಕನ ಅಗತ್ಯವಿತ್ತು. ಇಂಥ ಸೂಕ್ಷ್ಮ ಘಟ್ಟದಲ್ಲಿ ಕಾಂಗ್ರೆಸ್ ತನ್ನ ಲಯವನ್ನು ಕಂಡುಕೊಳ್ಳಬೇಕಿತ್ತು. ಆದರೆ ಕಾಂಗ್ರೆಸ್ ಪಕ್ಷದಲ್ಲಾಗಲೀ, ಅದರ ನಾಯಕರಲ್ಲಾಗಲೀ ಇಂಥ ಕಾರ್ಯಕ್ಷಮತೆಯೇ ಕಂಡುಬರುತ್ತಿಲ್ಲ. ಅಂಥದೊಂದು ವಿಶ್ವಾಸಾರ್ಹ ನಡೆಯನ್ನು ಪಕ್ಷವು ಇಡುತ್ತಿರುವ ಬಗ್ಗೆ ಜನರಿಗೆ ಭರವಸೆಯೇ ಮೂಡುತ್ತಿಲ್ಲ. ಹೀಗಾಗಿ, ಕಾಂಗ್ರೆಸ್ ಪಕ್ಷವು ಹೊರಿಸುತ್ತಿರುವ ಜೊಳ್ಳು ಆರೋಪಗಳು ಮೋದಿಯವರ ಸರಕಾರವನ್ನು ಅಲುಗಾಡಿಸುವಲ್ಲಿ ಸೋತಿವೆ.

'ಹೊರದೇಶದಲ್ಲಿರುವ ಕಪ್ಪುಹಣವನ್ನು ವಾಪಸ್ ತಂದು ಎಲ್ಲರ ಖಾತೆಗೆ 15 ಲಕ್ಷ ರುಪಾಯಿಯನ್ನು ಹಾಕಲಾಗುವುದು ಎಂದು ನೀಡಿದ್ದ ವಾಗ್ದಾನವನ್ನು ಮೋದಿಯವರು ಈಡೇರಿಸಿಲ್ಲ' ಎಂಬುದು ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಸತತ 11 ವರ್ಷದಿಂದ ಮಾಡುತ್ತಲೇ ಇರುವ ಆರೋಪ. 'ಇದೊಂದು ಬುಡವಿಲ್ಲದ ಆರೋಪ' ಎಂದು ಸರಕಾರವು ತಳ್ಳಿಹಾಕಿದಾಗ, ಕಾಂಗ್ರೆಸ್ ಪಕ್ಷವು ತಾನು ಮಾಡಿದ್ದ ಆರೋಪವನ್ನು ಸಮರ್ಥಿಸಿಕೊಳ್ಳಲು ಅಗತ್ಯ ದಾಖಲೆಯನ್ನು ಬಿಡುಗಡೆ ಮಾಡಬೇಕಿತ್ತು, ತನ್ಮೂಲಕ ಸರಕಾರವನ್ನು ಮುಜುಗರಕ್ಕೆ ಸಿಲುಕಿಸಬೇಕಿತ್ತು. ಆದರೆ ಈ ದಿನದವರೆಗೂ ಅದನ್ನು ಸಾಬೀತುಪಡಿಸುವ ದಾಖಲೆಯನ್ನು ನೀಡುವಲ್ಲಿ ಅದು ವಿಫಲವಾಗಿದೆ. ಬಿಜೆಪಿಯ ಚುನಾವಣಾ ಪ್ರಣಾಳಿಕೆಯಲ್ಲಿನ 'ವರ್ಷಕ್ಕೆ ಎರಡು ಕೋಟಿ ಉದ್ಯೋಗಸೃಷ್ಟಿ ಮಾಡಲಾಗುವುದು' ಎಂಬ ಆಶ್ವಾಸನೆಯು ಆಶ್ವಾಸನೆಯಾಗಿಯೇ ಉಳಿದಿದೆ ಎಂದು ಕಳೆದ 11 ವರ್ಷದಿಂದ ಆರೋಪ ಮಾಡುವುದಕ್ಕೆ ಮಾತ್ರವೇ ಕಾಂಗ್ರೆಸ್‌ನ ಚಟುವಟಿಕೆ ಸೀಮಿತವಾಗಿದೆ. ಕಳೆದ 11 ವರ್ಷದಲ್ಲಿ ಈ ಪಕ್ಷವು, 'ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಿ' ಎಂದು ಆಗ್ರಹಿಸಿ ದೇಶವ್ಯಾಪಿ ಹೋರಾಟ ಕೈಗೊಳ್ಳಲಿಲ್ಲ, ರಾಹುಲರಾಗಲೀ, ಮಲ್ಲಿಕಾರ್ಜುನ ಖರ್ಗೆಯವರಾಗಲೀ ನಿರುದ್ಯೋಗಿಗಳ ಪರವಾಗಿ ಬೀದಿಗಿಳಿಯಲಿಲ್ಲ, ಧರಣಿಗೆ ಕೂರಲಿಲ್ಲ. ಇವರೆಲ್ಲರ ಹೋರಾಟವು ಪತ್ರಿಕಾ ಹೇಳಿಕೆಗೆ, ಅಬ್ಬರದ ಭಾಷಣಕ್ಕೆ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಶ್ನಿಸುವುದಕ್ಕೆ ಸೀಮಿತವಾಗಿದೆ. ಬೆಲೆಯೇರಿಕೆಯ ಬಗ್ಗೆ ಪ್ರಸ್ತಾಪಿಸುತ್ತಿರುವ ಕಾಂಗ್ರೆಸ್‌ನ ಆರ್ಭಟವೂ ಮಾತಿಗಷ್ಟೇ ಸೀಮಿತವಾಗಿದ್ದು, ಬೆಲೆಯೇರಿಕೆಯ ವಿರುದ್ಧ ಜನಾಂದೋಲನವನ್ನು ರೂಪಿಸಲು ಅದು ವಿಫಲವಾಗಿದೆ. ತನ್ನ ಹೋರಾಟದ ಮೂಲಕ ಸರಕಾರಕ್ಕೆ ಬಿಸಿಮುಟ್ಟಿಸಿ, ಜನರ ಬವಣೆಗೆ ಸ್ಪಂದಿಸುವಂತೆ ಮಾಡುವ ಅವಕಾಶವನ್ನೇಕೆ ಕಾಂಗ್ರೆಸ್ ಬಳಸಿಕೊಳ್ಳುತ್ತಿಲ್ಲ? ಎಂಬುದಿಲ್ಲಿ ಪ್ರಶ್ನೆಯಾಗಿದೆ. ಮೋದಿ ಸರಕಾರವು 2015ರಲ್ಲಿ ರಫೇಲ್ ಯುದ್ಧವಿಮಾನದ ಖರೀದಿಗೆಂದು ಫ್ರೆಂಚ್ ಸರಕಾರದೊಂದಿಗೆ ಒಪ್ಪಂದ ಮಾಡಿಕೊಂಡಾಗ ರಾಹುಲರು, ''ರಫೇಲ್ ಖರೀದಿಯಲ್ಲಿ ಬಹುದೊಡ್ಡ ಭ್ರಷ್ಟಾಚಾರವಾಗಿದೆ'' ಎಂಬ ಗಂಭೀರ ಆರೋಪವನ್ನು ಪ್ರಧಾನಿಯ ವಿರುದ್ಧವೇ ಮಾಡಿದರು. ''ಚೌಕಿದಾರ್ ಚೋರ್ ಹೈ'' ಎಂದು ಪ್ರಧಾನಿಗೆ ಹಣೆಪಟ್ಟಿ ಕಟ್ಟಿದರು. ಅಚ್ಚರಿಯ ಸಂಗತಿಯೆಂದರೆ, ಇದನ್ನು ಸಮರ್ಥಿಸುವ ಯಾವುದೇ ದಾಖಲೆ ನೀಡಲು, ಹಣದ ಮೂಲದ ಕುರಿತಾಗಿ ತಿಳಿಸಲು ಅವರು ಅಸಮರ್ಥರಾದರು. ರಫೇಲ್ ಪ್ರಕರಣ ಸುಪ್ರೀಂ ಕೋರ್ಟ್ ಅಂಗಳ ತಲುಪಿ, ಸರಕಾರದ ಮೇಲಿನ ಭ್ರಷ್ಟಾಚಾರದ ಆರೋಪ ಸುಳ್ಳೆಂದು ಸಾಬೀತಾಯಿತು. 'ಚೌಕಿದಾರ್ ಚೋರ್ ಹೈ' ಘೋಷಣೆಯಿಂದಾಗಿ ರಾಹುಲ್ ಕೂಡ ಕ್ಷಮೆ ಕೋರಬೇಕಾಗಿ ಬಂತು. ಬೋಫೋರ್ಸ್ ಫಿರಂಗಿ ಖರೀದಿಗೆ ಸಂಬಂಧಿಸಿ ತಮ್ಮ ತಂದೆ ರಾಜೀವ್ ಗಾಂಧಿಯವರ ಮೇಲೆ ಮಾಡಲಾಗಿದ್ದ ಆರೋಪಕ್ಕೆ ಪ್ರತಿಯಾಗಿ, 'ರಫೇಲ್ ಖರೀದಿಯಲ್ಲಿ ಭ್ರಷ್ಟಾಚಾರ ನಡೆದಿದೆ' ಎಂದು ಆರೋಪಿಸಿದ ರಾಹುಲರು, ಅದನ್ನು ಸಾಬೀತುಪಡಿಸಲು ಸಾಧ್ಯವಾಗದೆ ಹೀಗೆ ಮುಜುಗರಕ್ಕೆ ಒಳಗಾದರು.

ಇನ್ನು, ಅಧಿಕ ಮುಖಬೆಲೆಯ ನೋಟುಗಳ ರದ್ದತಿಯಾದಾಗ 'ಇದರಿಂದಾಗಿ ಸಣ್ಣ ಉದ್ದಿಮೆಗಳು ಬಾಗಿಲು ಹಾಕಿದವು' ಎಂದು ಆರೋಪಿಸಿದ ರಾಹುಲರು, ಅಂಥ ಉದ್ದಿಮೆಗಳ ಮಾಲೀಕರು ಮತ್ತು ನೌಕರರ ಜತೆ ರಸ್ತೆಗಿಳಿದು ನ್ಯಾಯಕ್ಕಾಗಿ ಸರಕಾರವನ್ನು ಆಗ್ರಹಿಸಬೇಕಿತ್ತು; ಆದರೆ ಅವರು ಕೇವಲ ಆರೋಪಿಸಿದರೇ ಹೊರತು, ಅದನ್ನು ರುಜುವಾತುಪಡಿಸುವ ಕಷ್ಟವನ್ನು ತೆಗೆದುಕೊಳ್ಳಲೇ ಇಲ್ಲ. ''ಕೇಂದ್ರ ಸರಕಾರವು ಪೆಗಾಸಸ್ ತಂತ್ರಾಂಶದ ಮೂಲಕ ತನ್ನ ವಿರೋಧಿಗಳ ಮೊಬೈಲ್ ಫೋನ್ ಹ್ಯಾಕ್ ಮಾಡಿ ಅವರ ಮೇಲೆ ಕಣ್ಗಾವಲಿಟ್ಟಿದೆ'' ಎಂದು ಗಂಭೀರವಾಗಿ ಆರೋಪಿಸಿದ ರಾಹುಲರು, ಅದರ ಸಮರ್ಥನೆಗೆಂದು ಮತ್ತು ಸತ್ಯಾಸತ್ಯತೆಯ ಪರಿಶೀಲನೆಗೆಂದು ತನಿಖಾ ತಂಡಕ್ಕೆ ತಮ್ಮ ಮೊಬೈಲ್ ಫೋನನ್ನು ನೀಡಲಿಲ್ಲ! 'ಜಿಎಸ್‌ಟಿ' ಪದ್ಧತಿಯನ್ನು 'ಗಬ್ಬರ್ ಸಿಂಗ್ ಟ್ಯಾಕ್ಸ್' ಎಂದು ಲೇವಡಿ ಮಾಡಿದ ರಾಹುಲರು, ತಮ್ಮ ಪಕ್ಷದ ಸರಕಾರವಿದ್ದಾಗ ಜಾರಿಯಲ್ಲಿದ್ದ ತೆರಿಗೆ ಪ್ರಮಾಣ ಮತ್ತು ಜಿಎಸ್‌ಟಿ ಪ್ರಮಾಣವನ್ನು ಹೋಲಿಸಿ ತಮ್ಮ ಆರೋಪವನ್ನು ಸಾಬೀತುಪಡಿಸಲು ಮುಂದಾಗಲಿಲ್ಲ. ಆರಂಭದಲ್ಲಿ, ಚುನಾವಣೆಯಲ್ಲಿ ತಾನು ಸೋತಾಗಲೆಲ್ಲಾ 'ಇದಕ್ಕೆ ಇವಿಎಂ ಕಾರಣ' ಎಂದು ತಗಾದೆ ತೆಗೆಯುತ್ತಿದ್ದ ಕಾಂಗ್ರೆಸ್, ಹರಿಯಾಣ ಮತ್ತು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಸೋತ ತರುವಾಯ, 'ಮತದಾರರ ಪಟ್ಟಿ ದೋಷಯುಕ್ತವಾಗಿದೆ, ಹೀಗಾಗಿ ಬಿಜೆಪಿಯು ಅಕ್ರಮವಾಗಿ ಗೆಲ್ಲುತ್ತಿದೆ' ಎಂದು ಹೊಸ ವರಸೆ ತೆಗೆದು ಚುನಾವಣಾ ಆಯೋಗದ ಮೇಲೆ ಗೂಬೆ ಕೂರಿಸಿತು. ಆದರೆ ಈ ಆರೋಪಗಳನ್ನು ಸಾಬೀತುಮಾಡುವಂಥ ಸಾಕ್ಷ್ಯಾಧಾರಗಳನ್ನು ಅದು ನೀಡಲಿಲ್ಲ. 'ಲೋಕಸಭೆಯಲ್ಲಿ ಮಾತಾಡಲು ಅಡ್ಡಿಪಡಿಸುತ್ತಿದ್ದಾರೆ' ಎಂದು ಆರೋಪಿಸಿದ ರಾಹುಲರು, 2025-26ರ ಮುಂಗಡ ಪತ್ರದ ಕುರಿತಾಗಿ ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಅವರು ಅದರಲ್ಲಿ ಭಾಗವಹಿಸುವ ಮೂಲಕ ಆರ್ಥಿಕ ಸಂಕಷ್ಟ, ಬೆಲೆಯೇರಿಕೆಯಂಥ ವಿಷಯಗಳ ಬಗ್ಗೆ ಬೆಳಕು ಚೆಲ್ಲಬಹುದಾಗಿತ್ತು. ಅವಕಾಶ ದೊರೆತಾಗ ಮೌನಕ್ಕೆ ಶರಣಾಗಿ ತದನಂತರ ಆರೋಪಿಸುವ ರಾಹುಲರ ಪರಿಪಾಠಗಳ ಪಟ್ಟಿಗೆ ಇದೊಂದು ಸೇರ್ಪಡೆಯಾಗಿದೆ.

ಕಳೆದೆರಡು ವರ್ಷಗಳಿಂದ ಮಣಿಪುರದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಇರುವುದು ಗೊತ್ತಿರುವ ಸಂಗತಿಯೇ. 'ಪ್ರಧಾನಿಯವರು ಮಣಿಪುರಕ್ಕೆ ಭೇಟಿ ನೀಡಿಲ್ಲ' ಎಂದು ದಿನನಿತ್ಯ ಆರೋಪಿಸಿದ ಕಾಂಗ್ರೆಸ್, ಒಂದು ವಿಪಕ್ಷವಾಗಿದ್ದುಕೊಂಡು 'ಮಣಿಪುರದ ಸಮಸ್ಯೆಯನ್ನು ತ್ವರಿತವಾಗಿ ಬಗೆಹರಿಸಿ' ಎಂದು ಬೀದಿಗಿಳಿದು ಹೋರಾಟ ಮಾಡಿದ್ದಿಲ್ಲ. ಇನ್ನು, ವಕ್ಫ್ ಕಾಯಿದೆಯ ತಿದ್ದುಪಡಿ ವಿರೋಧಿಸಿದ ಕಾಂಗ್ರೆಸ್, ಅದರ ವಿರುದ್ಧ ಚಳವಳಿ ಮಾಡಲು ಭಯಬಿದ್ದಿದ್ದೇಕೋ ಗೊತ್ತಾಗುತ್ತಿಲ್ಲ. ವಿಪರ್ಯಾಸವೆಂದರೆ, ತಿದ್ದುಪಡಿಯ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆದಾಗ ರಾಹುಲ್ ಗಾಂಧಿಯವರು ಅದರಲ್ಲಿ ಭಾಗವಹಿಸಲೇ ಇಲ್ಲ ಮತ್ತು ಮತದಾನ ನಡೆದಾಗ ಅವರ ಸೋದರಿ ಪ್ರಿಯಾಂಕಾ ವಾದ್ರಾ ಅವರು ಸದನದಲ್ಲೇ ಇರಲಿಲ್ಲ! ಮೋದಿಯವರನ್ನು ಮಣಿಸುವ ಎಲ್ಲ ತಂತ್ರಗಾರಿಕೆಗಳೂ ವಿಫಲವಾದಾಗ ಇವರೆಲ್ಲಾ ಜಾತಿಯನ್ನು ತಮ್ಮ ಹೊಸ ಅಸ್ತ್ರವನ್ನಾಗಿ ಮಾಡಿಕೊಂಡರು. ಜಾತಿಗಣತಿಯು ಇವರ ಬೇಡಿಕೆಗಳಲ್ಲಿ ಒಂದಾಗಿತ್ತು. ಇದೀಗ ಮೋದಿ ಸರಕಾರವು 2026-27ರ ರಾಷ್ಟ್ರವ್ಯಾಪಿ ಜನಗಣತಿಯಲ್ಲಿ ಜಾತಿಯ ವಿವರವನ್ನು ಪಡೆಯಲು ನಿರ್ಧರಿಸಿ, ಇವರ ಬಹುದೊಡ್ಡ ಅಸ್ತ್ರವನ್ನು ನಿಸ್ಸಾರಗೊಳಿಸಿದೆ!

ಪ್ರಧಾನಿ ಮೋದಿಯವರನ್ನು ಪ್ರತಿ ಹೆಜ್ಜೆಯಲ್ಲಿಯೂ ವಿರೋಧಿಸುವ ಒಂದಂಶದ ಕಾರ್ಯಕ್ರಮವನ್ನು ಬಿಟ್ಟರೆ ವಿರೋಧ ಪಕ್ಷಗಳಿಗೆ ಬೇರೇನೂ ಮಾಡಲಾಗಿಲ್ಲ. ಮೋದಿಗೆ ತಾವು ಪರ್ಯಾಯ ಎಂದು ಬಿಂಬಿಸಿಕೊಳ್ಳಲು ಕಳೆದ 11 ವರ್ಷಗಳಿಂದ ಹರಸಾಹಸ ಪಡುತ್ತಿರುವ ರಾಹುಲ್ ಗಾಂಧಿಯವರು, ತಮ್ಮ ವಿಚಾರ, ಕಾರ್ಯಕ್ರಮ ಮತ್ತು ಹೋರಾಟದ ಮೂಲಕ ತಮ್ಮ ವರ್ಚಸ್ಸು ಬೆಳೆಸಿಕೊಳ್ಳುವಲ್ಲಿ ಸೋತಿರುವುದು ಸ್ಪಷ್ಟವಾಗಿದೆ.

(ಲೇಖಕರು ಬಿಜೆಪಿಯ ವಕ್ತಾರರು)

ನಾರದ ಸಂಚಾರ



ಕಲಹಪ್ರಿಯ
naadigru@gmail.com

ಸಾಫ್ಟ್ ಕಂಪನಿ ಹಾರ್ಡ್ ಆದಾಗ...!!

ಸಾಫ್ಟ್‌ವೇರ್ ವಲಯದ ಘಟಾನುಘಟಿ ಎನಿಸಿಕೊಂಡಿರುವ ಮೈಕ್ರೋಸಾಫ್ಟ್ ಕಂಪನಿಯು ಬರೋಬ್ಬರಿ 9,000 ಉದ್ಯೋಗಿಗಳನ್ನು ಕೆಲಸದಿಂದ ತೆಗೆದುಹಾಕಲು ನಿರ್ಧರಿಸಿದೆ ಎಂಬ ಸುದ್ದಿ ಅಮೆರಿಕದಿಂದ ಅಪ್ಪಳಿಸಿದೆ. ಇದು 2023ರ ನಂತರದಲ್ಲಿ ಮೈಕ್ರೋಸಾಫ್ಟ್ ವತಿಯಿಂದ ಆಗುತ್ತಿರುವ ಅತಿದೊಡ್ಡ 'ಉದ್ಯೋಗ ಕಡಿತ' ಉಪಕ್ರಮವಾಗಿದ್ದು, ಇದರಿಂದಾಗಿ ಒಟ್ಟು ಉದ್ಯೋಗಿಗಳ ಸಂಖ್ಯೆಯಲ್ಲಿ ಶೇ.43ರಷ್ಟು ಭಾಗಕ್ಕೆ ಕತ್ತರಿ ಬೀಳಲಿದೆ ಎನ್ನಲಾಗಿದೆ. 'ಆರ್ಥಿಕ ಅಸ್ಥಿರತೆ' ಎಂಬ ಪೆಡಂಭೂತವು ಕಂಪನಿಯೊಂದನ್ನು ಅಮರಿಕೊಂಡಾಗ, ಅದು ಕೈಗೊಳ್ಳುವ ಒಂದಿಷ್ಟು 'ರಕ್ಷಣಾತ್ಮಕ ಆಟ'ಗಳ ಪೈಕಿ ಉದ್ಯೋಗ ಕಡಿತವೂ ಒಂದು. ಒಂದು ಕಡೆ 'ಕೃತಕ ಬುದ್ಧಿಮತ್ತೆ' (ಎಐ) ಎಂಬ ಮಾಯಾಂಗನೆ ಒಂದೊಂದೇ ಉದ್ಯೋಗ ವಲಯವನ್ನು ತನ್ನ ಮೋಹಜಾಲಕ್ಕೆ ಸೆಳೆಯುತ್ತಿದ್ದರೆ, ಮತ್ತೊಂದೆಡೆ ಹೀಗೆ ಉದ್ಯೋಗಿಗಳ ಸಂಖ್ಯೆಯಲ್ಲಿ ಕಡಿತವಾಗುತ್ತಿದೆ. ಎಂಥ ಘಟಾನುಘಟಿ ಕಂಪನಿಯೂ ಇಂಥ ಬೆಳವಣಿಗೆಗೆ ಹೊರತಲ್ಲ ಎಂಬುದಕ್ಕೆ ಮೈಕ್ರೋಸಾಫ್ಟ್ ಕಂಪನಿಯೇ ಸಾಕ್ಷಿ. ಇದರಿಂದ ಕೆಲವರಿಗೆ, 'ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ' ಎಂಬ ಜಾಣನುಡಿಯು ನೆನಪಿಗೆ ಬಂದಿರಲಿಕ್ಕೂ ಸಾಕು. ಅದೇನೇ ಇರಲಿ, ಮೈಕ್ರೋ'ಸಾಫ್ಟ್' ಕಂಪನಿಯು ಇಷ್ಟೊಂದು 'ಹಾರ್ಡ್' ಆಗಿ ವರ್ತಿಸೋದು ತರವೇ? ಆರ್ಥಿಕ ಅಸ್ಥಿರತೆಯ ನಿವಾರಣೆಗೆ ಬೇರೇನೂ ಮಾರ್ಗಗಳಿಲ್ಲವೇ? ಎಂಬುದು ತ್ರಿಲೋಕ ಸಂಚಾರಿ ನಾರದರ ಪ್ರಶ್ನೆ.

ಬುಡಕ್ಕೇ ಬಂತು ಸಂಚಕಾರ!

ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿರದ, ಲೋಕಸಭೆ, ವಿಧಾನಸಭೆ ಹೀಗೆ ಯಾವುದೇ ಪ್ರಜಾಪ್ರತಿನಿಧಿ ಸಭೆಯ ಚುನಾವಣೆಗಳಲ್ಲೂ ಕಳೆದ 6 ವರ್ಷಗಳಿಂದ ಸ್ಪರ್ಧಿಸದ ಒಂದಿಷ್ಟು ರಾಜಕೀಯ ಪಕ್ಷಗಳಿಗೆ 'ಡಿಲೀಟ್' ಬಟನ್ ಒತ್ತಲು ಚುನಾವಣಾ ಆಯೋಗ ನಿರ್ಧರಿಸಿದೆಯಂತೆ. ಇವು ಬೆಂಗಳೂರು ನಗರ ಜಿಲ್ಲೆಯಲ್ಲಿ ನೋಂದಣಿಗೊಂಡು 'ರಾಜಕೀಯ ಚಟುವಟಿಕೆಗಳಿಂದ ವಿಮುಖವಾಗಿರುವ' ಪಕ್ಷಗಳು ಎಂಬುದು ನಿಮ್ಮ ಗಮನಕ್ಕೆ. ಪ್ರಜಾಪ್ರಾತಿನಿಧ್ಯ ಕಾಯ್ದೆ 1951ರ ಸೆಕ್ಷನ್ 29 (ಎ) ಅಡಿಯಲ್ಲಿ ನೋಂದಾಯಿಸಲ್ಪಟ್ಟಿದ್ದರೂ, ರಾಜಕೀಯವಾಗಿ ಸಕ್ರಿಯವಾಗಿರದ ಹಾಗೂ ವಿಳಾಸವನ್ನು ಪತ್ತೆ ಹಚ್ಚಲು ಸಾಧ್ಯವಿಲ್ಲದ (ಇದನ್ನು ನೀವು 'ಅಡ್ರೆಸ್ಸಿಗಿಲ್ಲದ' ಅಂತ ಹೇಳ್ಕೋಬಹುದು!) ಇಂಥ ಪಕ್ಷಗಳಿಗೆ ಈಗ 'ಕಾರಣ ಕೇಳುವ' ನೋಟಿಸ್ ಜಾರಿಮಾಡಲಾಗಿದೆಯಂತೆ. ಈ ಕ್ರಮ ಅಧಿಕೃತವಾಗಿ ಜಾರಿಗೆ ಬರುವುದಕ್ಕೂ ಮುಂಚೆ ತಮ್ಮ ಹೇಳಿಕೆ ದಾಖಲಿಸುವುದಕ್ಕೆ ಇಂಥ ಪಕ್ಷಗಳಿಗೆ ಅವಕಾಶವನ್ನು ನೀಡಲಾಗಿದೆಯಂತೆ. ಒಟ್ಟಿನಲ್ಲಿ, ರಾಜಕೀಯ ಪಕ್ಷವೊಂದು ಜನರ ಮನದಲ್ಲಿ 'ನಿಲ್ಲದಿದ್ದರೆ', ಅಷ್ಟೇಕೆ ಚುನಾವಣೆಯಲ್ಲೂ 'ನಿಲ್ಲದಿದ್ದರೆ' ಏನೆಲ್ಲಾ ತಾಪತ್ರಯಗಳಿವೆ ಅಲ್ವಾ?!

ನಾರಾಯಣ ನಾರಾಯಣ!

ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರಿಗೆ, ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಅಂತಾರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯು ಮೊನ್ನೆ ಬುಧವಾರ 6 ತಿಂಗಳ ಜೈಲುಶಿಕ್ಷೆ ವಿಧಿಸಿದೆಯಂತೆ. ''ಇದನ್ನು ಅವರು ಒಪ್ಪಿಕೊಳ್ಳುವರಾ?'' ಅಂತ ಅದ್ಯಾರೋ ಪ್ರಶ್ನಿಸಿದ್ದಕ್ಕೆ, ''ಹಸೀನಾ ಮಾನ್ ಜಾಯೇಗಿ'' (ಹಸೀನಾ ಒಪ್ಪುತ್ತಾರೆ) ಎಂದು ಅದ್ಯಾರೋ ಬಾಲಿವುಡ್ ಮಂದಿ ಉತ್ತರಿಸಿದರಂತೆ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:171

ಸಮಾಚಾರ ಸಣ್ಣದಲ್ಲ

ದಿಶಾದು ಆತ್ಮಹತ್ಯೆ: ಹೈಕೋರ್ಟ್‌ಗೆ ಹೇಳಿಕೆ

ಮುಂಬೈ: ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್‌ಗೆ ಸೆಲೆಬ್ರಿಟಿ ಮ್ಯಾನೇಜರ್ ಆಗಿದ್ದ ದಿಶಾ ಸಾಲಿಯನ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರದ್ದು ಕೊಲೆ ಅಲ್ಲ, ಆಕೆಯ ಸಾವಿನ ತನಿಖೆಯಲ್ಲಿ ಯಾವುದೇ ಅಕ್ರಮ ಕಂಡುಬಂದಿಲ್ಲ ಎಂದು ಮುಂಬೈ ಪೊಲೀಸರು ಬಾಂಬೆ ಹೈಕೋರ್ಟ್‌ಗೆ ಗುರುವಾರ ಹೇಳಿಕೆ ಸಲ್ಲಿಸಿದ್ದಾರೆ. ಆದರೆ ಆಕೆಯ ತಂದೆ ಸತೀಶ್ ಸಾಲಿಯನ್ ಮಾತ್ರ, ಪೊಲೀಸರ ಹೇಳಿಕೆ ಒಪ್ಪಲು ಸಿದ್ಧರಿಲ್ಲ. ದಿಶಾ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಕೊಲೆ ಮಾಡಲಾಗಿದೆ ಎಂದು ಆರೋಪಿಸಿದ್ದಾರೆ.

ತಾಂತ್ರಿಕ ದೋಷ: ಏರ್ ಇಂಡಿಯಾ ಯಾನ ರದ್ದು

ದೆಹಲಿ: ದೆಹಲಿಯಿಂದ ವಾಷಿಂಗ್ಟನ್‌ಗೆ ಹೊರಟಿದ್ದ ಏರ್ ಇಂಡಿಯಾ ವಿಮಾನ ಬುಧವಾರ ವಿಯೆನ್ನಾದಲ್ಲಿ ಇಂಧನ ತುಂಬುವ ಸಮಯದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ನಂತರ ಪ್ರಯಾಣವನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಪರಿಣಾಮವಾಗಿ, ಜುಲೈ 2 ರಂದು ನಿಗದಿಯಾಗಿದ್ದ ವಾಷಿಂಗ್ಟನ್‌ನಿಂದ ದೆಹಲಿಗೆ ಹಿಂದಿರುಗುವ ವಿಮಾನವನ್ನು ಸಹ ರದ್ದುಗೊಳಿಸಲಾಯಿತು. ಏರ್ ಇಂಡಿಯಾ ಹೇಳಿಕೆಯ ಪ್ರಕಾರ, ಜುಲೈ 2 ರಂದು ದೆಹಲಿಯಿಂದ ವಾಷಿಂಗ್ಟನ್ ಡಿ.ಸಿ.ಗೆ ಹೋಗುವ ಎಐ103 ವಿಮಾನವು ವಿಯೆನ್ನಾದಲ್ಲಿ ಪೂರ್ವನಿಗದಿಯಂತೆ ಇಂಧನ ತುಂಬಲು ನಿಲುಗಡೆಯಾಗಿತ್ತು. ನಿಯಮಿತ ವಿಮಾನ ತಪಾಸಣೆಯ ಸಮಯದಲ್ಲಿ ತಾಂತ್ರಿಕ ತೊಂದರೆ ಕಂಡು ಬಂದ ಕಾರಣ ಮುಂದಿನ ಹಾರಾಟವನ್ನು ರದ್ದುಗೊಳಿಸಲಾಗಿದೆ ಎಂದು ಸಂಸ್ಥೆ ತಿಳಿಸಿದೆ. ದಾರಿ ಮಧ್ಯೆ ಸಿಲುಕಿದ ಪ್ರಯಾಣಿಕರಿಗೆ ಪರ್ಯಾಯ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

3 ಭಾರತೀಯರನ್ನು ಅಪಹರಿಸಿದ ಉಗ್ರರು

ದೆಹಲಿ: ಮಾಲಿ ದೇಶದಲ್ಲಿನ ಸಿಮೆಂಟ್ ಕಾರ್ಖಾನೆಯಲ್ಲಿ ಕೆಲಸ ಮಾಡುವ ಮೂರು ಭಾರತೀಯರನ್ನು ಅಲ್-ಖೈದಾ ಉಗ್ರ ಸಂಘಟನೆ ಜತೆ ನಂಟು ಹೊಂದಿರುವ ಉಗ್ರರು ಅಪಹರಿಸಿದ್ದಾರೆ. ಪಶ್ಚಿಮ ಮಾಲಿಯ ಕೇಯೆಸ್‌ನಲ್ಲಿರುವ ಡೈಮಂಡ್ ಸಿಮೆಂಟ್ ಫ್ಯಾಕ್ಟರಿ ಮೇಲೆ ಶಸ್ತ್ರಸಜ್ಜಿತ ಉಗ್ರರ ಗುಂಪು ದಾಳಿ ನಡೆಸಿ, ಕಾರ್ಮಿಕರನ್ನು ಒತ್ತೆಯಾಳಾಗಿರಿಸಿಕೊಂಡಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ. ಅಲ್-ಖೈದಾ ನಂಟಿನ ಜಮಾತ್ ನುಸ್ರತ್ ಅಲ್-ಇಸ್ಲಾಂ ವಾಲ್-ಮುಸ್ಲಿಮಿನ್ ಅಪಹರಣ ನಡೆಸಿರುವ ಸಾಧ್ಯತೆಯಿದೆ ಎನ್ನಲಾಗಿದೆ. ಇದು ಹಿಂಸಾತ್ಮಕ ಕೃತ್ಯ ಎಂದು ಖಂಡಿಸಿರುವ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಕಾರ್ಮಿಕರ ಸುರಕ್ಷೆ ಮತ್ತು ತ್ವರಿತ ಬಿಡುಗಡೆ ಖಾತ್ರಿಪಡಿಸುವಂತೆ ಮಾಲಿ ಸರಕಾರವನ್ನು ಒತ್ತಾಯಿಸಿದೆ.

ಬಾಲಿಯಲ್ಲಿ ಮುಳುಗಿದ ಹಡಗು: 42 ಜನ ನಾಪತ್ತೆ

ಬಾಲಿ: ಇಂಡೋನೇಷ್ಯಾದ ಬಾಲಿಯಲ್ಲಿ 65 ಜನರಿದ್ದ ಹಡಗೊಂದು ಬುಧವಾರ ತಡರಾತ್ರಿ ಸಮುದ್ರದಲ್ಲಿ ಮುಳುಗಿದ್ದರಿಂದ ಇಬ್ಬರು ಸಾವಿಗೀಡಾಗಿದ್ದು, 43 ಮಂದಿ ನಾಪತ್ತೆಯಾಗಿದ್ದಾರೆ. ಪೂರ್ವ ಜಾವಾದ ಕೇತಪಾಂಗ್ ಬಂದರಿನಿಂದ ಹೊರಟ 'ಕೆಎಂಪಿ ಟುನು ಪ್ರಥಮ ಜಯ' ಹಡಗು ಅರ್ಧ ಗಂಟೆ ಪ್ರಯಾಣದ ನಂತರ ಬಾಲಿಯ ಗಿಲಿಮನುಕ್ ಬಂದರಿನಿಂದ 50 ಕಿ.ಮೀ ದೂರದಲ್ಲಿ ಸಾಗುತ್ತಿದ್ದಾಗ ನೀರುಪಾಲಾಗಿದೆ. ಸುದ್ದಿ ತಿಳಿದ ತಕ್ಷಣವೇ ರಕ್ಷಣಾ ಕಾರ್ಯಾಚರಣೆ ತಂಡ ಸ್ಥಳಕ್ಕೆ ತೆರಳಿದ್ದು, ಪ್ರಯಾಣಿಕರು, ಸಿಬ್ಬಂದಿಗಳನ್ನು ರಕ್ಷಿಸಲು ಶ್ರಮಿಸುತ್ತಿದೆ. ಈವರೆಗೆ 20 ಜನರನ್ನು ರಕ್ಷಿಸಲಾಗಿದೆ ಎಂದು ರಾಷ್ಟ್ರೀಯ ಶೋಧ ಮತ್ತು ರಕ್ಷಣಾ ಸಂಸ್ಥೆ ತಿಳಿಸಿದೆ. ಹಡಗಿನಲ್ಲಿ 53 ಪ್ರಯಾಣಿಕರು, 12 ಸಿಬ್ಬಂದಿಗಳಿದ್ದರು. 22 ವಾಹನಗಳನ್ನು ಸಾಗಿಸಲಾಗುತ್ತಿತ್ತು. ನೀರಿನಿಂದ 2 ಮೃತದೇಹ ಹೊರತೆಗೆಯಲಾಗಿದೆ.

ರಾಮಮಂದಿರಕ್ಕಾಗಿ ಚಿನ್ನದ ಉಯ್ಯಾಲೆ!

ಅಯೋಧ್ಯೆ: ಅಯೋಧ್ಯೆ ಜೂಲನೋತ್ಸವ ಸಂಪ್ರದಾಯ ಶತಮಾನಗಳಿಂದ ನಡೆದುಕೊಂಡು ಬಂದಿದೆ. ಜು.29ರ ಶ್ರಾವಣ ಶುಕ್ಲ ತೃತೀಯದಲ್ಲಿ ಆರಂಭಗೊಂಡು ಆ.9ರ ಹುಣ್ಣಿಮೆ ವರೆಗೂ ಅಯೋಧ್ಯೆಯ ದೇವಾಲಯಗಳಲ್ಲಿ ಜೂಲ ನೋತ್ಸವ ನಡೆಯಲಿದೆ. ರಾಮಲಲ್ಲಾ ಮತ್ತು ಮೊದಲ ಮಹಡಿಯಲ್ಲಿ ಚಿನ್ನದ ಉಯ್ಯಾಲೆಯಲ್ಲಿ ಕುಳಿತಿರುವ ಸೀತಾರಾಮರ ದರ್ಶನ ಪಡೆಯಲು ಅವಕಾಶವಾಗಲಿದೆ. 2 ಭವ್ಯ ಚಿನ್ನದ ಉಯ್ಯಾಲೆ ಗಳನ್ನು ತಮಿಳುನಾಡಿನ ಚೆನ್ನೈನ ಕುಶಲಕರ್ಮಿಗಳು ತಯಾರಿಸುತ್ತಿದ್ದಾರೆ. ವಜ್ರಗಳು, ಮಾಣಿಕ್ಯಗಳು ಮತ್ತು ಪಚ್ಚೆಗಳನ್ನು ಉಯ್ಯಾಲೆಗಳ ಮೇಲೆ ಕೆತ್ತಲಾಗಿದೆ.

{ **ರಾಹುಲ್ ಗಾಂಧಿ** } ಪ್ರತಿಪಕ್ಷ ನಾಯಕ

ಕೃಷಿ ಕ್ಷೇತ್ರದಲ್ಲಿ ತೀವ್ರತರ ಸಮಸ್ಯೆಗಳಿವೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಸರಕಾರ ನಿರ್ಲಕ್ಷ್ಯ ತೋರಿದೆ. ಹಾಗಾಗಿ, ದೇಶದಲ್ಲಿ ರೈತರ ಆತ್ಮಹತ್ಯೆ ಪ್ರಕರಣ ಹೆಚ್ಚಿದೆ. ಮಹಾರಾಷ್ಟ್ರದಲ್ಲಿ 3 ತಿಂಗಳಲ್ಲಿ 767 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ಕನಿಷ್ಠ ಬೆಂಬಲ ಬೆಲೆಗೆ ಶಾಸನಬದ್ಧ ಖಾತರಿ', ಪೂರ್ಣ ಸಾಲ ಮನ್ನಾ ಬೇಡಿಕೆಗಳನ್ನು ಸರಕಾರ ನಿರ್ಲಕ್ಷಿಸಿದೆ.



ಪುಣೆಯಲ್ಲಿ ಕೊರಿಯರ್ ಸೋಗಿನಲ್ಲಿ ಅತ್ಯಾಚಾರ | 16ರ ಬಾಲಕಿ ಅಪಹರಿಸಿ ಉ.ಪ್ರ. ಪೊಲೀಸ್ ಅತ್ಯಾಚಾರ

ಅತ್ಯಾಚಾರ

ದೆಹಲಿ: ದೇಶದಲ್ಲಿ ಅತ್ಯಾಚಾರ ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇದೆ. ರಾಷ್ಟ್ರೀಯ ಮಹಿಳಾ ಆಯೋಗ(ಎನ್‌ಸಿಡಬ್ಲ್ಯು) ದಾಖಲೆ ಪ್ರಕಾರ ಮೇ ತಿಂಗಳವರೆಗೆ ದೇಶದಲ್ಲಿ ಒಟ್ಟು 394 ಅತ್ಯಾಚಾರ ಮತ್ತು ಅತ್ಯಾಚಾರಕ್ಕೆ ಯತ್ನ ಪ್ರಕರಣಗಳು ದಾಖಲಾಗಿವೆ. ಲೈಂಗಿಕ ಕಿರುಕುಳದ 302 ಮತ್ತು ಮಹಿಳೆ ಗೌರವಕ್ಕೆ ಧಕ್ಕೆ ಬಗ್ಗೆ 310 ದೂರುಗಳು ಆಯೋಗದಲ್ಲಿ ದಾಖಲಾಗಿವೆ. ಕೌಟುಂಬಿಕ ಹಿಂಸೆ, ಹಲ್ಲೆ, ಹಿಂಬಾಲಿಸುವುದು, ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿ 2025ರಲ್ಲಿ ಮೇ ತಿಂಗಳವರೆಗೆ ಎನ್‌ಸಿಡಬ್ಲ್ಯುಗೆ ಒಟ್ಟು 7698 ದೂರು ದಾಖಲಾಗಿವೆ. ಇದರಲ್ಲಿ 1594 ಕೌಟುಂಬಿಕ ಹಿಂಸೆ, ಕ್ರಿಮಿನಲ್ ಇಂಟಿಮಿಡೇಷನ್ 989, ಹಲ್ಲೆ 950 ಪ್ರಕರಣ, ವರದಕ್ಷಿಣೆ ಕಿರುಕುಳದ 916 ದೂರು, 110 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿವೆ. 25 ಕೋಟಿ ಜನಸಂಖ್ಯೆಯಿರುವ ಉತ್ತರ ಪ್ರದೇಶ ರಾಜ್ಯದಿಂದಲೇ ಅತ್ಯಧಿಕ ದೂರುಗಳು ದಾಖಲಾಗಿವೆ. ಇತ್ತೀಚಿನ ಘೋರ ಪ್ರಕರಣವೆಂದರೆ ಪಶ್ಚಿಮ ಬಂಗಾಳದಲ್ಲಿ ದಕ್ಷಿಣ ಕೋಲ್ಕತ್ತ ಕಾನೂನು ಕಾಲೇಜಿನ ಘಟನೆ. 2ನೇ ವರ್ಷದ ಕಾನೂನು ವಿದ್ಯಾರ್ಥಿನಿ ಮೇಲೆ ಒಬ್ಬ ಮಾಜಿ ವಿದ್ಯಾರ್ಥಿ, ಇಬ್ಬರು ಹಾಲಿ ವಿದ್ಯಾರ್ಥಿಗಳು ಸೇರಿಕೊಂಡು ಕಾಲೇಜು ಕ್ಯಾಂಪಸ್‌ನಲ್ಲೇ ಅತ್ಯಾಚಾರ ನಡೆಸಿದ್ದಾರೆ. ಉಸಿರಾಟ ಕಷ್ಟವಾಗಿ ಪ್ರಜ್ಞೆ ತಪ್ಪಿದವಳಿಗೆ 'ಇನ್‌ಹೇಲರ್' ನೀಡಿ ಪ್ರಜ್ಞೆ ಬರುವಂತೆ ಮಾಡಿ ಚೆನ್ನಾಗಿ ಥಳಿಸಿ ಅತ್ಯಾಚಾರ ಮಾಡಿದ್ದಾರೆ.

15ರ ವಿದ್ಯಾರ್ಥಿನಿ ಅಪಹರಿಸಿ ಅತ್ಯಾಚಾರ: ಪೊಲೀಸ್ ಸೆರೆ

ಫರೂಕಾಬಾದ್: ಉತ್ತರ ಪ್ರದೇಶದ ಫರೂಕಾಬಾದ್‌ನ ನವಾಬ್ಗಂಜ್ ಪ್ರದೇಶದಲ್ಲಿ ಬುಧವಾರ ಶಾಲೆಗೆ ಹೋಗುತ್ತಿದ್ದ 15 ವರ್ಷದ ಬಾಲಕಿಯನ್ನು ರಸ್ತೆಯಲ್ಲೇ ತಡೆ ಪೊಲೀಸ್ ಕಾನ್‌ಸ್ಟೆಬಲ್, ಕಾರಿನಲ್ಲಿ ಅಪಹರಿಸಿ ಅತ್ಯಾಚಾರ ನಡೆಸಿದ್ದಾನೆ. ನವಾಬ್‌ಗಂಜ್ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ವಿನಯ್ ಚೌಹಾಣ್ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಿ, ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಗುರುವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಬಾಲಕಿ ಶಾಲೆಯಿಂದ ಮಧ್ಯಾಹ್ನ ಮನೆಗೆ ವಾಪಸಾಗದೇ ಇದ್ದಾಗ ಆತಂಕಗೊಂಡ ಕುಟುಂಬ ಸದಸ್ಯರು ಹುಡುಕಲು ಆರಂಭಿಸಿದ್ದಾರೆ. ಕಾನ್‌ಸ್ಟೆಬಲ್ ಚೌಹಾಣ್ ಕಾರಿನಲ್ಲಿ ಬಾಲಕಿಯನ್ನು ನೋಡಿರುವುದಾಗಿ ಪ್ರತ್ಯಕ್ಷದರ್ಶಿಯೊಬ್ಬರು ಪೊಲೀಸರಿಗೆ ತಿಳಿಸಿದ್ದಾರೆ. ಬಳಿಕ ಬಾಲಕಿಯನ್ನು ಪತ್ತೆ ಮಾಡಿ ವೈದ್ಯಕೀಯ ಪರೀಕ್ಷೆ ನಡೆಸಿ ಪ್ರಕರಣ ದಾಖಲಿಸಲಾಗಿದೆ. ಸದ್ಯ ಪೊಲೀಸ್ ಇನ್‌ಸ್ಪೆಕ್ಟರ್ ರಾಜೇಶ್ ದ್ವಿವೇದಿ ನೇತೃತ್ವದ ತಂಡ ತನಿಖೆ ನಡೆಸುತ್ತಿದೆ ಎಂದು ಎಸ್‌ಪಿ ಆರತಿ ಸಿಂಗ್ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

- ಪುಣೆಯ ಐಶಾರಾಮಿ ಅಪಾರ್ಟ್‌ಮೆಂಟ್‌ನಲ್ಲಿ ಬುಧವಾರ ಸಂಜೆ ಕೃತ್ಯ
- ಮನೆಯಲ್ಲಿ ಒಂಟಿಯಾಗಿದ್ದ ಐಟಿ ಉದ್ಯೋಗಿ, 22 ವರ್ಷದ ಯುವತಿ
- ಮುಖಕ್ಕೆ ರಾಸಾಯನಿಕ ಸಿಂಪಡಿಸಿ 1 ಗಂಟೆ ಪ್ರಜ್ಞೆ ತಪ್ಪಿಸಿ ಅತ್ಯಾಚಾರ
- ಯುವತಿ ಮೊಬೈಲಲ್ಲೇ ಸೆಲ್ಫಿ ತೆಗೆದು 'ಮತ್ತೆ ಬರುವೆ' ಎಂಬ ಎಚ್ಚರಿಕೆ
- ಪುಣೆ ಪೊಲೀಸ್ ಅಲರ್ಟ್: ಆರೋಪಿ ಸೆರೆಗೆ 10 ತಂಡಗಳ ರಚನೆ

'ಮತ್ತೆ ಬರುವೆ' ಎಂಬ ಬೆದರಿಕೆ!

ಐಶಾರಾಮಿ ಅಪಾರ್ಟ್‌ಮೆಂಟ್‌ನಲ್ಲಿರುವ ಯುವತಿಯ ಮನೆ ಬಾಗಿಲಲ್ಲಿ ನಿಂತು ಬೆಲ್ ಮಾಡಿ ದ ದುಷ್ಕರ್ಮಿ, ಬಾಗಿಲು ತೆರೆದ ಯುವತಿಯನ್ನು ಉದ್ದೇಶಿಸಿ 'ನಿಮಗೆ ಕೊರಿಯರ್ ಬಂದಿದೆ' ಎಂದಿದ್ದಾನೆ. ಯುವತಿ, 'ನನಗೆ ಯಾವುದೇ ಕೊರಿಯರ್ ಬರುವುದು ಇರಲಿಲ್ಲ' ಎಂದು ಹೇಳಿ ಬಾಗಿಲು ಭದ್ರಪಡಿಸಲು ಮುಂದಾದಾಗ, ಕೊರಿಯರ್ ಮೇಲೆ 'ರಿಜೆಕ್ಟೆಡ್' ಎಂದು ನಮೂದಿಸಲು ಪೆನ್ ಕೇಳಿದ್ದಾನೆ. ಯುವತಿ ಮನೆಯೊಳಕ್ಕೆ ತಿರುಗುತ್ತಲೇ ಥಟ್ಟನೆ ಒಳಕ್ಕೆ ನುಗ್ಗಿ ಬಾಗಿಲು ಹಾಕಿದ್ದಾನೆ. ಬಳಿಕ ಆಕೆಯ ಮುಖಕ್ಕೆ ಸ್ಪ್ರೇಯರ್‌ನಿಂದ ರಾಸಾಯನಿಕ ಸಿಂಪಡಿಸಿ ಪ್ರಜ್ಞೆ ತಪ್ಪುವಂತೆ ಮಾಡಿದ್ದಾನೆ. ಸಂಜೆ 7.30ಕ್ಕೆ ಪ್ರಜ್ಞೆ ತಪ್ಪಿದ ಯುವತಿಗೆ ಮತ್ತೆ ಪ್ರಜ್ಞೆ ಬಂದಾಗ ರಾತ್ರಿ 8.30 ಆಗಿದೆ. ಅತ್ಯಾಚಾರ ನಡೆಸಿದ ಬಳಿಕ ಯುವತಿಯ ಪಕ್ಕ ಕುಳಿತು ಆಕೆಯದೇ ಮೊಬೈಲ್‌ನಿಂದ ಸೆಲ್ಫಿ ತೆಗೆದಿರುವ ದುಷ್ಕರ್ಮಿ 'ಮತ್ತೆ ಬರುವೆ' ಎಂಬ ಸಂದೇಶವನ್ನೂ ಬಿಟ್ಟು ಹೋಗಿದ್ದಾನೆ.

ಅತ್ಯಾಚಾರ!

ಪುಣೆ: ಅತ್ಯಾಚಾರ ನಡೆಸಿ ಸೆಲ್ಫಿ ತೆಗೆದ ಕಾಮುಕ!

ಪುಣೆ: ಮಹಾರಾಷ್ಟ್ರದ ಪುಣೆಯಲ್ಲಿ ಕೊರಿಯರ್ ಡೆಲಿವರಿ ಏಜೆಂಟ್ ಸೋಗಿನಲ್ಲಿ ಫ್ಲ್ಯಾಟ್‌ಗೆ ನುಗ್ಗಿದ ಅಪರಿಚಿತ ಕಾಮುಕನೊಬ್ಬ ಮನೆಯಲ್ಲಿ ಏಕಾಂಗಿಯಾಗಿದ್ದ 22 ವರ್ಷದ ಯುವತಿ ಮೇಲೆ ಬುಧವಾರ ಸಂಜೆ 7.30ರ ವೇಳೆ ಅತ್ಯಾಚಾರ ನಡೆಸಿದ್ದಾನೆ.

ಪುಣೆ ನಗರದ ಕೊಂಧ್ವಾ ಪ್ರದೇಶದಲ್ಲಿರುವ ಹೌಸಿಂಗ್ ಸೊಸೈಟಿ ವಸತಿ ಸಂಕೀರ್ಣದ ನಿವಾಸಿಯಾದ ಯುವತಿ ಐಟಿ ಉದ್ಯೋಗಿಯಾಗಿದ್ದಾರೆ. ಸೋದರ ಹೊರ ಹೋಗಿದ್ದರಿಂದ ಅಪಾರ್ಟ್‌ಮೆಂಟ್‌ನಲ್ಲಿ ಯುವತಿ ಒಬ್ಬರೇ ಇದ್ದರು. ಕೊರಿಯರ್ ಬಾಯ್ ಸೋಗಿನಲ್ಲಿ ಬಂದ ದುಷ್ಕರ್ಮಿ ಮನೆಗೆ ನುಗ್ಗಿ ಬಾಗಿಲು ಹಾಕಿದ್ದಾನೆ. ಬಳಿಕ ಯುವತಿ ಮುಖಕ್ಕೆ ರಾಸಾಯನಿಕ ಸಿಂಪಡಿಸಿ ಪ್ರಜ್ಞೆ ತಪ್ಪಿಸಿ ಅತ್ಯಾಚಾರ ನಡೆಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾನೆ.

ಬಳಿಕ ಸಂತ್ರಸ್ತೆ ಫೋನ್‌ನಲ್ಲೇ ಸೆಲ್ಫಿ ತೆಗೆದ ಆರೋಪಿ, ಕೃತ್ಯದ ಬಗ್ಗೆ ಯಾರಿಗಾದರೂ ಹೇಳಿದರೆ ಫೋಟೊ, ವಿಡಿಯೊ ವೈರಲ್ ಮಾಡುವುದಾಗಿ ಹೆದರಿಸಿದ್ದಾನೆ. ಮತ್ತೆ ಮನೆಗೆ ಬರುವುದಾಗಿಯೂ ಬೆದರಿಕೆ ಹೇಳಿದ್ದಾನೆ.

ಆರೋಪಿಯೇ ಸಂತ್ರಸ್ತೆಯ ಮೊಬೈಲ್ ಬಳಸಿ ತೆಗೆದ ಸೆಲ್ಫಿ ಮತ್ತು ಅಪಾರ್ಟ್‌ಮೆಂಟ್‌ನ ಸಿಸಿಟಿವಿ ದೃಶ್ಯಗಳನ್ನು ಆಧರಿಸಿ ಅತ್ಯಾಚಾರಿಯ ಬಂಧನಕ್ಕೆ ಕಾರ್ಯಾಚರಣೆ ಆರಂಭಗೊಂಡಿದೆ. ಜತೆಗೆ, ಯುವತಿ ನೀಡಿದ ಮಾಹಿತಿ ಆಧರಿಸಿ ದುಷ್ಕರ್ಮಿಯ ರೇಖಾಚಿತ್ರವನ್ನೂ ರಚಿಸಲಾಗಿದೆ. ನುರಿತ ಅಧಿಕಾರಿಗಳ ನೇತೃತ್ವದಲ್ಲಿ 10 ಪೊಲೀಸ್ ತಂಡ್‌ಗಳನ್ನು ರಚಿಸಲಾಗಿದೆ. ಸದ್ಯದಲ್ಲೇ ಕಾಮುಕನನ್ನು ಬಂಧಿಸಲಾಗುವುದು ಎಂದು ಪುಣೆ ನಗರದ ಡಿಸಿಪಿ ರಾಜ್ ಕುಮಾರ್ ಶಿಂದೆ ಹೇಳಿದ್ದಾರೆ. ಸಂತ್ರಸ್ತೆಯನ್ನು ವೈದ್ಯಕೀಯ ಪರೀಕ್ಷೆಗೆ ಕಳುಹಿಸಲಾಗಿದೆ. ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 64(ಅತ್ಯಾಚಾರಕ್ಕೆ ಶಿಕ್ಷೆ) 352 (2) ಕ್ರಿಮಿನಲ್ ಬೆದರಿಕೆ ಅನ್ವಯ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ.

ತಿರುಪತಿ: ಒಂದೇ ದಿನಕ್ಕೆ 5.3 ಕೋಟಿ ರು. ಸಂಗ್ರಹ

ತಿರುಪತಿ: ತಿರುಮಲದ ವೆಂಕಟೇಶ್ವರ ದೇವಸ್ಥಾನದ ಹುಂಡಿಯಲ್ಲಿ ಸೋಮವಾರ ದಾಖಲೆ ಮೊತ್ತದ ಕಾಣಿಕೆ ಸಂಗ್ರಹವಾಗಿದೆ. ಭಕ್ತರ ಸಂಖ್ಯೆ(78,730) ಸಾಧಾರಣ ಪ್ರಮಾಣದಲ್ಲಿದ್ದರೂ ಒಂದೇ ದಿನದಲ್ಲಿ 5.3 ಕೋಟಿ ರು.ಗಳ ಸಂಗ್ರಹವಾಗಿದೆ. ಇದು ಕಳೆದೊಂದು ವರ್ಷದಲ್ಲಿ ತಿರುಪತಿ ದೇವಸ್ಥಾನಕ್ಕೆ ಬಂದ ಅತಿ ಹೆಚ್ಚು ಮೊತ್ತದ ಕಾಣಿಕೆಯಾಗಿದೆ. ಹಬ್ಬ ಹರಿದಿನಗಳು ಮತ್ತು ಬೇಸಿಗೆ ಶಾಲೆ ರಜೆ ಅವಧಿಯಲ್ಲಿ ಆಗಮಿಸುವುದಕ್ಕಿಂತಲೂ ಸೋಮವಾರ ಕಡಿಮೆ ಸಂಖ್ಯೆಯ ಭಕ್ತರು ದೇಗುಲಕ್ಕೆ ಭೇಟಿ ನೀಡಿದ್ದರು. ಆದರೆ, ಭಕ್ತರು ತಿರುಪತಿ ತಿಮ್ಮಪ್ಪನ ಮೇಲಿನ ಭಕ್ತಿಯಿಂದ ದೊಡ್ಡ ಮೊತ್ತದ ಕಾಣಿಕೆ ಸಲ್ಲಿಸಿದ್ದಾರೆ.

ಈ ಮೊದಲು 2023ರ ಜ.2ರಂದು 7.68 ಕೋಟಿ ರು. ಕಾಣಿಕೆ ಒಂದೇ ದಿನದಲ್ಲಿ ಸಂದಾಯವಾಗಿತ್ತು. ಈ ಹಿಂದೆಯೂ ಹಲವು ಬಾರಿ 6 ಕೋಟಿ ರು.ಗೂ ಅಧಿಕ ಕಾಣಿಕೆ ಸಂಗ್ರಹವಾದ ನಿದರ್ಶನಗಳಿವೆ. ವಿಶ್ವದಲ್ಲೆ ಸಿರಿವಂತ ದೇವಸ್ಥಾನ ಎನಿಸಿಕೊಂಡಿರುವ ತಿರುಪತಿಯ ತಿಮ್ಮಪ್ಪನ್ನ ಸನ್ನಿದಾನದಲ್ಲಿ ತಿಂಗಳಿಗೆ ಕನಿಷ್ಠ 100 ಕೋಟಿ ರು.ಗಳಿಂದ ಗರಿಷ್ಠ 140 ಕೋಟಿ ರು.ವರೆಗೂ ಹುಂಡಿ ಹಣ ಸಂಗ್ರಹವಾಗುತ್ತಿದೆ. ಅಲ್ಲದೇ, ಮಾಸಿಕ 100 ಕಿಲೊದಿಂದ 140 ಕಿಲೊಗಳಷ್ಟು ಚಿನ್ನದ ಕಾಣಿಕೆಯೂ ಸಲ್ಲುತ್ತಿದೆ. ವಿವಿಧ ಬ್ಯಾಂಕ್‌ಗಳಲ್ಲಿ ತಿರುಪತಿ ತಿರುಮಲ ದೇವಸ್ಥಾನಂ(ಟಿಟಿಡಿ) ಟ್ರಸ್ಟ್‌ನ ಹೆಸರಲ್ಲಿನ ಸ್ಥಿರ ಠೇವಣಿಗಳ ಮೊತ್ತವೇ 20,000 ಕೋಟಿ ರು.ಗಿಂತ ಹೆಚ್ಚಿನ ಮೊತ್ತದ್ದಾಗಿದೆ!

ಚೀನಾಗೆ ಭಾರತದ ಖಡಕ್ ಸಂದೇಶ

ಉತ್ತರಾಧಿಕಾರಿ ವಿಚಾರ ದಲೈಲಾಮಾ ನಿರ್ಧಾರ

ದೆಹಲಿ: 'ದಲೈ ಲಾಮಾ ಅವರ ನಂತರದ ಉತ್ತರಾಧಿಕಾರಿ ಯಾರಾಗಬೇಕು ಎಂಬ ನಿರ್ಧಾರವನ್ನು ಸ್ಥಾಪಿತ ಸಂಸ್ಥೆ ಮತ್ತು ದಲೈ ಲಾಮಾ ಅವರೇ ತೆಗೆದುಕೊಳ್ಳುತ್ತಾರೆ. ಈ ವಿಚಾರದಲ್ಲಿ ಬೇರೆ ಯಾರೂ ಮಧ್ಯ ಪ್ರವೇಶಿಸಬೇಕಾದ ಅಗತ್ಯವಿಲ್ಲ' ಎಂದು ಭಾರತ ಸರಕಾರ ಸ್ಪಷ್ಟವಾಗಿ ಹೇಳಿದೆ. ಆ ಮೂಲಕ ಬೌದ್ಧ ಧರ್ಮಗುರು ದಲೈ ಲಾಮ ಅವರ ಉತ್ತರಾಧಿಕಾರಿ ಆಯ್ಕೆಯ ವಿಚಾರದಲ್ಲಿ ಮೂಗು ತೂರಿಸಲು ಮುಂದಾದ ಚೀನಾ ದೇಶಕ್ಕೆ ಭಾರತ ಗುರುವಾರ ಖಡಕ್ ಸಂದೇಶ ರವಾನಿಸಿದೆ.



ಜು.6ರಂದು ಹಿಮಾಚಲ ಪ್ರದೇಶ ರಾಜ್ಯದ ಧರ್ಮಶಾಲಾ ನಗರದಲ್ಲಿ ಆಯೋಜನೆಗೊಂಡಿರುವ ಧರ್ಮಗುರು ದಲೈ ಲಾಮಾ ಅವರ 90ನೇ ಹುಟ್ಟುಹಬ್ಬ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಬೌದ್ಧ ಧರ್ಮದ ಅನುಯಾಯಿ ಕೇಂದ್ರ ಸಚಿವ ಕಿರಣ್ ರಿಜಿಜು ಮತ್ತು ಕೇಂದ್ರ ಸಚಿವ ರಾಜೀವ್ ರಂಜನ್ ಸಿಂಗ್ ಹಾಜರಾಗಿ ಭಾರತ ಸರಕಾರವನ್ನು ಪ್ರತಿನಿಧಿಸಲಿದ್ದಾರೆ.

ದಲೈ ಲಾಮಾ ಅವರ ಅನುಯಾಯಿಗಳೆಲ್ಲರೂ ದಲೈ ಲಾಮಾ ಅವರ ಇಚ್ಛೆ ಪ್ರಕಾರವೇ ಉತ್ತರಾಧಿಕಾರಿಯ ನಿರ್ಧಾರವಾಗಬೇಕು ಎಂದು ಹೇಳಿದ್ದಾರೆ. ಧಾರ್ಮಿಕ ಸಮಾವೇಶ ಹೊರತುಪಡಿಸಿ ಬೇರೆ ಯಾರಿಗೂ ಉತ್ತರಾಧಿಕಾರಿ ನಿರ್ಧರಿಸುವ ಹಕ್ಕಿಲ್ಲ ಎಂದು ರಿಜಿಜು ಹೇಳಿದ್ದಾರೆ. ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ದಲೈ ಲಾಮ ಅವರ ಉತ್ತರಾಧಿಕಾರ ಆಯ್ಕೆ ಚಿಂತನೆಯನ್ನು ಚೀನಾ ಬುಧವಾರ ತಿರಸ್ಕರಿಸಿತ್ತು. ಒಂದೊಮ್ಮೆ ಉತ್ತರಾಧಿಕಾರಿ ಆಯ್ಕೆ ಮಾಡಿದರೂ ಚೀನಾ ಸರಕಾರದ ಅನುಮೋದನೆ ಮುದ್ರೆ ಪಡೆಯಬೇಕು ಎಂದೂ ಹೇಳಿತ್ತು. ಆ ಬಳಿಕವಷ್ಟೇ ಸಚಿವ ರಿಜಿಜು ಹೇಳಿಕೆ ಹೊರಬಿದ್ದಿದೆ.

ಮೋದಿ ವಿದೇಶದಿಂದ ವಾಪಸ್ ಬಳಿಕ ಬಿಜೆಪಿ ಅಧ್ಯಕ್ಷರ ಆಯ್ಕೆ

ದೆಹಲಿ: ದೇಶದಲ್ಲಿನ 12ಕ್ಕೂ ಹೆಚ್ಚು ರಾಜ್ಯಗಳಲ್ಲಿ ಪಕ್ಷದ ಸ್ಥಳೀಯ ಚುನಾವಣೆ ಪೂರ್ಣಗೊಂಡಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಹುದ್ದೆಗೆ ಸಂಭಾವ್ಯ ಅಭ್ಯರ್ಥಿಗಳ ಹೆಸರಿನ ಪಟ್ಟಿಯೂ ಸಿದ್ಧವಾಗಿದೆ. ಪ್ರಧಾನಿ ನರೇಂದ್ರ ಮೋದಿ ಜುಲೈ 9ರಂದು 5 ದೇಶಗಳ ಪ್ರವಾಸ ಮುಗಿಸಿ ವಾಪಸಾದ ಬಳಿಕ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಪಕ್ಷದ ಮೂಲಗಳು ಗುರುವಾರ ತಿಳಿಸಿವೆ.

ಇತ್ತೀಚೆಗೆ ಹಿಮಾಚಲ ಪ್ರದೇಶ, ಮಧ್ಯ ಪ್ರದೇಶ, ಉತ್ತರಾಖಂಡ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತಿತರ ರಾಜ್ಯಗಳಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರ ಆಯ್ಕೆ ಪೂರ್ಣಗೊಂಡಿದೆ. ಬಿಹಾರ, ಸಿಕ್ಕಿಂ, ಗೋವಾ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಹೊಸ ಅಧ್ಯಕ್ಷರು ಈ ಮೊದಲೇ ಆಯ್ಕೆಯಾಗಿದ್ದಾರೆ. ಉತ್ತರ ಪ್ರದೇಶ ಸೇರಿದಂತೆ ಕೆಲವೆಡೆಯಷ್ಟೇ ಬಿಜೆಪಿ ರಾಜ್ಯಾಧ್ಯಕ್ಷರ ನೇಮಕ ಪ್ರಕ್ರಿಯೆ ಬಾಕಿ ಇದ್ದು, ಶೀಘ್ರವೇ ಮುಕ್ತಾಯಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

ಅಧಿವೇಶನಕ್ಕೆ ಮುನ್ನ: ರಾಷ್ಟ್ರಾಧ್ಯಕ್ಷರ ಹುದ್ದೆಗೆ ಐವರು ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಲಾಗಿದೆ. ಕೇಂದ್ರ ಸಚಿವರಾದ ಭೂಪೇಂದ್ರ ಯಾದವ್, ಧರ್ಮೇಂದ್ರ ಪ್ರಧಾನ್, ಪ್ರಹ್ಲಾದ್ ಜೋಶಿ, ನಿರ್ಮಲಾ ಸೀತಾರಾಮನ್, ವನತಿ ಶ್ರೀನಿವಾಸನ್ ಮತ್ತು ಬಿ.ಡಿ.ಶರ್ಮಾ ಹೆಸರುಗಳೂ ಕೇಳಿಬರುತ್ತಿವೆ. ಜು.21 ರಂದು ಸಂಸತ್ತಿನ ಮುಂಗಾರು ಅಧಿವೇಶನ ಶುರುವಾಗಲಿದ್ದು, ಅದಕ್ಕೂ ಮೊದಲೇ ಅಂದರೆ, ಜುಲೈ 10ರಿಂದ 19 ರ ನಡುವೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ನಡೆಯಲಿದೆ ಎನ್ನಲಾಗಿದೆ. ಭೂಪೇಂದ್ರ ಯಾದವ್ ಅಧ್ಯಕ್ಷ ಸ್ಥಾನಕ್ಕೆ ಮುಂಚೂಣಿಯಲ್ಲಿದ್ದಾರೆ ಎನ್ನಲಾಗುತ್ತದೆ. ಒಬಿಸಿ ವರ್ಗದ ಯಾದವ್, ಮಹಾರಾಷ್ಟ್ರ-2024, ಉತ್ತರ ಪ್ರದೇಶ-2017 ಮತ್ತು ಬಿಹಾರ -2020 ವಿಧಾನಸಭೆ ಚುನಾವಣೆಗಳಲ್ಲಿ ಪಕ್ಷದ ಚುನಾವಣಾ ತಂತ್ರಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಘಾನಾ ಅಧ್ಯಕ್ಷರಿಗೆ ಬೀದರ್ ಹೂದಾನಿ!

ಅಕ್ರಾ: ಕರ್ನಾಟಕದ ಬೀದರ್ ಮೂಲದ ಅಲಂಕಾರಿಕೆ ಕಲೆಯಾದ ಬಿದರಿ ಆರ್ಟ್‌ನ ವಿಶಿಷ್ಟ ಹೂದಾನಿಗಳು ಘಾನಾ ರಾಷ್ಟ್ರ ಅಧ್ಯಕ್ಷರ ಮನೆಗೆ ತಲುಪಿವೆ!

ಆಫ್ರಿಕಾ ಖಂಡದ ಘಾನಾ ದೇಶಕ್ಕೆ 5 ದೇಶಗಳ ಪ್ರವಾಸದ ಮೊದಲ ಹೆಜ್ಜೆಯಾಗಿ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ, ಘಾನಾ ಅಧ್ಯಕ್ಷ ಮತ್ತು ಅವರ ಪತ್ನಿಗೆ ಭಾರತದಿಂದ ಕೊಂಡೊಯ್ದಿದ್ದ ವಿಶಿಷ್ಟ ಹೂದಾನಿಯನ್ನು ಉಡುಗೊರೆಯಾಗಿ ನೀಡಿದರು. ಘಾನಾಕ್ಕೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಘಾನಾ ಅಧ್ಯಕ್ಷ ಜಾನ್ ಮಹಾಮ ಮತ್ತು ಅವರ ಪತ್ನಿ ಲಾರ್ಡಿನಾ ಮಹಾಮ ಅವರಿಗೆ ಭಾರತದ ವಿಶಿಷ್ಟ ಕಲಾಕೃತಿಗಳನ್ನು ಉಡುಗೊರೆಯಾಗಿ ನೀಡಿದ್ದಾರೆ. ಮಹಾಮ ಅವರಿಗೆ ಬಿದರಿ ಕಲೆಯ ಫ್ಲವರ್ ವಾಸ್(ಹೂದಾನಿ) ಮತ್ತು ಲಾರ್ಡಿನಾ ಅವರಿಗೆ ಬೆಳ್ಳಿ ಫಿಲಿಗ್ರೀ ಕುಸರಿ ಕಲೆಯನ್ನು ಒಳಗೊಂಡ ವಿಶಿಷ್ಟ ಪರ್ಸ್ ಉಡುಗೊರೆಯಾಗಿ ನೀಡಿದ್ದಾರೆ.

ಒಡಿಶಾದ ಕಟಕ್‌ನಿಂದ ಬಂದ ಸೊಗಸಾದ ಸಿಲ್ವರ್ ಫಿಲಿಗ್ರೀ ವರ್ಕ್(ಕುಸರಿ ಕಲೆ)ನಿಂದ ಸಿದ್ಧಪಡಿಸಿದ ಪರ್ಸ್, ಪ್ರಸಿದ್ಧ ತಾರಕಾಸಿ ಕರಕುಶಲತೆಗೆ ಅದ್ಭುತ ಉದಾಹರಣೆಯಾಗಿದೆ. ನುರಿತ ಕುಶಲಕರ್ಮಿಗಳಿಂದ ಸೂಕ್ಷ್ಮವಾಗಿ ಕರಕುಶಲತೆಯಿಂದ ನಿರ್ಮಿಸಲಾದ ಪರ್ಸ್, ಉತ್ತಮ ಗುಣಮಟ್ಟದ ಬೆಳ್ಳಿ ತಂತಿಗಳಿಂದ ರೂಪುಗೊಂಡಿದೆ. ಸೂಕ್ಷ್ಮವಾದ ಹೂವಿನ ಮತ್ತು ಬಳ್ಳಿಯ ಲಕ್ಷಣಗಳನ್ನು ಒಳಗೊಂಡಿದೆ. ಇದು ಒಡಿಶಾದ ಶ್ರೀಮಂತ ಕರಕುಶಲ ಸಂಪ್ರದಾಯದ ಕಾಲಾತೀತ ಸ್ಮಾರಕವಾಗಿದೆ.

ತೇಜಸ್ ಎಲ್‌ಸಿಎ ಎಂಜಿನ್ ಸರಬರಾಜಿಗೆ ರಾಜನಾಥ್ ಸಿಂಗ್ ಆಗ್ರಹ

ಭಾರತ-ಅಮೆರಿಕ ದಶ ವರ್ಷಗಳ ರಕ್ಷಣಾ ಒಪ್ಪಂದ

ದೆಹಲಿ: ಭಾರತ-ಅಮೆರಿಕ ನಡುವೆ ರಕ್ಷಣಾ ಮತ್ತು ಕಾರ್ಯ ತಂತ್ರ ಸಂಬಂಧಗಳ ವಿಸ್ತರಣೆಗಾಗಿ ಮುಂದಿನ 10 ವರ್ಷಗಳ ಅವಧಿಗೆ ಹೊಸ ರಕ್ಷಣಾ ಒಪ್ಪಂದ ಮಾಡಿಕೊಳ್ಳುವ ಸಂಬಂಧ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಪರಸ್ಪರ ಒಪ್ಪಿದ್ದಾರೆ.

ಇಬ್ಬರೂ ನಾಯಕರು ಬುಧವಾರ ದೂರವಾಣಿ ಸಂಭಾಷಣೆ ನಡೆಸಿದ್ದಾರೆ. ಹೆಗ್ಸೆತ್ ಮತ್ತು ರಾಜನಾಥ್ ಮುಂದಿನ ಸಭೆ ವೇಳೆ 10 ವರ್ಷಗಳ ಅಮೆರಿಕ-ಭಾರತ ರಕ್ಷಣಾ ಚೌಕಟ್ಟಿಗೆ ಸಹಿ ಹಾಕಲು ಒಪ್ಪಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ದಕ್ಷಿಣ ಏಷ್ಯಾದಲ್ಲಿ ಪ್ರಮುಖ ರಕ್ಷಣಾ ಪಾಲುದಾರನಾಗಿ ಅಮೆರಿಕ ಭಾರತಕ್ಕೆ ನೀಡುವ ಆದ್ಯತೆಯನ್ನು ಕಾರ್ಯದರ್ಶಿ ಹೆಗ್ಸೆತ್ ಒತ್ತಿ ಹೇಳಿದ್ದಾರೆ. ಭಾರತಕ್ಕೆ ಅಮೆರಿಕದ ಪ್ರಮುಖ ರಕ್ಷಣಾ ಮಾರಾಟ ಬಾಕಿ ಇರುವ ಬಗ್ಗೆ ಮತ್ತು ಎರಡೂ ದೇಶ ಗಳ ನಡುವೆ ನಿಕಟ ರಕ್ಷಣಾ ಕೈಗಾರಿಕಾ ಸಹಕಾರದ ಕಡ್ಡಾಯದ ಬಗ್ಗೆ ಇಬ್ಬರೂ ಚರ್ಚಿಸಿದ್ದಾರೆ ಎಂದು ತಿಳಿದುಬಂದಿದೆ.

ತೇಜಸ್ ಲೈಟ್ ಕಾಂಬ್ಯಾಟ್ ಏರ್‌ಕ್ರಾಫ್ಟ್(ಎಲ್‌ಸಿಎ)ಗೆ ಅಗತ್ಯವಾದ 'ಜಿಇ ಎಫ್-404' ಎಂಜಿನ್‌ಗಳನ್ನು ಭಾರತದ ಹಿಂದೂಸ್ತಾನ ಏರೊನಾಟಿಕ್ಸ್ ಲಿ.ಗೆ ಸರಬರಾಜು ಮಾಡುವ ಒಪ್ಪಂದ ಜಾರಿಯನ್ನು ವೇಗಗೊಳಿಸುವಂತೆ ಹೆಗ್ಸೆತ್ ಅವರಿಗೆ ರಾಜನಾಥ್ ಸಿಂಗ್ ದೂರವಾಣಿ ಕರೆ ವೇಳೆ ಒತ್ತಾಯಿಸಿದರು ಎನ್ನಲಾಗಿದೆ. ಅಲ್ಲದೇ, ಎಫ್-414 ಜೆಟ್ ಎಂಜಿನ್‌ಗಳನ್ನು ಭಾರತದಲ್ಲಿಯೇ ಜಂಟಿಯಾಗಿ ಉತ್ಪಾದಿಸುವ ಬಗೆಗೂ ಹಿಂದೂಸ್ತಾನ್ ಏರೋನಾಟಿಕ್ಸ್ ಲಿ.(ಎಚ್‌ಎಎಲ್) ಮತ್ತು ಅಮೆರಿಕ ರಕ್ಷಣಾ ಕ್ಷೇತ್ರದ ಪ್ರಮುಖ ಉದ್ಯಮ ಸಂಸ್ಥೆ 'ಜಿಇ-ಏರೋಸ್ಪೇಸ್' ನಡುವಿನ ಪ್ರಸ್ತಾವಿತ ಒಪ್ಪಂದವನ್ನು ಶೀಘ್ರ ಅಂತಿಮಗೊಳಿಸುವಂತೆಯೂ ರಾಜನಾಥ್ ಸಿಂಗ್ ಒತ್ತಾಯಿಸಿದರು ಎನ್ನಲಾಗಿದೆ.

ಇಂಡಿ ಒಕ್ಕೂಟದ ಮೈತ್ರಿ ವಿ.ಸಭೆ ಚುನಾವಣೆಗಿಲ್ಲ

ಅಹಮದಾಬಾದ್: ಗುಜರಾತ್ ರಾಜ್ಯದಲ್ಲಿ ಆಡಳಿತಾರೂಢ ಬಿಜೆಪಿಗೆ ಕಾಂಗ್ರೆಸ್ ಸಹಾಯ ಮಾಡುತ್ತಿದೆ ಎಂದು ಆರೋಪಿಸಿರುವ ಆಮ್ ಆದ್ಮಿ ಪಕ್ಷದ(ಎಎಪಿ) ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್, ತಮ್ಮ ಪಕ್ಷ ಕಾಂಗ್ರೆಸ್ ಜತೆ ವಿಧಾನಸಭೆ ಚುನಾವಣೆಗಳಿಗೆ ಮೈತ್ರಿ ಮಾಡಿಕೊಂಡಿಲ್ಲ. ಇಂಡಿ ಒಕ್ಕೂಟದ ಮೈತ್ರಿ ರಾಜಕಾರಣ ಏನಿದ್ದರೂ ಲೋಕಸಭೆ ಚುನಾವಣೆಗೆ ಮಾತ್ರ ಎಂದು ಗುರುವಾರ ಹೇಳಿದ್ದಾರೆ. ಬಿಜೆಪಿ ತನ್ನ 30 ವರ್ಷಗಳ ಆಡಳಿತದಲ್ಲಿ ಗುಜರಾತ್ ಅನ್ನು ಹಾಳು ಮಾಡಿದೆ ಎಂದು ಕೇಜ್ರಿವಾಲ್ ಹೇಳಿದ್ದಾರೆ. ಬಿಜೆಪಿ ಅಧಿಕಾರವನ್ನು ಉಳಿಸಿಕೊಳ್ಳಲು ಕಾಂಗ್ರೆಸ್ ಸಹಾಯ ಮಾಡಿದೆ. ಹಾಗಾಗಿಯೇ ಪ್ರತಿಪಕ್ಷವಾಗಿ ಕಾಂಗ್ರೆಸ್ ವಿಫಲವಾಗಿದೆ ಎಂದು ಟೀಕಿಸಿದ್ದಾರೆ. 2027ರಲ್ಲಿ ಗುಜರಾತ್ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಎಎಪಿ ಪ್ರತ್ಯೇಕವಾಗಿಯೇ ಹೋರಾಡಿ ಗೆಲುವು ಸಾಧಿಸುತ್ತದೆ. ಏಕೆಂದರೆ ಬಿಜೆಪಿ ಮತ್ತು ಕಾಂಗ್ರೆಸ್ ಮಾತ್ರವಲ್ಲ, ಅದನ್ನು ಹೊರತುಪಡಿಸಿ 3ನೇ ಆಯ್ಕೆಯೂ ಇದೆ. ಅದು ರಾಜ್ಯದ ಜನರಿಗೆ ಗೊತ್ತಿದೆ ಎಂದರು.



ವಿಮಾನವನ್ನು ಬಿಚ್ಚಿ ಕೊಂಡೊಯ್ಯುವರೆ?

ತಿರುವನಂತಪುರಂ: ಕೇರಳದ ತಿರುವನಂತಪುರಂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಜೂ.14ರಂದು ತಾಂತ್ರಿಕ ಸಮಸ್ಯೆ ಎದುರಾಗಿದ್ದರಿಂದ ತುರ್ತು ಭೂಸ್ಪರ್ಶ ಮಾಡಿದ್ದ 'ಬ್ರಿಟಿಷ್ ರಾಯಲ್ ನೇವಿ' (ನೌಕಾಪಡೆ)ಯ ಎಫ್ -35ಬಿ ಫೈಟರ್ ಜೆಟ್ ವಿಮಾನ ವನ್ನು ದುರಸ್ತಿಪಡಿ ಸುವುದು ಸಾಧ್ಯವಾಗದೇ ಹೋಗಿದೆ. ಹಾಗಾಗಿ, ಬ್ರಿಟನ್‌ನ ನೌಕಾಪಡೆಯ 30 ತಂತ್ರಜ್ಞರ ತಂಡ ತಿರುವ ನಂತಪುರಂಗೆ ಆಗಮಿಸಲಿದ್ದು, ವಿಮಾಣವನ್ನು ಬಿಚ್ಚಿ ಬಿಡಿಭಾ ಗಗಳಾಗಿ ವಿಂಗಡಿಸಿ ಪೆಟ್ಟಿಗೆ ತುಂಬಿಕೊಂಡು ಲಂಡನ್‌ಗೆ ಸೇನಾ ಸರಕು ವಿಮಾನದಲ್ಲಿ ಕೊಂಡೊಯ್ಯಲಿದೆ ಎಂದು ಪತ್ರಿಕೆ ಯೊಂದು ವರದಿ ಮಾಡಿದೆ. 5ನೇ ತಲೆಮಾರಿನ ಸ್ಟೆಲ್ತ್ ಜೆಟ್ ವಿಮಾನ ಅತ್ಯಾಧುನಿಕವಾದುದಾಗಿದೆ. ಅದನ್ನು ಈಗಿರುವಲ್ಲಿ ದುರಸ್ತಿ ಮಾಡಲು ಸಾಧ್ಯವಿಲ್ಲ. ಹಲವು ಬಾರಿಯ ಯತ್ನ ಫಲಕಾರಿಯಾಗಿಲ್ಲ. ಹಾಗಾಗಿ ಬ್ರಿಟನ್ ನೌಕಾಪಡೆ ಅಧಿಕಾರಿಗಳು ಜೆಟ್ ವಿಮಾನವನ್ನು ದೇಶಕ್ಕೆ ಸ್ಥಳಾಂತರಿಸಲು ಪರ್ಯಾಯ ಯೋಜನೆಗಳನ್ನು ಹುಡುಕುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಫಾಕ್ಸ್‌ಕಾನ್ ಘಟಕದಿಂದ ಚೀನಾ ಸಿಬ್ಬಂದಿ ವಾಪಸ್

ದೆಹಲಿ: ಜನಪ್ರಿಯ ಸ್ಮಾರ್ಟ್‌ಫೋನ್‌ಗಳಾದ ಆ್ಯಪಲ್ ಕಂಪನಿಯ 'ಐಫೋನ್'ಗಳನ್ನು ತಯಾರಿಕಾ ಸಂಸ್ಥೆ ಫಾಕ್ಸ್‌ಕಾನ್ ಭಾರತದಲ್ಲಿನ ಘಟಕದಲ್ಲಿರುವ ಚೀನಾ ತಂತ್ರಜ್ಞರನ್ನು ಚೀನಾದ ಫಾಕ್ಸ್‌ಕಾನ್ ಘಟಕ ವಾಪಸ್ ಕರೆಸಿಕೊಳ್ಳುವುದಕ್ಕೆ ಆರಂಭಿಸಿದೆ. ಇದರಿಂದ ಭಾರತದಲ್ಲಿನ ಆ್ಯಪಲ್ ಉತ್ಪನ್ನಗಳ ತಯಾರಿಕಾ ಘಟಕಗಳ ನಕಾರಾತ್ಮಕ ಪರಿಣಾಮ ಬೀರಲಿದೆ ಎಂದು ಹೇಳಲಾಗಿದೆ.

ಆಪಲ್ ಕಂಪನಿಯ ಪ್ರಮುಖ ಉತ್ಪಾದನಾ ಪಾಲುದಾರ ಸಂಸ್ಥೆಯಾದ 'ಫಾಕ್ಸ್‌ಕಾನ್ ಟೆಕ್ನಾಲಜಿ ಗ್ರೂಪ್', ನೂರಾರು ಚೀನೀ ಎಂಜಿನಿಯರ್‌ಗಳು ಮತ್ತು ತಂತ್ರಜ್ಞರನ್ನು ಭಾರತದಲ್ಲಿನ ಐಫೋನ್ ತಯಾರಿಕಾ ಘಟಕಗಳಿಂದ ವಾಪಸ್ ಕರೆಸಿಕೊಳ್ಳುತ್ತಿದೆ. 300ಕ್ಕೂ ಹೆಚ್ಚು ಚೀನಿ ತಂತ್ರಜ್ಞರು ಈಗಾಗಲೇ ಬೀಜಿಂಗ್‌ನತ್ತ ಮುಖ ಮಾಡಿದ್ದಾರೆ ಎನ್ನಲಾಗಿದೆ. 2 ತಿಂಗಳ ಹಿಂದೆಯೇ ಈ ವಾಪಸ್ ಕರೆಸಿಕೊಳ್ಳುವ ಪ್ರಕ್ರಿಯೆ ಆರಂಭವಾಗಿದೆ. ಈ ಕ್ರಮ ಭಾರತದಲ್ಲಿ ಐಫೋನ್ ಉತ್ಪಾದನಾ ಘಟಕಗಳ ಮೇಲೆ ಭಾರೀ ಪರಿಣಾಮ ಬೀರಲಿದೆ ಎಂದಿದ್ದಾರೆ. ಸದ್ಯ ಭಾರತದಲ್ಲಿನ ಘಟಕದಲ್ಲಿ ತೈವಾನೀಸ್ ಬೆಂಬಲಿತ ಸಿಬ್ಬಂದಿ ಮಾತ್ರ ಭಾರತದಲ್ಲಿದ್ದಾರೆ.

ಇಂದಿನಿಂದ 3 ದಿನ ಪ್ರಾಂತ ಪ್ರಚಾರಕ ಸಭೆ

ದೆಹಲಿ: ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಪ್ರಾಂತ ಪ್ರಚಾರಕ ಸಭೆ ದೆಹಲಿಯ ಕೇಶವ್ ಕುಂಜ್‌ನಲ್ಲಿ ಶುಕ್ರವಾರ ಆರಂಭಗೊಳ್ಳಲಿದ್ದು, 3 ದಿನಗಳ ಕಾಲ ನಡೆಯಲಿದೆ. ಆರ್‌ಎಸ್‌ಎಸ್‌ಗೆ 100 ವರ್ಷಗಳಾಗಲಿರುವ ಹಿನ್ನೆಲೆ ಶತಮಾನೋತ್ಸವ ವರ್ಷದ ಕಾರ್ಯಕ್ರಮಗಳ ಯೋಜನೆ ಕುರಿತು ಸಭೆ ಚರ್ಚೆ ನಡೆಸಲಿದೆ.

ದೇಶದಲ್ಲಿನ ಎಲ್ಲಾ ಪ್ರಾಂತ್ಯಗಳಲ್ಲಿನ ಆರ್‌ಎಸ್‌ಎಸ್ ಘಟಕಗಳು ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡು ಸಂಭ್ರಮಚರಣೆಯನ್ನು ಅರ್ಥಪೂರ್ಣವಾಗಿ ಸಲು ತಮ್ಮದೇ ಆದ ಯೋಜನೆಗಳನ್ನು ರೂಪಿಸಿ ಕೊಂಡಿವೆ. ಸರಸಂಘಚಾಲಕ್ ಮೋಹನ್ ಭಾಗವತ್ ಅವರು ಸಭೆಯಲ್ಲಿರಲಿರುವರು. ಸಭೆಯಲ್ಲಿ ಚರ್ಚಿಸಿದ ಬಳಿಕ ಮಾಹಿತಿ ಹಂಚಿಕೊಳ್ಳಲಾಗುವುದು ಎಂದು ಆರ್‌ಎಸ್‌ಎಸ್ ಅಖಿಲ ಭಾರತ ಪ್ರಚಾರ ಪ್ರಮುಖ್ ಸುನಿಲ್ ಅಂಬೇಕರ್ ಗುರುವಾರ ಸುದ್ದಿಗೋಷ್ಠಿ ಯಲ್ಲಿ ಹೇಳಿದ್ದಾರೆ. ಶತಮಾನೋತ್ಸವ ವರ್ಷದ ಸಂಭ್ರಮ ಅ.2ರಂದು ನಾಗಪುರದಲ್ಲಿ ವಿಜಯದಶಮಿ ಉತ್ಸವ ದೊಂದಿಗೆ ಆರಂಭಗೊಳ್ಳಲಿದೆ. ನಂತರ ಒಂದು ವರ್ಷ ಶತಮಾ ನೋತ್ಸವ ವರ್ಷದ ಕಾರ್ಯಕ್ರಮಗಳು ನಡೆಯಲಿವೆ. ನಗರ ಮತ್ತು ಬ್ಲಾಕ್ ಮಟ್ಟದಲ್ಲಿ ಸಾಮಾಜಿಕ ಸಾಮರಸ್ಯ ಸಭೆಗಳನ್ನು ಆಯೋಜಿಸ ಲಾಗುತ್ತದೆ. ಜಿಲ್ಲಾ ಕೇಂದ್ರಗಳಲ್ಲಿ ಪ್ರಮುಖ ನಾಗರಿಕ ವಿಚಾರ ಸಂಕಿರಣಗಳನ್ನು ಆಯೋಜಿಸಲಾಗುತ್ತದೆ.

ಹಳಕಟ್ಟಿಗೆ ಮರಣೋತ್ತರ ಬಸವಶ್ರೀ ಪ್ರಶಸ್ತಿ ನೀಡಲಿ

ಫ.ಗು.ಹಳಕಟ್ಟಿ ಜನ್ಮ ದಿನಾಚರಣೆಯಲ್ಲಿ ಎಚ್.ಕೆ.ಪಾಟೀಲ್ ಅಭಿಮತ

ವಚನ ಪಿತಾಮಹ ಫ.ಗು.ಹಳಕಟ್ಟಿ ಅವರ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಸಚಿವ ಎಚ್.ಕೆ.ಪಾಟೀಲ್ ಉದ್ಘಾಟಿಸಿದರು.

ಬೆಂಗಳೂರು: ವಚನ ಸಾಹಿತ್ಯದ ರಕ್ಷಣೆ, ವಚನಗಳ ಸಂಗ್ರಹ ಮತ್ತು ಪ್ರಚಾರ ಕಾರ್ಯಕ್ಕೆ ಸಂಬಂಧಿಸಿದಂತೆ ಫ.ಗು. ಹಳಕಟ್ಟಿ ಅವರಿಗೆ ಮರಣೋತ್ತರವಾಗಿ ಬಸವಶ್ರೀ ಪ್ರಶಸ್ತಿ ನೀಡಿ ಗೌರವಿಸಬೇಕು ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ್ ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಶಂಕರ ಬಿದರಿ ಫೌಂಡೇಷನ್ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಚನ ಪಿತಾಮಹ ಫ.ಗು.ಹಳಕಟ್ಟಿ ಅವರ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದ ಅವರು, ಫ.ಗು. ಹಳಕಟ್ಟಿ ಅವರು ವಚನ ಪಿತಾಮಹ ಎಂದೇ ಖ್ಯಾತರಾಗಿದ್ದಾರೆ. ಅವರು ಸ್ಥಾಪಿಸಿರುವ ಸಂಘ, ಸಂಸ್ಥೆಗಳು ಇಂದಿಗೂ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಜನಮನ್ನಣೆ ಪಡೆದಿವೆ. ಅವರ ಕಾರ್ಯಕ್ಷೇತ್ರ ವಿಸ್ತಾರವಾಗಿತ್ತು. ಅವರು ಯೋಜಿಸದ, ಸಾಧಿಸದ ಸಾರ್ವಜನಿಕ ಕ್ಷೇತ್ರವಿಲ್ಲ. ಹಸಿವಿನಿಂದ ಬಳಲುವ ಜನರಿಗೆ ನೆರವಾಗಲು ಬರನಿರೋಧಕ ಸಮಿತಿ ಸ್ಥಾಪಿಸಿದ್ದರು ಎಂದು ಸ್ಮರಿಸಿಕೊಂಡರು.

ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ, ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ಶಂಕರ ಬಿದರಿ ಫೌಂಡೇಷನ್ ಅಧ್ಯಕ್ಷ ಶಂಕರ ಬಿದರಿ, ಡಾ.ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಮಹಾಂತೇಶ ಬಿರಾದಾರ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ.ಸೋಮಶೇಖರ್ ಉಪಸ್ಥಿತರಿದ್ದರು.

> ವಚನ ಸಾಹಿತ್ಯವನ್ನು ಶೋಧಿಸಿ, ಅನ್ವೇಷಿಸಿ ಪ್ರಕಟಿಸುವ ಮೂಲಕ ಸಂಶೋಧನಾ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ಇವರ ಕಾರ್ಯಗಳು ಹೆಚ್ಚು ಪ್ರಚಾರವಾಗಬೇಕು. ಮರಾಠಿ ಪ್ರದೇಶದೊಳಗೆ ಕನ್ನಡ ಶಾಲೆಗಳನ್ನು ಕಟ್ಟಿಸಿದ್ದನ್ನು ಮರೆಯುವಂತಿಲ್ಲ. ಹಳಕಟ್ಟಿ ಅವರ ಮೂಲ ಪುಸ್ತಕಗಳನ್ನು ಡಾ.ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದಲ್ಲಿ ಸಂರಕ್ಷಿಸಲಾಗಿದೆ.
>
> **-ಎಚ್.ಕೆ.ಪಾಟೀಲ** ಸಚಿವ

ಕಕೇಶಿಯನ್ ಚಾಕ್ ಸರ್ಕಲ್ ನಾಟಕ ಪ್ರದರ್ಶನ

ಬೆಂಗಳೂರು: ವಿಜಯನಗರ ಬಿಂಬ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಜೂ.27 ರಂದು ಕಲಾಗ್ರಾಮ ರಂಗಮಂದಿರದಲ್ಲಿ ಬ್ರೆಕ್ಟ್‌ನ ಕಕೇಶಿಯನ್ ಚಾಕ್ ಸರ್ಕಲ್ ನಾಟಕ ಯಶಸ್ವಿ ಪ್ರದರ್ಶನ ನಡೆಯಿತು.

ಬ್ರೆಕ್ಟ್‌ನ ಈ ನಾಟಕ ಜಿ.ಎನ್. ರಂಗನಾಥರಾವ್ ಕನ್ನಡಕ್ಕೆ ರೂಪಾಂತರ ಮಾಡಿದ್ದು, ಡಾ.ಸುಷ್ಮಾ .ಎಸ್.ವಿ ನಿರ್ದೇಶಿಸಿದ್ದಾರೆ. ರಾಘವೇಂದ್ರ ಬಿಜಾಡಿಯವರ ರಾಗ ಸಂಯೋಜನೆ, ಮಾದೇಶ್ ಬಡಿಗೇರ್ ರಂಗ ಪ್ರಸಾದನ, ಶುಭ ವೆಂಕಟೇಶ್ ವಸ್ತ್ರ ವಿನ್ಯಾಸ ನಾಟಕದ ವೈಭವಕ್ಕೆ ಗರಿ ಸಿಕ್ಕಿಸಿತು. ಎಂಟು ಜನ ವಿದ್ಯಾರ್ಥಿಗಳ ತಂಡ ನಾಟಕದ ಓಟಕ್ಕೆ, ಕಥಾ ವಸ್ತುವಿಗೆ ಲೋಪ ಬರದಂತೆ ಸುಮಾರು 1.5 ಗಂಟೆಯ ಪ್ರದರ್ಶನ ನೀಡಿದರು. ದಾದಿಯ ಗ್ರೂಷ ಪಾತ್ರದಲ್ಲಿ ದಿಯಾ ಲವಲವಿಕೆಯಿಂದ ನಟಿಸಿ ಪ್ರೇಕ್ಷಕರ ಮೆಚ್ಚುಗೆ ಪಡೆದರು. ಸ್ಕಂದ, ರೈತನಾಗಿ, ಗ್ರೂಷಾಳ ಅಣ್ಣನಾಗಿ, ಕೊನೆಯಲ್ಲಿ ನ್ಯಾಯಾಧೀಶನಾಗಿ ಅಜದಾಕ್ ಪಾತ್ರದಲ್ಲಿ ನಟಿಸಿದ್ದು ಪ್ರೇಕ್ಷಕರ ಮೆಚ್ಚುಗೆ ಹಾಗು ಪ್ರಶಂಸೆಗಳಿಸಿತು.



ಬೆಂಗಳೂರಿನ ಗೋಸಾಯಿ ಮಠದಲ್ಲಿ ಜಗದ್ಗುರು ಶ್ರೀ ಮಂಜುನಾಥ ಭಾರತೀ ಸ್ವಾಮೀಜಿ ಅವರ ಜನ್ಮದಿನದ ಪ್ರಯುಕ್ತ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ತಿನ ರಾಜ್ಯಾಧ್ಯಕ್ಷ ಎಸ್.ಸುರೇಶ್ ರಾವ್ ಸಾಠೆ ಅವರು ಕೆಕೆಎಂಪಿ ತಂಡದೊಂದಿಗೆ ಸ್ವಾಮೀಜಿಗೆ ಜನ್ಮದಿನ ಶುಭಾಶಯ ಕೋರಿದರು. ಈ ವೇಳೆ ಶ್ರೀ ಮಂಜುನಾಥ ಭಾರತೀ ಸ್ವಾಮೀಜಿ ಅವರ ಆಶೀರ್ವಾದ ಪಡೆದುಕೊಂಡರು.

ಅಧಿಕಾರಿಗಳ ಅಮಾನತು ಸಮರ್ಥನೆಗೆ ದಾಖಲೆ ಕೊಡಿ: ಹೈಕೋರ್ಟ್ ಸೂಚನೆ

ಕಾಲ್ತುಳಿತ ಪ್ರಕರಣ | ವಿವರಗಳನ್ನು ನೀಡಲು ರಾಜ್ಯ ಸರಕಾರಕ್ಕೆ ತಾಕೀತು

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ನಡೆದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ಎಸಗಿದ್ದ ಆರೋಪದಡಿ ಕೆಲವು ಅಧಿಕಾರಿಗಳನ್ನು ಅಮಾನತು ಮಾಡಿದ್ದ ಆದೇಶವನ್ನು ರದ್ದು ಮಾಡಿದ್ದ ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ(ಸಿಎಟಿ)ಯ ಆದೇಶ ಪ್ರಶ್ನಿಸಿ, ಸರಕಾರ ಸಲ್ಲಿಸಿರುವ ಅರ್ಜಿ ವಿಲೇವಾರಿಯವರೆಗೂ ವಿಕಾಸ್ ಕುಮಾರ್ ಅವರು ಕರ್ತವ್ಯಕ್ಕೆ ಮರು ನೇಮಕಕ್ಕೆ ಒತ್ತಾಯಿಸಬಾರದು ಎಂದು ಹೈಕೋರ್ಟ್ ಮೌಖಿಕವಾಗಿ ಸೂಚನೆ ನೀಡಿತು.

ವಿಕಾಸ್ ಕುಮಾರ್ ಅವರ ಅಮಾನತು ಆದೇಶ ರದ್ದುಪಡಿಸಿದ್ದ ಸಿಎಟಿ ಆದೇಶ ಪ್ರಶ್ನಿಸಿ ರಾಜ್ಯ ಸರಕಾರ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಮತ್ತು ನ್ಯಾಯಮೂರ್ತಿ ಟಿ.ಎಂ.ನದಾಫ್ ಅವರಿದ್ದ ನ್ಯಾಯಪೀಠ ಈ ಸೂಚನೆ ನೀಡಿದೆ.

ಅಲ್ಲದೆ, ಘಟನೆ ಸಂಬಂಧ ಅಧಿಕಾರಿಗಳನ್ನು ಬೇರೊಂದು ಕಡೆ ವರ್ಗಾವಣೆ ಮಾಡಬಹುದಿತ್ತೇ? ಇಲ್ಲವೇ ಅಮಾನತು ಮಾಡಿರುವ ಕ್ರಮ ಸಮರ್ಪಕವಾಗಿ ಇದೆಯೇ ಎಂಬುದನ್ನು ರಾಜ್ಯ ಸರಕಾರ ವಿವರವಾಗಿ ತಿಳಿಸಬೇಕು. ಅಧಿಕಾರಿಗಳ ಅಮಾನತು ಮಾಡಿರುವ ಕ್ರಮ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಸೂಕ್ತ ದಾಖಲೆಗಳನ್ನು ಒದಗಿಸಬೇಕು ಎಂದು ಪೀಠ ಹೇಳಿದೆ.

ವಿಕಾಸ್ ಕುಮಾರ್ ಪರ ವಕೀಲರು, ಸಿಎಟಿ ಆದೇಶದ ಅನ್ವಯ ಅಧಿಕಾರಿಗಳನ್ನು ಮರು ನೇಮಕ ಮಾಡದಿದ್ದಲ್ಲಿ ತಕ್ಷಣ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸುವುದಿಲ್ಲ ಎಂದು ಪೀಠಕ್ಕೆ ವಿವರಿಸಿದರು.

ಇದಕ್ಕೆ ನ್ಯಾಯಪೀಠ, ಅಧಿಕಾರಿಗಳ ಅಮಾನತು ಆದೇಶ ರದ್ದಾಗಿದೆ. ಪುನರ್ ನೇಮಕದ ಆದೇಶ ಹೊರಡಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಅರ್ಜಿಯ ಅಂತಿಮ ಆದೇಶದವರೆಗೂ ಕರ್ತವ್ಯಕ್ಕೆ ಹಾಜರಾಗುವುದನ್ನು ಮುಂದೂಡಿ ಎಂದು ಮೌಖಿಕವಾಗಿ ಹೇಳಿತು. ಅದಕ್ಕೆ ಪ್ರತಿವಾದಿ ವಿಕಾಸ್ ಕುಮಾರ್ ಪರ ವಕೀಲರು, ಪ್ರಕರಣ ಸಂಬಂಧ ಯಾವುದೇ ಕ್ರಮಕ್ಕೆ ಮುಂದಾಗುವುದಿಲ್ಲ ಎಂದು ತಿಳಿಸಿದರು. ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ ಮುಂದಿನ ವಿಚಾರಣೆ ಜುಲೈ 9ಕ್ಕೆ ಮುಂದೂಡಿತು.

ಸಿಎಟಿ ಆದೇಶಕ್ಕೆ ತಡೆ ನೀಡಲು ಪೀಠಕ್ಕೆ ಮನವಿ

ಸರಕಾರದ ಪರ ವಾದ ಮಂಡಿಸಿದ ರಾಜ್ಯ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಅಧಿಕಾರಿಗಳನ್ನು ಅಮಾನತು ಮಾಡಿರುವ ಸರಕಾರದ ಕ್ರಮ ಸರಿಯಾಗಿದೆ. ಅದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ಕರ್ತವ್ಯಲೋಪಕ್ಕೆ ಕುರಿತ ದಾಖಲೆಗಳನ್ನು ಒದಗಿಸಲಾಗುವುದು. ಅರ್ಜಿ ವಿಚಾರಣೆ ಪೂರ್ಣಗೊಳ್ಳುವವರೆಗೂ ಸಿಎಟಿ ಆದೇಶಕ್ಕೆ ತಡೆ ನೀಡಬೇಕು ಎಂದು ಪೀಠಕ್ಕೆ ಮನವಿ ಮಾಡಿದರು.

This is a public announcement for information purposes only and is not a prospectus announcement and does not constitute an invitation or offer to acquire, purchase or subscribe to securities.
Not for release, publication or distribution, directly or indirectly, outside India.

INTIMATION OF FILING OF THE PRE-FILED DRAFT RED HERRING PROSPECTUS DATED JULY 2, 2025 ("PRE-FILED DRAFT RED HERRING PROSPECTUS") OF MEESHO LIMITED ("COMPANY") UNDER CHAPTER IIA OF THE SECURITIES AND EXCHANGE BOARD OF INDIA (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED ("SEBI ICDR REGULATIONS"), WITH THE SECURITIES AND EXCHANGE BOARD OF INDIA ("SEBI") AND BSE LIMITED AND NATIONAL STOCK EXCHANGE OF INDIA LIMITED (TOGETHER, THE "STOCK EXCHANGES") IN RELATION TO THE PROPOSED INITIAL PUBLIC OFFERING OF ITS EQUITY SHARES OF FACE VALUE OF ₹1/- EACH ("EQUITY SHARES") ON THE MAIN BOARD OF THE STOCK EXCHANGES (THE "OFFER").

PUBLIC ANNOUNCEMENT

MEESHO LIMITED

Registered and Corporate Office : 3rd Floor, Wing-E, Helios Business Park, Kadubeesanahalli Village, Varthur Hobli, Outer Ring Road, Bengaluru, 560103, Karnataka, India, **Tel**: +91 91080 21923
Contact Person: Rahul Bhardwaj, Company Secretary and Compliance Officer; **Email:** cs@meesho.com
Website: www.meesho.com; **Corporate Identity Number:** U74900KA2015PLC082263

This public announcement is being made pursuant to Regulation 59C(5) of the SEBI ICDR Regulations to inform the public that the Company has filed the Pre-filed Draft Red Herring Prospectus with SEBI and the Stock Exchanges, under Chapter IIA of the SEBI ICDR Regulations, in relation to the proposed initial public offering of its Equity Shares on the main board of the Stock Exchanges. The filing of the Pre-filed Draft Red Herring Prospectus shall not necessarily mean that the Company will undertake the Offer.

This announcement is not an offer of securities for sale in the United States or elsewhere. This announcement has been prepared for publication in India only and is not for publication or distribution, directly or indirectly, in or into the United States. The Equity Shares described in this announcement have not been, and will not be, registered under the U.S. Securities Act of 1933, as amended ("**U.S. Securities Act**") or any state securities laws in the United States, and unless so registered, may not be offered or sold within the United States, or to, or for the account or benefit of, U.S. Persons (as defined in Regulation S under the U.S. Securities Act, except pursuant to an exemption from, or in a transaction not subject to, the registration requirements of the U.S. Securities Act and applicable U.S. state securities laws. The Company has not registered and does not intend to register under the U.S. Investment Company Act of 1940 ("**Investment Company Act**"). Accordingly, the Equity Shares are being offered and sold (i) to persons in the United States or to, or for the account or benefit of, U.S. persons, in each case that are both "qualified institutional buyers" as defined in Rule 144A under the U.S. Securities Act and "qualified purchasers" as defined under the Investment Company Act in transactions exempt from or not subject to the registration requirements of the U.S. Securities Act and in reliance on Section 3(c)(7) of the Investment Company Act and (ii) outside the United States to non-U.S. persons in offshore transactions in reliance on Regulation S under the U.S. Securities Act and the applicable laws of the jurisdictions where such offers and sales are made. There will be no public offering in the United States.

For **Meesho Limited**
On behalf of the Board of Directors
Sd/-
Rahul Bhardwaj
Company Secretary and Compliance Officer

Place: Bengaluru Karnataka
Date: July 3, 2025

Adfactors 231/25

THIS IS A PUBLIC ANNOUNCEMENT FOR INFORMATION PURPOSES ONLY AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE TO SECURITIES NOR IS IT A PROSPECTUS ANNOUNCEMENT. NOT FOR RELEASE, PUBLICATION OR DISTRIBUTION, DIRECTLY OR INDIRECTLY, OUTSIDE INDIA.
INITIAL PUBLIC OFFERING OF EQUITY SHARES ON THE MAIN BOARD OF THE BSE LIMITED (**"BSE"**) AND "NATIONAL STOCK EXCHANGE OF INDIA LIMITED (**"NSE"**, AND TOGETHER WITH BSE, THE **"STOCK EXCHANGES"**) IN COMPLIANCE WITH CHAPTER II OF THE SECURITIES AND EXCHANGE BOARD OF INDIA. (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED (**"SEBI ICDR REGULATIONS"**)

PUBLIC ANNOUNCEMENT

(Please scan this QR code to view the DRHP)

BRIGADE

BRIGADE HOTEL VENTURES LIMITED

Our Company was incorporated as 'Brigade Hotel Ventures Limited' at Bengaluru, Karnataka as a public limited company under the Companies Act, 2013, and a certificate of incorporation was granted by the Deputy Registrar of Companies, Central Registration Centre, on behalf of the jurisdictional Registrar of Companies on August 24, 2016. For further details, see "History and Certain Corporate Matters" beginning on page 195 of the Draft Red Herring Prospectus dated October 30, 2024 ("**DRHP**").
Registered and Corporate Office: 29th & 30th Floor, World Trade Center, Brigade Gateway Campus, 26/1, Dr. Rajkumar Road, Malleswaram-Rajajinagar, Bengaluru - 560 055, Karnataka, India
Tel: +91 80 4137 9200; **Website:** https://bhvl.in; **Contact person:** Akanksha Bijawat, Company Secretary and Compliance Officer; **E-mail:** investors@bhvl.in
Corporate Identity Number: U74999KA2016PLC095986

THE PROMOTER OF OUR COMPANY: BRIGADE ENTERPRISES LIMITED

NOTICE TO INVESTORS ("NOTICE")

INITIAL PUBLIC OFFER OF UP TO [●] EQUITY SHARES OF FACE VALUE OF ₹10 EACH ("EQUITY SHARES") OF BRIGADE HOTEL VENTURES LIMITED ("COMPANY" OR "ISSUE") FOR CASH AT A PRICE OF ₹[●] PER EQUITY SHARE (INCLUDING A SHARE PREMIUM OF ₹[●] PER EQUITY SHARE) ("ISSUE PRICE") AGGREGATING UP TO ₹ 9,000.00 MILLION (THE "ISSUE") COMPRISING A FRESH ISSUE OF UP TO [●] EQUITY SHARES AGGREGATING UP TO ₹ 9,000.00 MILLION* (THE "FRESH ISSUE"). THIS ISSUE INCLUDES A RESERVATION OF UP TO [●] EQUITY SHARES OF FACE VALUE OF ₹10 EACH AGGREGATING UP TO ₹[●] MILLION FOR SUBSCRIPTION BY ELIGIBLE EMPLOYEES AND A RESERVATION OF UP TO [●] EQUITY SHARES OF FACE VALUE OF ₹10 EACH AGGREGATING UP TO ₹[●] MILLION, FOR SUBSCRIPTION BY BEL SHAREHOLDERS (AS DEFINED IN THE DRHP)

The pre-IPO placement ("Pre-IPO Placement**") by way of private placement was undertaken by our Company, in consultation with the BRLMs, for an amount aggregating up to ₹1,260.00 million. Accordingly, the size of the Fresh Issue has been reduced by ₹ 1,260.00 million and the revised size of the Fresh Issue aggregates up to ₹ 7,740.00 million.*

In relation to the draft red herring prospectus dated October 30, 2024 ("**DRHP**") filed with Securities and Exchange Board of India and Stock Exchanges, investors should note the following:

1) As disclosed in the cover page and the relevant sections of the DRHP, our Company was considering a Pre-IPO Placement of such number of Equity Shares aggregating up to ₹ 1,800.00 million, at its discretion, prior to filing of the Red Herring Prospectus with the RoC. Pursuant to the resolution of the Board and Shareholders, each dated July 2 2025, respectively, and in accordance with the investment agreement dated July 2, 2025 ("**Investment Agreement**") executed amongst 360 ONE Alternates Asset Management Limited ("**360 ONE**"), Brigade Enterprises Limited (our Promoter) and our Company, the Pre-IPO Placement of 14,000,000 Equity Shares for a price of ₹ 90.00 per Equity Share (including a share premium of ₹ 80.00 per Equity Share) aggregating to ₹ 1,260.00 million was approved. Further, pursuant to a deed of accession dated July 3, 2025 ("**DoA**") executed by the Subscribers *(as defined hereinafter)*, being the acceding parties, the Subscribers became bound by the terms and conditions of the Investment Agreement.
2) Thereafter, our Committee of Directors, pursuant to its resolution dated July 3, 2025, has allotted the Equity Shares to the allottees mentioned below (the "**Subscribers**"), in accordance with the Investment Agreement, read with the DoA, details of which are included below:

Sr No	Date of allotment	Name of the allottees	Number of Equity Shares allotted	Issue Price per Equity Share (in ₹)	Face Value per Equity Share (in ₹)	Premium per Equity Share (in ₹)	Amount (in ₹)	Percentage of pre Issue Equity Share Capital (in %)
1.	July 3, 2025	360 ONE Special Opportunities Fund – Series 9	4,444,444	90	10	80	399,999,960	1.50
2.		360 ONE Special Opportunities Fund – Series 10	1,111,111	90	10	80	99,999,990	0.38
3.		360 ONE Special Opportunities Fund – Series 11	1,555,556	90	10	80	140,000,040	0.53
4.		360 ONE Special Opportunities Fund – Series 12	4,000,000	90	10	80	360,000,000	1.35
5.		360 ONE Special Opportunities Fund – Series 13	1,555,556	90	10	80	140,000,040	0.53
6.		360 ONE Large Value Fund – Series 2	1,333,333	90	10	80	119,999,970	0.45
		Total	**14,000,000**				**1,260,000,000**	**4.74**

3) Please note that the Equity Shares issued pursuant to the Pre-IPO Placement, being the pre-Issue equity share capital of the Company, shall be subject to lock-in, in accordance with Regulation 17 of the Securities and Exchange Board of India (Issue of Capital and Disclosure Requirements) Regulations, 2018.
4) We hereby confirm that the amount raised through the Issue shall be reduced by ₹ 1,260.00 million pursuant to the Pre-IPO Placement, which is not exceeding ₹ 1,800.00 million, being 20% of the Fresh Issue size as disclosed in the DRHP. Accordingly, the revised Issue size shall be up to ₹ 7,740.00 million, subject to the Issue complying with Rule 19(2)(b) of the Securities Contracts (Regulation) Rules, 1957.
5) We hereby confirm that the Subscribers are not connected to our Company, Promoter, members of the Promoter Group, Directors, Key Managerial Personnel, Subsidiary or Group Companies and the directors or key managerial personnel of such Subsidiary and Group Companies.
6) The Company has appropriately intimated the aforementioned allottees, prior to allotment pursuant to the Pre-IPO Placement that there is no guarantee that the Company may proceed with the Issue or that the Issue may be successful and will result into listing of the Equity Shares on the Stock Exchanges.
7) The above notice is to be read in conjunction with the DRHP. We further undertake to update the disclosures in the RHP and Prospectus to include details of the Pre-IPO Placement undertaken, along with summary of the Investment Agreement and the DoA.

BOOK RUNNING LEAD MANAGERS		REGISTRAR TO THE ISSUE
JM FINANCIAL	ICICI Securities	KFINTECH
JM Financial Limited 7th Floor, Cnergy, Appasaheb Marathe Marg, Prabhadevi, Mumbai - 400 025, Maharashtra, India **Tel:** +91 22 6630 3030 **E-mail:** bvhl.ipo@jmfl.com **Investor Grievance E-mail:** grievance.ibd@jmfl.com **Website:** www.jmfl.com **Contact Person:** Prachee Dhuri **SEBI Registration No.:** INM000010361	**ICICI Securities Limited** ICICI Venture House, Appasaheb Marathe Marg, Prabhadevi, Mumbai - 400 025, Maharashtra, India **Tel:** +91 22 6807 7100 **E-mail:** brigade.ipo@icicisecurities.com **Investor Grievance E-mail:** customercare@icicisecurities.com **Website:** www.icicisecurities.com **Contact Person:** Kishan Rastogi/ Nikita Chirania **SEBI Registration No.:** INM000011179	**KFin Technologies Limited** Selenium Tower B, Plot 31-32, Gachibowli, Financial District, Nanakramguda, Hyderabad - 500 032, Telangana, India **Tel.:** +91 40 6716 2222/180 0309 4001 **E-mail:** bhvl.ipo@kfintech.com **Website:** www.kfintech.com **Investor Grievance E-mail:** einward.ris@kfintech.com **Contact Person:** M. Murali Krishna **SEBI registration number:** INR000000221

All capitalized terms used herein and not specifically defined shall have the same meaning as ascribed to them in the DRHP.

For **BRIGADE HOTEL VENTURES LIMITED**
On behalf of the Board of Directors
Sd/-
Nirupa Shankar
Managing Director

Place: Bengaluru, Karnataka
Date: July 3, 2025

BRIGADE HOTEL VENTURES LIMITED is proposing, subject to applicable statutory and regulatory requirements, receipt of requisite approvals, market conditions and other considerations, to make an initial public offering of its Equity Shares and filed the DRHP with SEBI and the Stock Exchanges on October 30, 2024. The DRHP is available on the website of SEBI at www.sebi.gov.in, as well as on the websites of the Stock Exchanges i.e. BSE and NSE at www.bseindia.com and www.nseindia.com, respectively, on the website of the Company at https://bhvl.in and on the websites of the BRLMs, i.e. JM Financial Limited and ICICI Securities Limited at www.jmfl.com and www.icicisecurities.com, respectively. Any potential investors should note that investment in equity shares involves a high degree of risk and for details relating to such risk, see *'Risk Factors'* section of the RHP, when filed. Potential investors should not rely on the DRHP filed with SEBI and the Stock Exchanges, and should instead rely on the their own examination of our Company and the Issue, including the risks involved, for making any investment decision.

This announcement does not constitute an invitation or offer of securities for sale in any jurisdiction, including India. The Equity Shares offered in the Issue have not been and will not be registered under the U.S. Securities Act of 1933, as amended ("**U.S. Securities Act**"), or any state law of the United States and, unless so registered, may not be offered or sold within the United States, except pursuant to an exemption from, or in a transaction not subject to, the registration requirements of the U.S. Securities Act and applicable state securities laws. Accordingly, such Equity Shares are being offered and sold outside of the United States in offshore transactions in reliance on Regulation S under the U.S. Securities Act and the applicable laws of the jurisdiction where those offers and sales occur.

Adfactors 232/25

● ದೇಶದ ದಕ್ಷಿಣದ ಹಲವೆಡೆ ಇವೆ ಸುರಕ್ಷಿತ ಕಚ್ಚಾತೈಲ ಸಂಗ್ರಹಾಗಾರ
● ದೇಶಾದ್ಯಂತ ಸರಕಾರಿ ಕಂಪನಿ ಕಚ್ಚಾತೈಲ ಶುದ್ಧೀಕರಣ ಘಟಕ ಸರಣಿ

ಕಚ್ಚಾತೈಲ ಭಾರತಕ್ಕಿಲ್ಲ ಚಿಂತೆ



ಬಿ.ವಿ.ಮಹೇಶ್ ಚಂದ್ರ

ವಿಶ್ವದಲ್ಲೇ ಎಲ್ಲೇ ಯುದ್ಧವಾಗಲೀ, ಯಾವುದೇ ದೇಶಗಳ ನಡುವೆ ಸಮರ ಶುರುವಾಗಲೀ ತೈಲೋತ್ಪನ್ನ ದೇಶಗಳನ್ನು ಹೊರತುಪಡಿಸಿ ಉಳಿದೆಲ್ಲಾ ದೇಶಗಳಿಗೂ ಆತಂಕ ಶುರುವಾಗುತ್ತದೆ. ಯುದ್ಧದ ಕಾರಣದಿಂದ ಕಚ್ಚಾತೈಲ ಸರಬರಾಜಿನ ಮೇಲೆ ಮೊದಲು ಹೊಡೆತ ಬೀಳುತ್ತದೆ. ಹಾಗಾಗಿಯೇ ತೈಲೋತ್ಪನ್ನಗಳಿಗಾಗಿ ಬೇರೆ ದೇಶಗಳನ್ನು ಅವಲಂಬಿಸಿರುವ ದೇಶಗಳಿಗೆ ಯುದ್ಧ ಸುದ್ದಿ ಹೊರಹೊಮ್ಮುತ್ತಲೇ ಚಿಂತೆ ಶುರುವಾಗುತ್ತದೆ.

ಹಾಗಾಗಿಯೇ ಭಾರತ ಮುಂಜಾಗರೂಕತಾ ಕ್ರಮಗಳನ್ನು ಕೈಗೊಂಡಿದೆ. ಯುದ್ಧ, ಜಾಗತಿಕ ರಾಜಕೀಯ ಸಂಘರ್ಷ, ಪ್ರಾಕೃತಿಕ ವಿಕೋಪ ಮೊದಲಾದ ಸಂದರ್ಭಗಳಲ್ಲಿ ಕಚ್ಚಾತೈಲದ ಪೂರೈಕೆ ಸ್ಥಗಿತಗೊಂಡರೆ ಕಷ್ಟ ಎಂಬ ಕಾರಣಕ್ಕೇ ನೆಲದಾಳದಡಿ ಬೃಹತ್ ಕಚ್ಚಾತೈಲ ಸಂಗ್ರಹಾಗಾರಗಳನ್ನು ನಿರ್ಮಿಸುವುದಕ್ಕೆ ಮೊದಲಿಟ್ಟಿದೆ. ಈಗಾಗಲೇ ದೇಶದಲ್ಲಿ 3 ಬೃಹತ್ ಪ್ರಮಾಣದ ಕಚ್ಚಾತೈಲ ಸಂಗ್ರಹಾಗಾರಗಳಿವೆ. ಹೊಸದಾಗಿ ಇನ್ನೂ ಎರಡು ಬೃಹತ್ ತೈಲ ಸಂಗ್ರಹಾಗಾರಗಳು ನಿರ್ಮಾಣ ಹಂತದಲ್ಲಿವೆ. ಈಗ ಕಾರ್ಯನಿರ್ವಹಿಸುತ್ತಿರುವ 3 ತೈಲ ಸಂಗ್ರಹಾಗಾರಗಳಿಂದ ಒಟ್ಟು 53.30 ಲಕ್ಷ ಮೆಟ್ರಿಕ್ ಟನ್ ಕಚ್ಚಾತೈಲ ಸಂಗ್ರಹಿಸಲು ಸಾಧ್ಯವಾಗಿದೆ. ಅಲ್ಲದೇ, ಒಟ್ಟು 65 ಲಕ್ಷ ಮೆಟ್ರಿಕ್ ಟನ್ ಸಾಮರ್ಥ್ಯದ 2 ಹೊಸ ಘಟಕಗಳ ನಿರ್ಮಾಣ ಕಾರ್ಯ ಪೂರ್ಣಗೊಂಡ ಬಳಿಕ ತುರ್ತು ಸಂದರ್ಭದ ಬಳಕೆಗಾಗಿ ಮೀಸಲಿಡಲಿರುವ ಕಚ್ಚಾತೈಲ ಸಂಗ್ರಹದ ಒಟ್ಟು ಪ್ರಮಾಣ 1.18 ಕೋಟಿ ಟನ್‌ಗಳಿಗೆ ಏರಿಕೆಯಾಗಲಿದೆ.

ಯುದ್ಧವಾದರೆ ಕಚ್ಚಾತೈಲ ಪೂರೈಕೆಗೆ ಅಡ್ಡಿ

ಇರಾನ್ ಮೇಲೆ ಅಮೆರಿಕ ನಿರ್ಬಂಧ ವಿಧಿಸಿತು. ಪರಿಣಾಮ, ಆಗಿನಿಂದ ಭಾರತ ಇರಾನ್‌ನಿಂದ ಕಚ್ಚಾತೈಲ ಖರೀದಿ ನಿಲ್ಲಿಸಬೇಕಾಯಿತು. ಆದರೆ, ಇರಾಕ್, ಸೌದಿ ಅರೇಬಿಯ, ಕುವೇತ್, ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ)ನಿಂದ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾತೈಲ ಖರೀದಿಸಲು ಆರಂಭಿಸಿತು.

ಇದೇ ಸಂದರ್ಭದಲ್ಲಿ ರಷ್ಯಾ-ಉಕ್ರೇನ್ ನಡುವೆ ಮೂರು ವರ್ಷಗಳ ಹಿಂದೆ ಯುದ್ಧ ಶುರುವಾಯಿತು. ಆಗಲೂ ಅಮೆರಿಕ ರಷ್ಯಾ ವಿರುದ್ಧ ನಿರ್ಬಂಧ ಹೇರಿತು. ಪರಿಣಾಮ ರಷ್ಯಾ ದೇಶದಿಂದ ಕಚ್ಚಾತೈಲ ಮತ್ತು ನೈಸರ್ಗಿಕ ಅನಿಲವನ್ನು ಅಮೆರಿಕ, ಯೂರೋಪ್ ಖಂಡದ ದೇಶಗಳು ಸೇರಿದಂತೆ ವಿಶ್ವದ ಬಹಳಷ್ಟು ದೇಶಗಳು ರಷ್ಯಾದಿಂದ ಕಚ್ಚಾತೈಲ ಆಮದು ನಿಲ್ಲಿಸಿದವು.

ಆಗ ಕಚ್ಚಾತೈಲ ಮತ್ತು ನೈಸರ್ಗಿಕ ಅನಿಲವನ್ನು ದೀರ್ಘಾವಧಿಗೆ ಸಂಗ್ರಹಿಸಿಟ್ಟುಕೊಳ್ಳಲು ಆಗದ ಕಾರಣ ರಷ್ಯಾ ಅತಿ ಕಡಿಮೆ ಬೆಲೆಗೆ ಕಚ್ಚಾತೈಲ ಮಾರುವುದಾಗಿ ಹೇಳಿತು. ಆದರೂ ಹೆಚ್ಚಿನ ದೇಶಗಳು ರಷ್ಯಾದಿಂದ ತೈಲ ಖರೀದಿಗೆ ಮುಂದಾಗಲಿಲ್ಲ. ಆದರೆ, ಭಾರತ ಮಾತ್ರ ಅಮೆರಿಕದ ನಿರ್ಬಂಧ ಆದೇಶವನ್ನು ಲೆಕ್ಕಿಸದೇ ಪರಮಾಪ್ತ ಮಿತ್ರ ರಾಷ್ಟ್ರವಾದ ರಷ್ಯಾದಿಂದಲೇ ಹೆಚ್ಚಿನ ಪ್ರಮಾಣದ ಕಚ್ಚಾತೈಲ ಖರೀದಿಸಿತು. ಆ ಮೂಲಕ ದಶಕಗಳ ಕಾಲದ ರಷ್ಯಾ ಜತೆಗಿನ ಸ್ನೇಹಕ್ಕೂ ಗೌರವ ನೀಡಿತು, ಕಡಿಮೆ ಬೆಲೆಗೆ ಕಚ್ಚಾತೈಲ ಖರೀದಿಸಿ ಆರ್ಥಿಕವಾಗಿ ಲಾಭವನ್ನೂ ಮಾಡಿಕೊಂಡಿತು.

ಭಾರತದ ಬೃಹತ್ ತೈಲ ಸಂಗ್ರಹಾಗಾರಗಳು 5

ಕಚ್ಚಾತೈಲಕ್ಕೆ ಯಾವುದೇ ಸಂದರ್ಭದಲ್ಲಿಯೂ ದೇಶದಲ್ಲಿ ಕೊರತೆ ಆಗಬಾರದು ಎಂಬ ಮುಂಜಾಗರೂಕತೆಯಿಂದ ಭಾರತ ಸರಕಾರ ಈಗಾಗಲೇ ದೇಶದ ಮೂರು ಕಡೆ ಬೃಹತ್ ಕಚ್ಚಾತೈಲ ಸಂಗ್ರಾಹಾಗಾರಗಳನ್ನು ನಿರ್ಮಿಸಿದೆ. ಆ ಮೂರರಲ್ಲಿ ಎರಡು ಬೃಹತ್ ತೈಲ ಸಂಗ್ರಾಹಾಗಾರಗಳು ಕರ್ನಾಟಕದಲ್ಲಿಯೇ ಇವೆ. ಕರ್ನಾಟಕದ ಮಂಗಳೂರಿನಲ್ಲಿ ಮತ್ತು ಪಕ್ಕದ ಜಿಲ್ಲೆ ಉಡುಪಿಯ ಪಾದೂರಿನಲ್ಲಿ ಬೃಹತ್ ಗಾತ್ರದ ಕಚ್ಚಾತೈಲ ಸಂಗ್ರಹಾಗಾರಗಳನ್ನು ನೆಲೆಗೊಳಿಸಲಾಗಿದೆ. ಮೂರನೆಯ ಬೃಹತ್ ಕಚ್ಚಾತೈಲ ಸಂಗ್ರಹಾಗಾರ ನೆರೆಯ ಆಂಧ್ರಪ್ರದೇಶದಲ್ಲಿದೆ. ಕಡಲತೀರ ವಿಶಾಖಪಟ್ಟಣಂನಲ್ಲಿ ತೈಲ ಸಂಗ್ರಾಹಾಗಾರ ನಿರ್ಮಿಸಲಾಗಿದೆ. ಈ 3 ತೈಲ ಸಂಗ್ರಹಾಗಾರಗಳ ಜತೆಗೆ ಇನ್ನೂ ಎರಡು ಸಂಗ್ರಹಾಗಾರಗಳನ್ನು ಪೂರ್ವ ಮತ್ತು ಪಶ್ಚಿಮ ಕರಾವಳಿ ಪ್ರದೇಶಗಳಲ್ಲಿ ನಿರ್ಮಿಸಲಾಗುತ್ತಿದೆ.

ನಿರ್ಮಾಣ ಹಂತದ ಯೋಜನೆಗಳು

ದೇಶದಲ್ಲಿ ಈಗಾಗಲೇ 3 ಬೃಹತ್ ಕಚ್ಚಾತೈಲ ಸಂಗ್ರಹಾಗಾರಗಳಿವೆ. ಈ ಸಂಖ್ಯೆಯನ್ನು 5ಕ್ಕೆ ಹೆಚ್ಚಿಸಲೆಂದೇ ಪೆಟ್ರೋಲಿಯಂ ಸಚಿವಾಲಯ ಕರ್ನಾಟಕದ ಉಡುಪಿ ಜಿಲ್ಲೆಯ ಪಾದೂರಿನಲ್ಲಿ ಮತ್ತೊಂದು 'ವಿಸ್ತರಣಾ ಘಟಕ'ವನ್ನು ನಿರ್ಮಿಸುತ್ತಿದೆ. ಇನ್ನೊಂದೆಡೆ, ದೇಶದ ಪೂರ್ವದ ಕಡಲು ಬಂಗಾಳ ಕೊಲ್ಲಿಗೆ ಸಮೀಪದಲ್ಲಿ, ಒಡಿಶಾ ರಾಜ್ಯದ ಚಂಡಿಖೋಲ್ ಪ್ರದೇಶದಲ್ಲಿಯೂ ಹೊಸದಾಗಿ ಕಚ್ಚಾತೈಲ ಸಂಗ್ರಹಾಗಾರ ನಿರ್ಮಿಸಲಾಗುತ್ತಿದೆ.

ಕರ್ನಾಟಕವೇ ಪ್ರಮುಖ: ಕಚ್ಚಾತೈಲವನ್ನು ಬೃಹತ್ ಪ್ರಮಾಣದಲ್ಲಿ ಸಂಗ್ರಹಿಸಿ ಇಡಲು ಕರ್ನಾಟಕವೇ ಸೂಕ್ತ ಎಂಬುದನ್ನು ಕಂಡುಕೊಂಡಿರುವ ಕೇಂದ್ರದ ಪೆಟ್ರೋಲಿಯಂ ಸಚಿವಾಲಯ, ಒಟ್ಟು ಮೂರು ಕಚ್ಚಾತೈಲ ಸಂಗ್ರಹಾಗಾರಗಳನ್ನು ಕರ್ನಾಟಕದಲ್ಲಿಯೇ ನಿರ್ಮಿಸಿದೆ. ಉಡುಪಿ ಜಿಲ್ಲೆಯ ಪಾದೂರಿನಲ್ಲಿಯೇ ಮೂರನೇ ಬೃಹತ್ ಕಚ್ಚಾತೈಲ ಸಂಗ್ರಾಹಾಗಾರ ಸಿದ್ಧಗೊಳ್ಳುತ್ತಿದೆ. 'ಪಾದೂರು-2ನೇ ಹಂತ'ದ ಕಚ್ಚಾತೈಲ ಸಂಗ್ರಹಾಗಾರ, ನಿರ್ಮಾಣ ಹಂತದಲ್ಲಿದೆ. ಇದನ್ನು ಈಗಾಗಲೇ ಉಡುಪಿ ಜಿಲ್ಲೆಯಲ್ಲಿರುವ ಪಾದೂರು ಮೊದಲ ಘಟಕದ 'ವಿಸ್ತರಣಾ ಘಟಕ' ಎಂದು ಗುರುತಿಸಲಾಗಿದೆ. ಉಳಿದಂತೆ ಮಂಗಳೂರಿನಲ್ಲೊಂದು ಕಚ್ಚಾತೈಲ ಸಂಗ್ರಹಾಗಾರವಿದೆ.

ಪ್ರಸ್ತುತ ಕಚ್ಚಾತೈಲ ಸಂಗ್ರಹ ಸಾಮರ್ಥ್ಯ 5.33 ಎಂಎಂಟಿ: ಭಾರತದ ಪ್ರಸ್ತುತ ಕಚ್ಚಾತೈಲ ಸಂಗ್ರಹ ಸಾಮರ್ಥ್ಯ ಎಷ್ಟಿದೆ ಎಂದರೆ, 53.30 ಲಕ್ಷ ಮೆಟ್ರಿಕ್ ಟನ್(5.33 ಎಂಎಂಟಿ). ಕರ್ನಾಟಕದ ಮಂಗಳೂರು, ಉಡುಪಿಯ ಪಾದೂರು ಘಟಕ-1 ಹಾಗೂ ಆಂಧ್ರಪ್ರದೇಶದ ವಿಶಾಖಪಟ್ಟಣಂನಲ್ಲಿನ 3 ಬೃಹತ್ ತೈಲ ಸಂಗ್ರಹಾಗಾರಗಳಲ್ಲಿಯೇ 53.30 ಲಕ್ಷ ಮೆಟ್ರಿಕ್ ಟನ್ ತೈಲ ಸಂಗ್ರಹಿಸಲಾಗಿದ್ದು, ಇದನ್ನು ತುರ್ತು ಸಂದರ್ಭದಲ್ಲಿ ಬಳಸಿಕೊಳ್ಳಲಾಗುತ್ತದೆ. 53.30 ಲಕ್ಷ ಮೆಟ್ರಿಕ್ ಟನ್ ಕಚ್ಚಾತೈಲ ಸಂಗ್ರಹವೆಂದರೆ 3.80 ಕೋಟಿ ಬ್ಯಾರೆಲ್ ಕಚ್ಚಾತೈಲಕ್ಕೆ ಸಮನಾಗಿರುತ್ತದೆ.

ಇದಲ್ಲದೇ ಇನ್ನೂ ಎರಡು ಕಚ್ಚಾತೈಲ ಸಂಗ್ರಹಾಗಾರಗಳಿಗೆ 2021ರಲ್ಲಿಯೇ ಕೇಂದ್ರ ಸರಕಾರದ ಅನುಮೋದನೆ ದೊರೆತಿದ್ದು, ಸದ್ಯ ಕರ್ನಾಟಕದ ಉಡುಪಿ ಜಿಲ್ಲೆಯ ಪಾದೂರಿನಲ್ಲಿ ವಿಸ್ತರಣಾ ತೈಲ ಸಂಗ್ರಹಾಗಾರ ಮತ್ತು ಒಡಿಶಾ ರಾಜ್ಯದ ಚಾಂಡಿಖೋಲ್‌ನಲ್ಲಿ ಮತ್ತೊಂದು ಕಚ್ಚಾತೈಲ ಸಂಗ್ರಹಾಗಾರ ನಿರ್ಮಾಣಗೊಳ್ಳುತ್ತಿದೆ.

ಒಡಿಶಾದ ಚಂಡಿಖೋಲ್‌ನಲ್ಲಿ ನಿರ್ಮಾಣಗೊಳ್ಳುತ್ತಿರುವ ಕಚ್ಚಾತೈಲ ಸಂಗ್ರಹಾಗಾರದ ಸಾಮರ್ಥ್ಯ 40 ಲಕ್ಷ ಮೆಟ್ರಿಕ್ ಟನ್‌ಗಳಾಗಿದ್ದರೆ, ಉಡುಪಿಯ ಪಾದೂರಿನ ವಿಸ್ತರಣಾ ತೈಲ ಸಂಗ್ರಹಾಗಾರದ ಸಾಮರ್ಥ್ಯ 25 ಲಕ್ಷ ಮೆಟ್ರಿಕ್ ಟನ್ ಗಳಷ್ಟಿರಲಿದೆ. ಒಟ್ಟು 65 ಲಕ್ಷ ಮೆಟ್ರಿಕ್ ಟನ್ ಗಳಷ್ಟು ತೈಲ ಸಂಗ್ರಹಿಸಿಟ್ಟುಕೊಳ್ಳಬಲ್ಲ ಈ ಎರಡೂ ಹೊಸ ತೈಲ ಸಂಗ್ರಹಾಗಾರಗಳನ್ನು ಪಬ್ಲಿಕ್-ಪ್ರೈವೇಟ್ ಪಾರ್ಟ್‌ನರ್‌ಶಿಪ್ (ಪಿಪಿಪಿ) ಮಾದರಿಯಲ್ಲಿ ನಿರ್ಮಿಸಲಾಗುತ್ತಿದೆ ಎಂದು ಕೇಂದ್ರದ ಪೆಟ್ರೋಲಿಯಂ ಸಚಿವಾಲಯ ತಿಳಿಸಿದೆ. ತೈಲ ಸಂಗ್ರಹಾಗಾರಗಳ ಸಂಖ್ಯೆ 5ಕ್ಕೆ ಏರಿಕೆಯಾದ ಬಳಿಕ ದೇಶದಲ್ಲಿನ ಕಚ್ಚಾತೈಲ ಸಂಗ್ರಹ ಸಾಮರ್ಥ್ಯ, 1.18 ಕೋಟಿ ಮೆಟ್ರಿಕ್ ಟನ್‌ಗಳಿಗೆ ಹೆಚ್ಚಲಿದೆ.

ಯುದ್ಧವಾದರೆ ಕಷ್ಟ ಕಷ್ಟ

ಕಳೆದೊಂದು ದಶಕದಲ್ಲಿ ವಿಶ್ವದ ಒಂದಲ್ಲಾ ಒಂದು ಕಡೆ ಸಂಘರ್ಷ, ಸೇನಾ ಕಾರ್ಯಾಚರಣೆ, ಯುದ್ಧ ನಡೆದೇ ಇದೆ. ವಿಶ್ವದ ವಿವಿಧೆಡೆ ಯುದ್ಧಗಳಾದಾಗಲೆಲ್ಲಾ ಕಚ್ಚಾತೈಲ ಉತ್ಪಾದನೆ, ಸಂಗ್ರಹಣೆ, ಸಾಗಣೆಗೆ ತೊಂದರೆಯಾಗಿದೆ. ಕಚ್ಚಾತೈಲವನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ಭಾರತದಂತಹ ಹಲವು ದೇಶಗಳು ಆ ಸಂದರ್ಭಗಳಲ್ಲೆಲ್ಲಾ ಸಂಕಷ್ಟಕ್ಕೀಡಾಗಿವೆ, ಬಹಳವಾಗಿ ಪರಿತಪಿಸಿವೆ. ಕಚ್ಚಾತೈಲ ಕೊರತೆ ಎದುರಾದರೆ ಕೈಗಾರಿಕೆಗಳ ಕಾರ್ಯಚಟುವಟಿಕೆಗೆ ತೊಡಕಾಗುತ್ತದೆ, ದೇಶದ ಇಡೀ ಸಾರಿಗೆ ಸಂಚಾರ ವ್ಯವಸ್ಥೆಗೆ ಪೆಟ್ಟು ಬೀಳುತ್ತದೆ. ಸರಕು ಸಾಗಣೆ ಸ್ಥಗಿತಗೊಳ್ಳುತ್ತದೆ. ಪರಿಣಾಮ ದೇಶದ ಆರ್ಥಿಕ ಪ್ರಗತಿಗೆ ಹಿನ್ನಡೆಯಾಗುತ್ತದೆ. ಹಾಗಾಗಿಯೇ, ಎಲ್ಲೋ ಯುದ್ಧವಾಗಿ, ಯಾವುದೋ ದೇಶದಲ್ಲಿ ರಾಜಕೀಯ ಸಂಘರ್ಷವಾಗಿ ಅಥವಾ ಕ್ರಾಂತಿ ನಡೆದು ಕಚ್ಚಾತೈಲ ಸಾಗಣೆ ವ್ಯವಸ್ಥೆಗೆ ಅಡ್ಡಿಯಾದರೂ ತೈಲೋತ್ಪನ್ನಗಳಿಗೆ ದೇಶದಲ್ಲಿ ಕೊರತೆಯಾಗದಿರಲಿ ಎಂಬ ದೂರಗಾಮಿ ಆಲೋಚನೆಯಿಂದಲೇ ಭಾರತ ಸರಕಾರ ನೆಲದಡಿ ಬೃಹತ್ ಗಾತ್ರದ ಕಚ್ಚಾತೈಲದ ಸಂಗ್ರಹಾಗಾರಗಳನ್ನು ದೇಶದ ವಿವಿಧೆಡೆ ನಿರ್ಮಿಸಿದೆ. ಈ ತೈಲಾಗಾರಗಳಿಂದ ಭಾರತಕ್ಕೆ ಹಲವು ತಿಂಗಳ ಕಾಲ ಕಚ್ಚಾತೈಲಕ್ಕೆ ಸಮಸ್ಯೆ ಎದುರಾಗದು. ಭಾರತ ತೈಲೋತ್ಪನ್ನಗಳ ಕೊರತೆ ಎದುರಿಸುವುದು ಕೆಲವು ತಿಂಗಳವರೆಗಾದರೂ ತಪ್ಪುತ್ತದೆ. ಅಂತಹ ಮುಂಜಾಗರೂಕತಾ ಕ್ರಮವನ್ನು ಭಾರತ ಸರಕಾರ ಕೈಗೊಂಡು ಜಾಣ್ಮೆ ಪ್ರದರ್ಶಿಸಿದೆ.



ಇತ್ತೀಚಿನ ಸಂಘರ್ಷ-ಯುದ್ಧಗಳು

4 ವರ್ಷಗಳ ಹಿಂದೆ ಅಣ್ವಸ್ತ್ರ ಹೊಂದಲು ಸಿದ್ಧವಾಗಿದ್ದಕ್ಕೆ ಇರಾನ್ ಮೇಲೆ ಅಮೆರಿಕ ನಿರ್ಬಂಧ ಹೇರಿತು. ಅದಾದ ಬಳಿಕ 'ನ್ಯಾಟೊ' ಒಕ್ಕೂಟ ಸೇರಲು ಮುಂದಾದ ಉಕ್ರೇನ್ ದೇಶದ ಮೇಲೆ ರಷ್ಯಾ ಯುದ್ಧ ಸಾರಿತು. 2023ರ ಅಕ್ಟೋಬರ್ 7ರಂದು ಗಾಜಾದಲ್ಲಿನ ಹಮಾಸ್ ಉಗ್ರ ಸಂಘಟನೆಯನ್ನು ಬಗ್ಗುಬಡಿಯಲು ಇಸ್ರೇಲ್ ಸೇನಾ ಕಾರ್ಯಾಚರಣೆ ಶುರುವಿಟ್ಟಿತು. ಪ್ಯಾಲೆಸ್ತೀನ್ ಬೆಂಬಲಕ್ಕೆ ಬಂದ ಇರಾನ್, ಟರ್ಕಿ, ಸಿರಿಯ, ಲೆಬನಾನ್ ಇನ್ನೊಂದೆಡೆ ಯೆಮೆನ್‌ನ ಹೌತಿ ಉಗ್ರ ಸಂಘಟನೆಗಳು ಇಸ್ರೇಲ್ ಮೇಲೆ ದಾಳಿ ಮಾಡಲಾರಂಭಿಸಿದವು. ಆಗ ಗಾಜಾಗಷ್ಟೇ ಸೀಮಿತವಾಗಿದ್ದ ಇಸ್ರೇಲ್‌ನ ಸೇನಾ ಕಾರ್ಯಾಚರಣೆ, ನೆರೆ ಹೊರೆಯ ಇರಾನ್, ಟರ್ಕಿ, ಸಿರಿಯ, ಲೆಬನಾನ್, ಯೆಮೆನ್ ನತ್ತಲೂ ವಿಸ್ತರಿಸಿತು. ಆ ಬಳಿಕ ದೊಡ್ಡ ಯುದ್ಧದ ಸ್ವರೂಪ ಪಡೆದುಕೊಂಡಿತು. ಪರಿಣಾಮ, ಆ ಭಾಗದಲ್ಲಿ ಸರಕು ಸಾಗಣೆ ಹಡಗುಗಳಿಗೆ, ಕಚ್ಚಾತೈಲ ಸಾಗಣೆ ನೌಕೆಗಳಿಗೆ ಸಮುದ್ರ ಸಂಚಾರವೇ ಕಷ್ಟವಾಯಿತು. ಇತ್ತೀಚೆಗೆ ಇರಾನ್ ವಿರುದ್ಧ ಇಸ್ರೇಲ್ ಮುಗಿಬಿದ್ದಿತ್ತು. ಅಮೆರಿಕವೂ ಇಸ್ರೇಲ್‌ಗೆ ಬೆಂಬಲವಾಗಿ ಇರಾನ್‌ನ 3 ಪ್ರಮುಖ ಪರಮಾಣು ಘಟಕಗಳ ಮೇಲೆ ದಾಳಿ ಮಾಡಿತ್ತು. ಇದರಿಂದ ಸಿಟ್ಟಿಗೆದ್ದಿದ್ದ ಇರಾನ್ 'ಹರ್ಮುಝ್ ಜಲಸಂಧಿ'ಯನ್ನು ಬಂದ್ ಮಾಡಿತ್ತು. ಇದರಿಂದ ಮಧ್ಯಪ್ರಾಚ್ಯದಿಂದ ಕಚ್ಚಾತೈಲ ಆಮದು ಮಾಡಿಕೊಳ್ಳುವ ಭಾರತ ಮತ್ತಿತರ ದೇಶಗಳಿಗೆ ಬಲು ದೊಡ್ಡ ಹೊಡೆತ ಬೀಳಲಿತ್ತು. ಸದ್ಯ ಕದನ ವಿರಾಮ ಇಸ್ರೇಲ್-ಇರಾನ್ ಒಪ್ಪಿಕೊಂಡಿವೆ. ಯುದ್ಧ ಸದ್ಯಕ್ಕೆ ವಿರಾಮ ಪಡೆದಿದೆ. ಹರ್ಮುಝ್ ಜಲಸಂಧಿ ಬಂದ್ ಆಗುವುದು ತಪ್ಪಿದೆ. ಹರ್ಮುಜ್ ಜಲಸಂಧಿಯು ಕಚ್ಚಾತೈಲ ಸಾಗಣೆ ಹಡಗುಗಳಿಗೆ ಬಲು ಮುಖ್ಯವಾದ ಸಮುದ್ರ ಮಾರ್ಗವಾಗಿದೆ. ಕಚ್ಚಾತೈಲ ಹಡಗುಗಳ ಸಂಚಾರ-ಸಾಗಣೆಯ ಇಡೀ ವಿಶ್ವದ ಒಟ್ಟು ವಹಿವಾಟಿನಲ್ಲಿ ಶೇ.20ಕ್ಕೂ ಅಧಿಕ ಪ್ರಮಾಣದ ಕಚ್ಚಾತೈಲ ಸಾಗಣೆ ಈ ಜಲಸಂಧಿಯ ಮೂಲಕವೇ ನಡೆಯುತ್ತದೆ.



ಭಾರತದ 1 ದಿನದ ಕಚ್ಚಾತೈಲ ಬಳಕೆ ಎಷ್ಟು?

- 2025ರ ಮೇ ತಿಂಗಳ ಲೆಕ್ಕದಲ್ಲಿ ಭಾರತದಲ್ಲಿ ಒಂದು ದಿನಕ್ಕೆ ಪೆಟ್ರೋಲ್, ಡೀಸೆಲ್, ವಿಮಾನದ ಜೆಟ್ ಫ್ಯುಯೆಲ್ ಬಳಕೆ ಪ್ರಮಾಣ 37.70 ಲಕ್ಷ ಟನ್ ಗಳಷ್ಟಿದೆ.
- 2025ರ ಮೇ ತಿಂಗಳಲ್ಲಿ ಪೆಟ್ರೋಲ್ ಬಳಕೆ ಪ್ರಮಾಣ 37.70 ಲಕ್ಷ ಟನ್ ಗಳಷ್ಟಿದೆ. 2024ರ ಮೇ ತಿಂಗಳಿಗೆ ಹೋಲಿಸಿದರೆ ಪೆಟ್ರೋಲ್ ಬಳಕೆ ಪ್ರಮಾಣದಲ್ಲಿ ಶೇ.9.60ರಷ್ಟು ಹೆಚ್ಚಳವಾಗಿದೆ.
- 2025ರ ಮೇ ತಿಂಗಳಲ್ಲಿ ಡೀಸೆಲ್ ಬಳಕೆ ಪ್ರಮಾಣ 85.70 ಲಕ್ಷ ಟನ್‌ಗಳಷ್ಟಿದ್ದು, 2024ರ ಮೇ ಮಾಸಕ್ಕೆ ಹೋಲಿಸಿದರೆ ಡೀಸೆಲ್ ಬಳಕೆ ಪ್ರಮಾಣ ವರ್ಷದಲ್ಲಿ ಶೇ.2.10ರಷ್ಟು ಹೆಚ್ಚಳವಾಗಿದೆ.
- ಏರ್ ಟರ್ಬೈನ್ ಫ್ಯುಯೆಲ್ (ಎಟಿಎಫ್) ಬಳಕೆ 2025ರ ಮೇ ಮಾಸದಲ್ಲಿ 7.75 ಲಕ್ಷ ಟನ್‌ಗಳಷ್ಟಿದ್ದು, 2024ರ ಮೇಗೆ ಹೋಲಿಸಿದರೆ ಶೇ.4.10ರಷ್ಟು ಏರಿಕೆಯಾಗಿದೆ.
- ಅಡುಗೆ ಅನಿಲ(ಎಲ್‌ಪಿಜಿ) ಬಳಕೆಯೂ 2025ರ ಮೇ ಮಾಸದಲ್ಲಿ 2.13 ಕೋಟಿ ಟನ್‌ಗೂ ಅಧಿಕ ಪ್ರಮಾಣದಲ್ಲಿದೆ.
- ದೇಶದಲ್ಲಿನ ವಾಹನಗಳ ಸಂಖ್ಯೆ ಹೆಚ್ಚಳ, ಇಂಧನಗಳ ನಿತ್ಯದ ಬಳಕೆ ಪ್ರಮಾಣದಲ್ಲಿ ಹೆಚ್ಚಳ ಹಾಗೂ ಪರಿಷ್ಕರಿಸಿದ ತೈಲೋತ್ಪನ್ನಗಳನ್ನು ವಿವಿಧ ದೇಶಗಳಿಗೆ ರಫ್ತು ಮಾಡುವ ಪ್ರಮಾಣದಲ್ಲಿ ಹೆಚ್ಚಳವಾಗಿರುವುದರಿಂದ ಕಚ್ಚಾತೈಲದ ಬಳಕೆ ಪ್ರಮಾಣದಲ್ಲಿ ಗಣನೀಯ ಹೆಚ್ಚಳ ಕಂಡುಬಂದಿದೆ.

ತೈಲ ಸಂಗ್ರಹಾಗಾರ ನಕ್ಷೆ



▸▸ ಮೃತ ಹಸು, ಎಮ್ಮೆ, ಎತ್ತುಗಳಿಗೆ 15 ಸಾವಿರ ರು. ▸▸ ಕುರಿ-ಮೇಕೆಗಳಿಗೆ 5 ಸಾವಿರದಿಂದ 7500 ರು.
▸▸ ಆರು ತಿಂಗಳ ಕುರಿ - ಮೇಕೆಗಳಿಗೆ 5000 ರು. ▸▸ ಜಾನುವಾರು ಸತ್ತರೆ ಇಲಾಖೆಗೆ ಮಾಹಿತಿ ನೀಡಿ

ಮೃತ ಜಾನುವಾರುಗಳಿಗೆ ಅನುಗ್ರಹ ಆಸರೆ

ಜಿಲ್ಲಾ ನೋಟ

ರಂಗನಾಥ ಕೆ. ಹೊನ್ನಮರಡಿ,ತುಮಕೂರು

ರೈತರು ಕೃಷಿ ಕಾರ್ಯಗಳಿಗೆ, ಹೈನುಗಾರಿಕೆಗೆ ಪೂರಕವಾಗಿ ಸಾಕುವ ಜಾನುವಾರುಗಳಾದ ಕುರಿ, ಮೇಕೆ, ಹಸು, ಎತ್ತು, ಎಮ್ಮೆ, ಹೀಗೆ ರೈತನ ಮಿತ್ರನಂತಿರುವ ಈ ಸಾಕು ಪ್ರಾಣಿಗಳು ಆಕಸ್ಮಿಕವಾಗಿ ಸಾವಿಗೀಡಾದರೆ ಕಳವಳ ಪಡಬೇಕಿಲ್ಲ. ಅಂಥ ನಷ್ಟಕ್ಕೀಡಾದ ರೈತರ ನೆರವಿಗೆ ಬರಲಿದೆ ರಾಜ್ಯ ಸರಕಾರದ 'ಅನುಗ್ರಹ' ಎಂಬ ಯೋಜನೆ. ಹೀಗೆ ಪರಿಹಾರ ನೀಡಿ ಅನ್ನದಾತರಿಗೆ ಆಸರೆಯಾಗುವ ಈ ಯೋಜನೆಯನ್ನ ರಾಜ್ಯ ಪಶುಸಂಗೋಪನ ಇಲಾಖೆ ಅನುಷ್ಠಾನಗೊಳಿಸಿ ನಿರ್ವಹಿಸುತ್ತಿದೆ.

ಪರಿಹಾರ ಧನ : ಜಿಲ್ಲೆಯಲ್ಲಿ 2024 ಏಪ್ರಿಲ್ 1 ರಿಂದ 2025 ಜನವರಿ 20 ರವರೆಗೆ ಆಕಸ್ಮಿಕವಾಗಿ ಮರಣ ಹೊಂದಿದ 13,188 ಕುರಿ, ಮೇಕೆಗಳಿಗೆ ಅನುಗ್ರಹ ಯೋಜನೆಯಡಿಯಲ್ಲಿ ಒಟ್ಟು 3,96,84,000 ಪರಿಹಾರ ಧನ ನೀಡಲಾಗಿದೆ ಹಾಗೂ 2024-25ರಲ್ಲಿ ವಿಮೆ ಮಾಡಿಸದ ಮೃತಪಟ್ಟ 1074 ಹಸು, ಎಮ್ಮೆಗಳಿಗೆ 1,08,72,000 ಪರಿಹಾರ ಧನ ನೀಡಲಾಗಿದೆ.

ವಿಮೆ ಇಲ್ಲದ ಜಾನುವಾರುಗಳ ಆಕಸ್ಮಿಕ ಸಾವಿನಿಂದ ರೈತರು ಅನುಭವಿಸುವ ಆರ್ಥಿಕ ಸಂಕಷ್ಟ ನಿವಾರಣೆಗೆ ಅನುಗ್ರಹ ಯೋಜನೆ ಜಾರಿಗೆ ತರಲಾಗಿದ್ದು, ಇದರಡಿ ನೀಡಲಾಗುತ್ತಿರುವ ಪರಿಹಾರ ಮೊತ್ತವನ್ನು ಹೆಚ್ಚಿಸಲಾಗಿದೆ. ಪರಿಹಾರ ಧನ ನೇರವಾಗಿ ರೈತರ ಖಾತೆಗೆ ಜಮೆಯಾಗುತ್ತದೆ.

ಪರಿಹಾರ ಮೊತ್ತ ಹೆಚ್ಚಳ: ಮೃತಪಟ್ಟ ಹಸು, ಎಮ್ಮೆ ಮತ್ತು ಎತ್ತುಗಳಿಗೆ ಪ್ರಸ್ತುತ ನೀಡಲಾಗುತ್ತಿರುವ ಪರಿಹಾರದ ಮೊತ್ತವನ್ನು 10 ಸಾವಿರದಿಂದ 15 ಸಾವಿರ ರುಪಾಯಿಗಳಿಗೆ, ಕುರಿ-ಮೇಕೆಗಳಿಗೆ ನೀಡುತ್ತಿರುವ 5 ಸಾವಿರದಿಂದ 7500 ರುಪಾಯಿಗೆ ಹೆಚ್ಚಿಸಲಾಗಿದೆ. 3 ರಿಂದ 6 ತಿಂಗಳ ಕುರಿ ಮತ್ತು ಮೇಕೆಗಳಿಗೆ ನೀಡಲಾಗುತ್ತಿರುವ ಮೊತ್ತವನ್ನು 3500 ರು.ಗಳಿಂದ 5000 ರು.ಗಳಿಗೆ ಹೆಚ್ಚಿಸಲಾಗಿದೆ.

ಪಶುವೈದ್ಯರಿಂದ ಪರೀಕ್ಷೆ: ಜಾನುವಾರುಗಳು ಸಾವಿಗೀಡಾದರೆ ಆಯಾ ತಾಲೂಕಿನ ಪಶುಸಂಗೋಪನೆ ಇಲಾಖೆಗೆ ಮಾಹಿತಿ ನೀಡಿದರೇ ಪಶು ವೈದ್ಯರು ಆಗಮಿಸುತ್ತಾರೆ. ಮರಣಿಸಿದ ಜಾನುವಾರುಗಳ ಪರೀಕ್ಷೆ ನಡೆಸುತ್ತಾರೆ. ಶವ ಪರೀಕ್ಷೆ ನಡೆಸಿದ ಪಶುವೈದ್ಯರು ಜಿಪಿಎಸ್ ಫೋಟೋ ಸಮೇತ ದೃಢೀಕರಿಸುತ್ತಾರೆ. ಮರಣಿಸಿದ ಜಾನುವಾರುಗಳ ಭಾವಚಿತ್ರಗಳನ್ನು ಸಂಬಂಧಪಟ್ಟ ಪಶುವೈದ್ಯರು, ಸಹಾಯಕ ನಿರ್ದೇಶಕರು ಪರಿಶೀಲಿಸಿ ದೃಢೀಕರಿಸು ತ್ತಾರೆ. ಹಾಗೂ ಮರಣಿಸಿದ ಕುರಿ, ಮೇಕೆಗಳ ಭಾವಚಿತ್ರಗಳಿಗೆ ಸಂಬಂಧಿಸಿದಂತೆ ಶವ ಪರೀಕ್ಷೆ ನಡೆಸಿದ ಪಶುವೈದ್ಯರೇ ಜವಾಬ್ದಾರರಾಗಿರುತ್ತಾರೆ.

ಇಲಾಖೆಗೆ ರೈತರು ಸಲ್ಲಿಸಲಿ: ಮರಣೋತ್ತರ ವರದಿ, ಫೋಟೋಗಳು, ಫಲಾನುಭವಿ ಅರ್ಜಿ, ಆಧಾರ್ ಲಿಂಕ್ ಆಗಿರುವ ಬ್ಯಾಂಕ್ ಖಾತೆ ಮತ್ತು ಮುಂಗಡ ಹಣ ಸಂದಾಯ ರಶೀದಿಯಲ್ಲಿ ಫಲಾನುಭವಿಗಳ ಸಹಿ, ಪೂರ್ಣ ವಿಳಾಸ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ದೃಢೀಕರಿಸಿ ಪಶು ಸಂಗೋಪನಾ ಇಲಾಖೆಗೆ ರೈತರು ಸಲ್ಲಿಸಬೇಕು.

ಪರಿಹಾರ ವಿಳಂಬ: ಅನುಗ್ರಹ ಯೋಜನೆಯ ಬಗ್ಗೆ ರೈತರಿಗೆ ಇನ್ನು ಸಮರ್ಪಕವಾಗಿ ಮಾಹಿತಿ ತಿಳಿದಿಲ್ಲ. ಆದ್ದರಿಂದ ಪಶು ಸಂಗೋಪನೆ ಇಲಾಖೆ ಹೆಚ್ಚಿನ ರೀತಿಯಲ್ಲಿ ರೈತರಿಗೆ ಅರಿವು ಮೂಡಿಸುವ ಕೆಲಸವನ್ನು ಮಾಡಬೇಕಾಗಿದೆ.

ಮೃತ ಜಾನುವಾರುಗಳಿಗೆ ಪರಿಹಾರ ಧನ ಪಡೆಯಲು ಸೂಕ್ತ ದಾಖಲೆಗಳೊಂದಿಗೆ ಪಶುಸಂಗೋಪನೆ ಇಲಾಖೆಗೆ ಅರ್ಜಿ ಸಲ್ಲಿಸಿದರೆ ಪರಿಹಾರ ನೀಡುವುದು ತಿಂಗಳಾನುಗಟ್ಟಲೆ ತಡವಾಗುತ್ತದೆ ಎಂದು ರೈತರು ಬೇಸರ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿ ತಾಲೂಕುವಾರು 1057 ಮೃತಪಟ್ಟ ರಾಸುಗಳ ಮಾಲೀಕರಿಗೆ ನೀಡಬೇಕಾದ ಅಂದಾಜು 10,4,96,000 ಮೊತ್ತವನ್ನು ಪಶುವೈದ್ಯ ಇಲಾಖೆ ಇದುವರೆಗೂ ಬಾಕಿ ಉಳಿಸಿಕೊಂಡಿದೆ.

ತಾಲೂಕು- ಫಲಾನುಭವಿ ಕುರಿ/ಮೇಕೆ- ಪರಿಹಾರ

ಚಿ ನಾ ಹಳ್ಳಿ-939-1353-6703000
ಗುಬ್ಬಿ-200-271-1075500
ಕೊರಟಗೆರೆ-617-880-4408000
ಕುಣಿಗಲ್-668-765-3651500
ಮಧುಗಿರಿ-531-612-3109500
ಪಾವಗಡ-408-508-2672000
ಶಿರಾ-1553-1767-8406500
ತಿಪಟೂರು-636-704-3495000
ತುಮಕೂರು-427-674-3358500
ತುರುವೇಕೆರೆ-496-5654-2804500
ಒಟ್ಟು-6475-13188-3,96,84,000

ತಾಲೂಕು-ಫಲಾನುಭವಿ -ಮೃತ ರಾಸು-ಪರಿಹಾರ

ಚಿ ನಾ ಹಳ್ಳಿ-292-135-1350000
ಗುಬ್ಬಿ-106-59-585000
ಕೊರಟಗೆರೆ-210-108-1080000
ಕುಣಿಗಲ್-193-105-1052000
ಮಧುಗಿರಿ-286-137-1370000
ಪಾವಗಡ-264-145-1450000
ಶಿರಾ-266-136-1360000
ತಿಪಟೂರು-205-89-875000
ತುಮಕೂರು-184-83-980000
ತುರುವೇಕೆರೆ-125-77-770000
ಒಟ್ಟು-2131-1074-1,08,72,000

ರೈತರು ಸಾಕಿರುವ ಜಾನುವಾರು ಆಕಸ್ಮಿಕವಾಗಿ ಮರಣ ಹೊಂದಿದರೆ ಇಲಾಖೆ ವತಿಯಿಂದ ಅನುಗ್ರಹ ಯೋಜನೆಯಡಿ ಪರಿಹಾರ ಧನ ಪಡೆಯಬಹುದು. ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದ ರೈತರ ಖಾತೆಗೆ ನೇರವಾಗಿ ಪರಿಹಾರ ಧನ ಜಮೆಯಾಗುತ್ತದೆ.

-ಶಿವಪ್ರಸಾದ್, ಜಿಲ್ಲಾ ಉಪ ನಿರ್ದೇಶಕ, ಪಶುಸಂಗೋಪನೆ ಇಲಾಖೆ



▸▸ ಚಿಕ್ಕೋಡಿ, ಗೋಕಾಕ್‌ಗೆ ಹೊಸ ಜಿಲ್ಲೆ ಭಾಗ್ಯ ▸▸ ಬೈಲಹೊಂಗಲ, ಅಥಣಿಗೂ ಸಿಗುವ ಚಾನ್ಸ್
▸▸ ಅಖಂಡ ಜಿಲ್ಲೆಯಲ್ಲಿ ಸಮನ್ವಯತೆ ಕೊರತೆ ▸▸ 15 ತಾಲೂಕುಗಳ ಒಳಗೊಂಡ ದೊಡ್ಡ ಜಿಲ್ಲೆ

ವರ್ಷಾಂತ್ಯಕ್ಕೆ ಬೆಳಗಾವಿ ಜಿಲ್ಲೆ ವಿಭಜನೆ !

ಜಿಲ್ಲಾ ನೋಟ

ವಿನಾಯಕ ಮಠಪತಿ, ಬೆಳಗಾವಿ

ರಾಜ್ಯ ರಾಜಕಾರಣದಲ್ಲಿ ತನ್ನದೇ ಆದ ಪ್ರಾಮುಖ್ಯತೆ ಹೊಂದಿರುವ ಬೆಳಗಾವಿ ಜಿಲ್ಲೆ ವಿಭಜನೆ ಕೂಗು ಆಗಾಗ ಸೌಂಡ್ ಮಾಡಿ ಗದ್ದಲ ಎಬ್ಬಿಸುತ್ತದೆ. ಮತ್ತೆ ತಣ್ಣಗಾಗುತ್ತದೆ. ಆದರೆ ಈ ಬಾರಿ ಮಾತ್ರ ಸಿದ್ದರಾಮಯ್ಯ ಸರಕಾರದ ಇದೇ ಅವಧಿಯ ವರ್ಷದ ಕೊನೆಗೆ ಅಖಂಡ ಬೆಳಗಾವಿ ಜಿಲ್ಲೆ ವಿಭಜಿಸುವ ಐತಿಹಾಸಿಕ ನಿರ್ಧಾರ ಕೈಗೊಳ್ಳುವ ಸಾಧ್ಯತೆ ದಟ್ಟವಾಗಿದೆ..! ಆದರೆ ರಾಜಕೀಯ ಕಾರಣಕ್ಕೆ ಜಿಲ್ಲಾ ವಿಭಜನೆಯಾದರೆ ಮುಂದೆ ಗಡಿ ಸಮಸ್ಯೆ ಉದ್ಭವಿಸಿದ ವೇಳೆ ಸಂಘಟಿತ ಹೋರಾಟ ಕಷ್ಟ ಎಂಬ ಭಯವೂ ಹಲವರನ್ನು ಕಾಡುತ್ತಿದೆ.

ಯಾವುದು ಹೊಸ ಜಿಲ್ಲೆ : ಅಖಂಡ ಬೆಳಗಾವಿ ಜಿಲ್ಲೆ ವಿಭಜಿಸಿ ಚಿಕ್ಕೋಡಿ ಹಾಗೂ ಗೋಕಾಕ್ ಹೊಸ ಜಿಲ್ಲೆ ರಚನೆಗೆ ಸರಕಾರ ಸಿದ್ಧತೆ ನಡೆಸಿದೆ ಎಂದು

ಹೇಳಲಾಗುತ್ತಿದೆ. ಸದ್ಯ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಜಿಲ್ಲಾ ವಿಭಜನೆಗೆ ಉತ್ಸುಕರಾಗಿದ್ದಾರೆ. ಒಂದುವೇಳೆ ಈ ಸರಕಾರದ ಅವಧಿಯಲ್ಲೇ ಈ ನಿರ್ಧಾರವಾದರೆ ದಶಕಗಳ ಕನಸು ನನಸಾಗುತ್ತದೆ.

ಬೈಲಹೊಂಗಲ, ಅಥಣಿ?: ಜಿಲ್ಲಾ ವಿಭಜನೆಯಾದರೆ ಬೈಲಹೊಂಗಲ ಅಥವಾ ಅಥಣಿ ತಾಲೂಕು ಕೇಂದ್ರವನ್ನ ಜಿಲ್ಲೆಯನ್ನಾಗಿ ಮಾಡುವಂತೆ ದಶಕಗಳಿಂದ ಹೋರಾಟ ನಡೆಯುತ್ತಿವೆ. ಒಂದುವೇಳೆ ಸರಕಾರ ಗೋಕಾಕ್ ಹೊಸ ಜಿಲ್ಲೆಯನ್ನಾಗಿ ಘೋಷಣೆ ಮಾಡಿದ್ರೇ ಆದರೆ ಮತ್ತೊಂದು ಸುತ್ತಿನ ರಾಜಕೀಯ ಜಗಳ ಆಗುವುದರಲ್ಲಿ ಸಂಶಯವಿಲ್ಲ. ಈಗಾಗಲೇ ಬೈಲಹೊಂಗಲದಲ್ಲಿ ಉಪ ವಿಭಾಗೀಯ ಮಟ್ಟದ ಕಚೇರಿ ಇದೆ. ಇಂದಲ್ಲ ನಾಳೆ ಜಿಲ್ಲೆ ಆಗುತ್ತದೆ ಎಂಬ ಕನಸಿನಲ್ಲಿ ಜನರಿದ್ದಾರೆ.

ವರ್ಷಾಂತ್ಯಕ್ಕೆ ನಿರ್ಧಾರ : ಕೇಂದ್ರ ಸರಕಾರ 2026 ರಲ್ಲಿ ಜಾತಿ ಗಣತಿ ಮಾಡುವ ಉದ್ದೇಶದಿಂದ 2025ರ ಡಿಸೆಂಬರ್ ಒಳಗಾಗಿ ಜಿಲ್ಲಾ ವಿಭಜನೆಯನ್ನು ರಾಜ್ಯ ಸರಕಾರಗಳು ಪೂರ್ಣಗೊಳಿಸುವಂತೆ ತಿಳಿಸಿದೆ. ಈ ಹೊತ್ತಿಗೆ ಬೆಳಗಾವಿ ಚಳಿಗಾಲ ಅಧಿವೇಶನ ವೇಳೆ ಬೆಳಗಾವಿ ಜಿಲ್ಲೆ ವಿಭಜಿಸಿ ಹೊಸ ಜಿಲ್ಲೆಗಳನ್ನು ರಚಿಸುವ ಸಾಧ್ಯತೆ ದಟ್ಟವಾಗಿದೆ. ಈಗಾಗಲೇ ಕಂದಾಯ, ಮತ್ತಿತರ ಇಲಾಖೆಗಳು ಪೂರಕ ದತ್ತಾಂಶ ಸಂಗ್ರಹ ಮಾಡುತ್ತಿವೆ ಎಂದು ಹೇಳಲಾಗುತ್ತಿದೆ.

ಜಿಲ್ಲೆ : ಬೆಳಗಾವಿ
ಒಟ್ಟು ತಾಲೂಕು - 15
ವಿಧಾನಸಭಾ ಕ್ಷೇತ್ರ : 18
ಲೋಕಸಭಾ ಕ್ಷೇತ್ರ : 03 (ಉತ್ತರ ಕನ್ನಡ)
ಕಂದಾಯ ವಿಭಾಗ : 03
ಪೊಲೀಸ್ : ಕಮಿಷನರೇಟ್ ಹಾಗೂ ಜಿಲ್ಲಾ ಪೊಲೀಸ್

ಬೆಳಗಾವಿ ಹಳೆ ವಿಭಜನೆ : ಈ ಹಿಂದೆಯೂ ಬೆಳಗಾವಿ ಜಿಲ್ಲೆಯನ್ನು ವಿಭಜಿಸಿದ್ದಲ್ಲದೆ ನಂತರ ವಾಪಸ್ ಪಡೆಯಲಾಯಿತು. 1997 ಆಗಸ್ಟ್ 22 ರಲ್ಲಿ ಅಂದಿನ ಮುಖ್ಯಮಂತ್ರಿ ಜೆ. ಹೆಚ್ ಪಟೇಲ್ ಅವರ ಆಡಳಿತಾವಧಿಯಲ್ಲಿ ಬೆಳಗಾವಿ ಜಿಲ್ಲೆಯನ್ನು ಮೂರು ಭಾಗ ಮಾಡಲಾಗಿತ್ತು. ಗೋಕಾಕ್ ಹಾಗೂ ಚಿಕ್ಕೋಡಿ ಹೊಸ ಜಿಲ್ಲೆಗಳಾಗಿ ರಚಿಸಿ ಸಚಿವ ಸಂಪುಟದಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು. ನಂತರ ಜಿಲ್ಲಾ ರಾಜಕೀಯ ನಾಯಕರ ನಡುವಿನ ಕಿತ್ತಾಟದಲ್ಲಿ ವಿಭಜನೆ ನಿರ್ಧಾರದಿಂದ ಸಿಎಂ ಜೆ.ಹೆಚ್ ಪಟೇಲ್ ಹಿಂದೆ ಸರಿದಿದ್ದರು.



ತಿಂಗಳಗಟ್ಟಲೇ ಹೋರಾಟ : ಜೆ. ಎಚ್ ಪಟೇಲರು 1997ರಲ್ಲಿ ಬೆಳಗಾವಿ ಜಿಲ್ಲೆ ವಿಭಜಿಸಿ ಮೂರು ಜಿಲ್ಲೆಗಳಾಗಿಸುವ ನಿರ್ಧಾರಕ್ಕೆ ಸಾಕಷ್ಟು ಆಕ್ರೋಶ ವ್ಯಕ್ತವಾಗಿತ್ತು. ಬೈಲಹೊಂಗಲ, ರಾಮದುರ್ಗ ಹಾಗೂ ಖಾನಾಪುರ ಜನ ಸೇರಿದಂತೆ ಹಲವಾರು ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದವು. ಅಷ್ಟೇ ಅಲ್ಲದೆ ಮಾಜಿ ಸಿಎಂ ರಾಮಕೃಷ್ಣ ಹೆಗಡೆ ಅವರೂ ಬೆಳಗಾವಿ ಜಿಲ್ಲಾ ವಿಭಜನೆ ವಿರೋಧಿ ಹೋರಾಟಕ್ಕೆ ಕೈಜೋಡಿಸಿದ್ದರ ಪರಿಣಾಮ ಬೇರೆ ದಾರಿಯಿಲ್ಲದೆ ಜಿಲ್ಲಾ ವಿಭಜನೆ ನಿರ್ಧಾರದಿಂದ ಹಿಂದೆ ಸರಿಯುವಂತಾಯಿತು.

ಬೆಳಗಾವಿ ಜಿಲ್ಲೆ ಆಡಳಿತಾತ್ಮಕ ದೃಷ್ಟಿಯಿಂದ ನಲುಗಿ ಹೋಗಿದೆ. ಅಧಿಕಾರಿಗಳಿಗೆ ದೊಡ್ಡ ಜಿಲ್ಲೆಯಾಗಿರುವುದರಿಂದ ಭೌಗೋಳಿಕವಾಗಿ ಸಾರ್ವಜನಿಕರ ಕೆಲಸ ಮಾಡಿಕೊಡಲು ಸಾಧ್ಯವಾಗುತ್ತಿಲ್ಲ. ರಾಜ್ಯ ಸರಕಾರ ಜಿಲ್ಲೆಯ ಜನರ ಮೂಗಿಗೆ ತುಪ್ಪ ಹಚ್ಚುವ ಕೆಲಸ ಬಿಟ್ಟು ಡಿಸೆಂಬರ್ 2025 ರ ಒಳಗಾಗಿ ಅಖಂಡ ಜಿಲ್ಲೆ ವಿಭಜನೆ ಮಾಡಿ ಹೊಸ ಜಿಲ್ಲೆಯನ್ನು ಘೋಷಣೆ ಮಾಡಬೇಕು.

-ಈರಣ್ಣ ಕಡಾಡಿ, ರಾಜ್ಯಸಭಾ ಸದಸ್ಯ

ಸಮನ್ವಯತೆ ಕೊರತೆ : ಒಟ್ಟು 18 ವಿಧಾನಸಭಾ ಕ್ಷೇತ್ರ ಹಾಗೂ ಮೂರು ಲೋಕಸಭಾ ಕ್ಷೇತ್ರ ಹೊಂದಿರುವ ಬೆಳಗಾವಿ ಜಿಲ್ಲೆ ರಾಜ್ಯದಲ್ಲೇ ಅತ್ಯಂತ ದೊಡ್ಡ ಜಿಲ್ಲೆ ಎಂಬ ಖ್ಯಾತಿ ಹೊಂದಿದೆ. ವೈಜ್ಞಾನಿಕವಾಗಿ ನೋಡಿದರೆ ಅಖಂಡ ಜಿಲ್ಲೆಗೆ ಸರಕಾರದಿಂದ ಎಲ್ಲಾ ಜಿಲ್ಲೆಗಳಿಗೂ ಸಿಗುವಷ್ಟೇ ಅನುದಾನ ಬೆಳಗಾವಿಗೆ ಸಿಗುತ್ತದೆ. ಇದರಿಂದ ಜಿಲ್ಲೆಯ ಅನೇಕ ತಾಲೂಕು ಕೇಂದ್ರಗಳು ಅಭಿವೃದ್ಧಿಯಲ್ಲಿ ಸೊರಗಿವೆ. ಈ ಕಾರಣಕ್ಕಾಗಿ ಜಿಲ್ಲೆಯ ಎಲ್ಲಾ ನಾಯಕರನ್ನು ವಿಶ್ವಾಸಕ್ಕೆ ಪಡೆದು ಸಿಎಂ ಸಿದ್ದರಾಮಯ್ಯ ಜಿಲ್ಲಾ ವಿಭಜನೆ ನಿರ್ಧಾರ ಕೈಗೊಂಡರೆ ಇದು ಖಂಡಿತವಾಗಿಯೂ ಒಂದು ಚಾರಿತ್ರಿಕ ನಿರ್ಣಯವಾಗುತ್ತದೆ. ಇಲ್ಲವಾದರೆ ರಾಜಕೀಯ ನಾಯಕರ ಲಾಭಕ್ಕೆ ಬೇಕಾದಂತೆ ಈ ತೀರ್ಮಾನ ಬಳಕೆಯಾಗುವುದರಲ್ಲಿ ಸಂಶಯವಿಲ್ಲ...!

ಶಿಸ್ತಿನ ಕೆಲಸಕ್ಕೆ ಇನ್ನೊಂದು ಹೆಸರು ಬಿ.ಆರ್. ಹನುಮೇಗೌಡ

ಸರಕಾರದ ವಿವಿಧ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಾ, ಜನರಿಗೆ ಅನುಕೂಲವಾಗುವ ಕಾರ್ಯಗಳನ್ನು ಮಾಡಬಹುದು ಎಂಬುದಕ್ಕೆ ಹನುಮೇಗೌಡ ಬಿ.ಆರ್. ಅವರು ಒಂದು ಉದಾಹರಣೆ. ಇವರ ದಕ್ಷ ಸೇವೆಯನ್ನು ಗುರುತಿಸಿ, ಕರ್ನಾಟಕ ಸರಕಾರವು ಇವರನ್ನು 'ಅತ್ಯುತ್ತಮ ಕಂದಾಯ ಅಧಿಕಾರಿ' ಎಂದು ಗುರುತಿಸಿದೆ. ಇತರ ಹಲವು ಸಂಘ ಸಂಸ್ಥೆಗಳು ಇವರ ದಕ್ಷ ಸೇವೆಯನ್ನು ಗುರುತಿಸಿ ಗೌರವಿಸಿದೆ. ಇತ್ತೀಚೆಗೆ, ಜಾರ್ಜಿಯಾ ದೇಶದ ಟಿಬಿಸಿಲಿಯಲ್ಲಿ ನಡೆದ ಸಮಾರಂಭದಲ್ಲಿ, ಇವರು 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ'ಯನ್ನು ಹಲವು ಗಣ್ಯರ ಸಮ್ಮುಖದಲ್ಲಿ ಸ್ವೀಕರಿಸಿದರು.

ಹನುಮೇಗೌಡ ಬಿ.ಆರ್. ಅವರು ಮೂಲತಃ ಕೃಷಿಕ ಕುಟುಂಬದಲ್ಲಿ ಜನಿಸಿದ್ದು, ಗ್ರಾಮೀಣ ಬದುಕಿನ ಸೊಗಡಿನ ಜೊತೆಗೆ ಕೃಷಿ ಜೀವನದ ಕಷ್ಟ-ಸುಖಗಳನ್ನು ಅನುಭವಿಸಿ ಬೆಳೆದವರು ಹನುಮೇಗೌಡ ಬಿ. ಆರ್. ಇವರು. ಇವರಿಗೆ ನಮ್ಮ ರಾಜ್ಯದ ಕೃಷಿಕರ ಎಲ್ಲಾ ಸಮಸ್ಯೆಗಳನ್ನು ಅರಿತಿದ್ದು, ಕೃಷಿಕರ ಬದುಕಿನ ಅಭಿವೃದ್ಧಿಗಾಗಿ, ತಮ್ಮ ಹುದ್ದೆಯಲ್ಲಿದ್ದುಕೊಂಡು ಶ್ರಮಿಸುತ್ತಿದ್ದಾರೆ. ಇವರ ತುಮಕೂರು ತಾಲ್ಲೂಕು, ಗೂಳೂರು ಹೋಬಳಿ, ಸಾಸಲು ಅಂಚೆಯ ಬಳಿಯ ಬಸವೇಗೌಡನಪಾಳ್ಯ ಗ್ರಾಮದಲ್ಲಿ ರಾಮ ಚಂದ್ರಯ್ಯ ಮತ್ತು ಮೀನಾಕ್ಷಮ್ಮ ದಂಪತಿಗೆ ಕಿರಿಯ ಮಗನಾಗಿ ಜನಿಸಿ ದರು. ತಮ್ಮ ಸ್ವಂತ ಊರಾದ ಬಸವೇ ಗೌಡನಪಾಳ್ಯದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದು, ನಂತರ ತುಮಕೂರು ತಾಲ್ಲೂಕಿನ ಗೂಳೂರು ಹೋಬಳಿಯ ಹೊನ್ನುಡಿಕೆ ಗ್ರಾಮದ ಸರ್ಕಾರಿ

ಹಿರಿಯ ಪ್ರಾಥಮಿಕ ಶಾಲೆ ಯಲ್ಲಿ ಮುಂದಿನ ಶಿಕ್ಷಣವನ್ನು ಮುಗಿಸಿದರು. ಸದ್ಯ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರದಲ್ಲಿ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಮಾಣಿಕ ಹಾಗೂ ದುಡಿಮೆಗಾರ ಅಧಿಕಾರಿಯಾಗಿದ್ದಾರೆ.

ಇಂಜಿನಿಯರಿಂಗ್ ವಿದ್ಯಾಭ್ಯಾಸ

ತಮ್ಮ ಬಾಲ್ಯದ ವಿದ್ಯಾಭ್ಯಾಸದಲ್ಲಿ ಸದಾ ಉತ್ತೇಜನ ಮತ್ತು ಪರಿಶ್ರಮ ದೊಂದಿಗೆ ಮುಂದುವರೆದ ಹನುಮೇ ಗೌಡ ಬಿ.ಆರ್., ನಂತರ ಪದವಿ ಪೂರ್ವ ಶಿಕ್ಷಣ ವನ್ನು ತುಮಕೂರಿನ ಪ್ರಸಿದ್ಧ ಸಿದ್ದಗಂಗಾ ಬಾಲಕರ ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ಯಶಸ್ವಿ ಯಾಗಿ ಪೂರ್ಣಗೊಳಿಸಿದರು. ತದನಂತರ ಇವರಿಗೆ ತಾಂತ್ರಿಕ ಶಿಕ್ಷಣದ ಮೇಲಿನ ಆಸಕ್ತಿ ಬೆಳೆದು, ಬೆಂಗಳೂರಿನ ಆರ್.ವಿ. ಕಾಲೇಜಿನಲ್ಲಿ ಸಿವಿಲ್ ಇಂಜಿನಿಯರಿಂಗ್ ಪದವಿ ಗಾಗಿ ಪ್ರವೇಶ ಪಡೆದರು. ಇದೇ ಸಂದರ್ಭ ವಿಜಯ ನಗರದ ಆದಿಚುಂಚನ ಗಿರಿ ಶಾಖಾಮಠದಲ್ಲಿ ವಾಸ್ತವ್ಯ ಮಾಡಿಕೊಂಡು ಇಂಜಿನಿ ಯರಿಂಗ್ ಅಧ್ಯಯನ ನಡೆಸಿ, 2011ನೇ ಸಾಲಿನಲ್ಲಿ ಸಿವಿಲ್ ಇಂಜಿನಿಯರಿಂಗ್ ಪದವಿಯನ್ನು ಪಡೆದುಕೊಂಡರು.

ಸರ್ಕಾರಿ ಸೇವೆಯ ಪ್ರಾರಂಭ

ಹನುಮೇಗೌಡ ಬಿ.ಆರ್. ಅವರು ಸಿವಿಲ್ ಇಂಜಿನಿಯರಿಂಗ್ ಪದವಿಯನ್ನು ಪಡೆದನಂತರ, ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು, 18-06-2012 ರಂದು, ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಭೂದಾಖಲೆಗಳ ಸಹಾಯಕ ನಿರ್ದೇಶಕರಾಗಿ ತಮ್ಮ ಸರ್ಕಾರಿ ಸೇವೆಯನ್ನು ಪ್ರಾರಂಭಿಸಿದರು. ಅಂದಿನಿಂದ ಇಂದಿನವರೆಗೆ ಅವರು ತಮ್ಮ ಕರ್ತವ್ಯವನ್ನು ಶ್ರದ್ಧೆ, ಪರಿಶ್ರಮ ಹಾಗೂ ನಿಷ್ಠೆಯಿಂದ ನಿರ್ವಹಿಸುತ್ತಾ, ವಿವಿಧ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

- ದಿನಾಂಕ: 07-07-2014 ರಿಂದ 14-06-2017 ರವರೆಗೆ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ, ಸಕಲೇಶಪುರ ತಾಲ್ಲೂಕಿನಲ್ಲಿ ಸೇವೆ ಸಲ್ಲಿಸಿದ್ದಾರೆ.
- ನಂತರ ದಿನಾಂಕ: 15-06-2017 ರಿಂದ 04-12-2019 ರವರೆಗೆ ದೊಡ್ಡಬಳ್ಳಾಪುರ ತಾಲೂಕಿನಲ್ಲಿ ದಿನಾಂಕ: 09-12-2019 ರಿಂದ 09-10-2020 ರವರೆಗೆ ತುಮಕೂರು ತಾಲ್ಲೂಕಿನ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆ.
- ದಿನಾಂಕ: 12-11-2020 ರಂದು ಜಿಲ್ಲೆಯ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರ ಹುದ್ದೆಗೆ ಪದೋನ್ನತಿ ಪಡೆದಿದ್ದಾರೆ. ಈ ಹುದ್ದೆಯಲ್ಲಿ ಅವರು:
- ದಿನಾಂಕ: 12-11-2020 ರಿಂದ 21-01-2021 ರವರೆಗೆ ರಾಯಚೂರು ಜಿಲ್ಲೆಯಲ್ಲಿ,
- ದಿನಾಂಕ: 22-01-2021 ರಿಂದ 15-05-2023 ರವರೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸೇವೆ ಸಲ್ಲಿಸಿದ್ದಾರೆ.
- ಪ್ರಸ್ತುತ ಅವರು ದಿನಾಂಕ: 15-05-2023 ರಿಂದ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ತಾಂತ್ರಿಕ ಸಹಾಯಕರು ಹಾಗೂ ಭೂದಾಖಲೆಗಳ ಉಪ ನಿರ್ದೇಶಕರಾಗಿ ತಮ್ಮ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಪ್ರಶಸ್ತಿ ಪುರಸ್ಕಾರಗಳು

ಕರ್ನಾಟಕ ಸರ್ಕಾರ ಇವರ ಸೇವೆಯನ್ನು ಗುರುತಿಸಿ, ಕರ್ನಾಟಕ ನಾಗರಿಕ ಸೇವಾ ವಲಯದ ಅತ್ಯುನ್ನತ ಗೌರವವಾದ ರಾಜ್ಯ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ-2023 ಅನ್ನು ನೀಡಿ ಗೌರವಿಸಿದೆ. ಬೆಂಗ ಳೂರು ಗ್ರಾಮಾಂತರ ಜಿಲ್ಲಾಡಳಿತ ಹಾಗೂ ಕರ್ನಾ ಟಕ ರಾಜ್ಯ ಸರ್ಕಾರಿ ನೌಕರರ ಸಂಘವು 2021-22ನೇ ಸಾಲಿಗೆ 'ಜಿಲ್ಲಾ ಸರ್ವೋತ್ತಮ ಸೇವಾ ಪ್ರಶಸ್ತಿ' ಯನ್ನು ನೀಡಿ ಶ್ಲಾಘಿಸಿದೆ. ಇತ್ತೀಚೆಗೆ ಕರ್ನಾಟಕ ಸರ್ಕಾರದಿಂದ 2024ನೇ ಸಾಲಿಗೆ ನೀಡಿದ ವರ್ಷದ 'ಅತ್ಯುತ್ತಮ ಕಂದಾಯ ಅಧಿಕಾರಿ' ಪ್ರಶಸ್ತಿಯನ್ನೂ ಅವರು ಪಡೆದಿದ್ದಾರೆ. ಇತ್ತೀಚೆಗೆ ಜಾರ್ಜಿಯಾ ದೇಶದದ ಟಿಬಿಲಿಸಿಯಲ್ಲಿ 'ವಿಶ್ವವಾಣಿ' ಸಂಸ್ಥೆಯು ಆಯೋಜಿಸಿದ್ದ 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು. ಈ ಕಾರ್ಯಕ್ರಮವು 2025 ಮೇ 19ರಂದು ನಡೆದಿದ್ದು, ಭಾರತ ಹಾಗೂ ಜಾರ್ಜಿಯಾ ನಡುವಿನ ಸಹಭಾಗಿತ್ವವನ್ನು ಗಟ್ಟಿ ಮಾಡುವ ಹಿನ್ನಲೆಯಲ್ಲಿ ವಿವಿಧ ಕ್ಷೇತ್ರ ಗಳಲ್ಲಿ ಸಾಧನೆ ಮಾಡಿದ ಭಾರತೀಯರನ್ನು ಗೌರವಿ ಸಲು ಈ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಹನುಮೇಗೌಡ ಬಿ.ಆರ್. ಅವರು ಸೇವೆಯ ಶ್ರೇಯಸ್ಸನ್ನು ಸಾಧಿಸಲು ಸದಾ ಶ್ರದ್ಧೆ, ಪರಿಶ್ರಮ, ನಿಸ್ವಾರ್ಥ ಸೇವಾ ಮನೋಭಾವ ಮತ್ತು ಕಾಯಕ ನಿಷ್ಠೆಯೊಂದಿಗೆ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಇವರಿಗೆ ''ಸರ್ಕಾರದ ಕೆಲಸವೇ ದೇವರ ಕೆಲಸ'' ಎಂಬ ನಂಬಿಕೆಯಿದ್ದು, ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿಭಾಯಿಸುತ್ತಿದ್ದಾರೆ.

ಶಿಸ್ತಿನ ಕೆಲಸಕ್ಕೆ ಸ್ಫೂರ್ತಿ

ಬಿ.ಆರ್.ಹನುಮೇಗೌಡ ಅವರ ದಕ್ಷ ಸೇವೆಗಾಗಿ ಅವರು 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಪ್ರಶಸ್ತಿಗೆ ಭಾಜನರಾದರು ಮತ್ತು ಇತ್ತೀಚೆಗೆ ಜಾರ್ಜಿಯಾ ದೇಶದಲ್ಲಿ ಈ ಪ್ರಶಸ್ತಿಯನ್ನು ಅವರಿಗೆ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ತನ್ನ ಮೇಲಿನ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ ಮತ್ತು ಜನರ ಪರವಾದ ಕೆಲಸವನ್ನು ಇನ್ನಷ್ಟು ಶಿಸ್ತಿನಿಂದ ಮಾಡಲು ಸ್ಫೂರ್ತಿ ತುಂಬಿದೆ ಎಂದು ಹನುಮೇಗೌಡ ಬಿ.ಆರ್. ಅವರು ಹೇಳಿದರು.

ಮುಜರಾಯಿ ಇಲಾಖೆಯಲ್ಲಿ ಉತ್ತಮ ಸೇವೆ

ಇವರು ಸೇವಾ ಅವಧಿಯಲ್ಲಿ ರಾಜ್ಯ ಮಟ್ಟದ ಮಹತ್ವದ ಯೋಜನೆಗಳನ್ನು ಯಶಸ್ವಿಯಾಗಿ ನೆರವೇರಿಸಿದ್ದಾರೆ. ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ತಾಲ್ಲೂಕಿನ ಉಯ್ಯಂಬಳ್ಳಿಯ ಎಲ್ಲ ಗ್ರಾಮಗಳ ಮರುಭೂಮಾಪನ ಕಾರ್ಯವನ್ನು ಮುನ್ನಡೆಸುವುದರ ಜೊತೆಗೆ, ಮುಜಾರಾಯಿ ಇಲಾಖೆಯ ದೇವಸ್ಥಾನಗಳ ಅಳತೆ ಕಾರ್ಯವನ್ನು ರಾಜ್ಯ ಮಟ್ಟದಲ್ಲಿ ಪ್ರಥಮವಾಗಿ ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ದರಖಾಸ್ತು ಪೋಡಿ ಅಂದೋಲನ ಹಾಗೂ ಹೊಸ ಕಂದಾಯ ಗ್ರಾಮಗಳ ರಚನೆ ಪ್ರಕ್ರಿಯೆಯನ್ನು ಉತ್ತಮ ರೀತಿಯಲ್ಲಿ ಮುಗಿಸಿದ್ದಾರೆ. ಇವುಗಳಿಗಾಗಿ ಅವರು ಹಗಲು-ರಾತ್ರಿ ಎನ್ನದೆ ಪರಿಶ್ರಮ ಪಟ್ಟು ಕೆಲಸ ಮಾಡಿದ್ದಾರೆ.

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿನ ಎಲ್ಲಾ ಕೆರೆಗಳ ಅಳತೆ ಕಾರ್ಯವನ್ನು ಶೀಘ್ರವಾಗಿ ನಡೆಸಲು ಕ್ರಮ ಕೈಗೊಂಡಿರುತ್ತಾರೆ. ಈ ಮೂಲಕ ಕೆರೆಗಳ ಸರ್ವೇ ಹಾಗೂ ದಾಖಲೆ ಗಳನ್ನು ನಿಖರವಾಗಿ ತಯಾರಿಸಿ ಸಂರಕ್ಷಣೆ ಮಾಡಲಾಗಿರು ತ್ತದೆ. ಜೊತೆಗೆ, ಜಿಲ್ಲೆಯಾದ್ಯಂತ ಬಾಕಿ ಉಳಿದಿರುವ ಎಲ್ಲಾ ಅರೆನ್ಯಾಯಿಕ ಪ್ರಕರಣಗಳನ್ನು ಕೂಡ ಪ್ರಥಮ ಆದ್ಯತೆ ಮೇರೆಗೆ ವಿಲೇವಾರಿ ಮಾಡಲಾಗುತ್ತಿದ್ದು, ನ್ಯಾಯ ನಿರ್ವಹಣಾ ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾಗದಂತೆ ಮಾಡಲು ಹಾಗೂ ಸಾರ್ವಜನಿಕರಿಗೆ ತ್ವರಿತ ನ್ಯಾಯ ದೊರಕುವಂತೆ ಮಾಡಲುಕ್ರಮಕೈಗೊಳ್ಳಲಾಗುತ್ತದೆ. ಈ ಎರಡೂ ಕಾರ್ಯಗಳನ್ನೂ ಸಮನ್ವಯವಾಗಿ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸುವ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಹೊಸ ದಿಕ್ಕು ನೀಡಲು ಯತ್ನಿಸಲಾಗುತ್ತಿದೆ.

ಹನುಮೇಗೌಡ ಬಿ.ಆರ್. ಅವರು ಪ್ರಿಯಾಂಕ ಎನ್ ಅವರೊಂದಿಗೆ ವಿವಾಹ ಜೀವನಕ್ಕೆ ಕಾಲಿರಿಸಿದ್ದು, ಈ ದಂಪತಿಗೆ ಲಿಶ ಪೂರ್ಣ ಮತ್ತು ದಿಶಾ ಆರ್ಯ ಎಂಬ ಎರಡು ಮುದ್ದಾದ ಹೆಣ್ಣುಮಕ್ಕಳಿದ್ದಾರೆ. ಸಮಾಜದ ಅಭಿವೃದ್ಧಿಗೆ ತಮ್ಮ ಪಾಲು ಕೊಡುವಲ್ಲಿ ಹನುಮೇಗೌಡ ಬಿ.ಆರ್ ಅವರು ಯಾವಾಗಲೂ ಮುಂದೆ ಇದ್ದಾರೆ. ಅವರು ಸರ್ಕಾರಿ ಕರ್ತವ್ಯ ಗಳಲ್ಲಿ ನಿಷ್ಠೆಯಿಂದ ತೊಡಗಿಸಿಕೊಂಡು ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ನಿಜಕ್ಕೂ ಪ್ರತಿಯೊಬ್ಬರಿಗೂ ಸ್ಫೂರ್ತಿದಾಯಕವಾಗಿದೆ. ತಮ್ಮ ಕುಟುಂಬದ ಜೊತೆಗೆ ಸುಖಸಮೃದ್ಧಿ ಯುತ ಜೀವನ ನಡೆಸುತ್ತಾ, ನೈತಿಕ ಮೌಲ್ಯ ಗಳು ಮತ್ತು ಸಾಮಾಜಿಕ ಹೊಣೆಗಾರಿಕೆಗಳನ್ನು ಒಪ್ಪಿಕೊಂಡು ಜೀವನ ಸಾಗಿಸುತ್ತಿರುವುದು ಅವರ ವ್ಯಕ್ತಿತ್ವದ ಮುಖ್ಯ ಶಕ್ತಿಯಾಗಿವೆ. ಅವರು ತಮ್ಮ ಪರಿಶ್ರಮ, ಶ್ರದ್ಧೆ, ಸಮರ್ಪಣೆ ಮತ್ತು ಕರ್ತವ್ಯ ನಿಷ್ಠೆಯಿಂದ ಹಲವು ಉನ್ನತ ಹುದ್ದೆಗಳಿಗೆ ಏರಿ ಸರ್ಕಾರದ ಮಹತ್ವದ ಯೋಜನೆಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಇವರು ಇಂದಿನ ಹಾಗೂ ಭವಿಷ್ಯದ ಸಮಾಜಕ್ಕೆ ಪ್ರೇರಣೆಯ ಶಕ್ತಿ ಎನಿಸಿದೆ.

ಭಾಗವತದಲ್ಲಿ ಬರುವ ತುಳಸಿಯ ಕಥೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಒಮ್ಮೆ ಶಿವನ ತೇಜಸ್ಸಿನ ಹನಿಯೊಂದು ಸಮುದ್ರಕ್ಕೆ ಬಿದ್ದಾಗ ಅದರಿಂದ ಜಲಂಧರ ಎಂಬ ಅಸುರನ ಜನನವಾಯಿತು. ಅವನು ಜಲಂಧರ ನಗರದ ರಾಜನಾದನು. ದೈತ್ಯರಾಜ ಕಾಳನೇಮಿಯ ಮಗಳು ವೃಂದಳನ್ನು ಅವನು ವರಿಸಿದನು. ತನ್ನ ರಾಕ್ಷಸ ಶಕ್ತಿಗಳಿಂದ ಕೊಬ್ಬಿದ ಜಲಂಧರ ಅಹಂಕಾರದಿಂದ ದೇವತೆಯಾದ ಲಕ್ಷ್ಮಿಯನ್ನು ಮೋಹಿಸಿದನು. ಲಕ್ಷ್ಮೀದೇವಿಯು ಸಮುದ್ರದಿಂದ ಜನಿಸಿದ ಕಾರಣ, ನೀನು ನನಗೆ ಭ್ರಾತೃವಾಗಬೇಕು ಎಂದು ಅವನಿಗೆ ತಿಳಿ ಹೇಳಿದಳು.

ಲಕ್ಷ್ಮಿ ದೊರೆಯದಿದ್ದಾಗ, ಈ ಅಸುರ ಪಾರ್ವತಿ ದೇವಿಯನ್ನು ಅರಸುತ್ತಾ ಕೈಲಾಸ ಪರ್ವತಕ್ಕೆ ಬಂದನು. ತನ್ನ ಮಾಯಾವಿ ಶಕ್ತಿಯಿಂದ ಶಿವನ ರೂಪವನ್ನು ಧರಿಸಿ ತಾಯಿ ಪಾರ್ವತಿಯ ಬಳಿ ಹೋದನು. ಆದರೆ ತಾಯಿಯು ತಕ್ಷಣವೇ ತನ್ನ ಯೋಗ ಬಲದಿಂದ ಅವನನ್ನು ಗುರುತಿಸಿ ಅಲ್ಲಿಂದ ಕಣ್ಮರೆಯಾದಳು.

ಪಾರ್ವತಿ ದೇವಿಯು ಕೋಪಗೊಂಡು ಇಡೀ ಕಥೆಯನ್ನು ವಿಷ್ಣುವಿಗೆ ವಿವರಿಸಿದಳು. ಜಲಂಧ ರನ ಪತ್ನಿ ವೃಂದಾ ಅತ್ಯಂತ ಶ್ರದ್ಧೆಯುಳ್ಳ ಮಹಿಳೆ. ಅವಳ ಪತಿವ್ರತಾ ಧರ್ಮದ ಬಲ ದಿಂದಾಗಿ, ವಿಷ್ಣುವಿಗೆ ಜಲಂಧರನನ್ನು ಕೊಲ್ಲಲಾಗಲಿಲ್ಲ. ಆದ್ದರಿಂದ ರಾಕ್ಷಸ ಜಲಂಧರನಿಗೆ ಶಕ್ತಿ ತುಂಬುತ್ತಿದ್ದ ವೃಂದಳ ಪಾತಿವ್ರತ್ಯವನ್ನು ಹೇಗಾದರೂ ಹಾಳು ಮಾಡಬೇಕಾಗಿತ್ತು.

ಈ ಕಾರಣಕ್ಕಾಗಿ ವಿಷ್ಣುವು ಋಷಿಯ ವೇಷವನ್ನು ಧರಿಸಿ ವೃಂದಾ ಒಬ್ಬಂಟಿಯಾಗಿ ವಿಹರಿಸುತ್ತಿದ್ದ ಅಡವಿಗೆ ಋಷಿಯ ರೂಪದಲ್ಲಿ ಬಂದನು. ವಿಷ್ಣುವಿನ ಜೊತೆಗೆ ಇಬ್ಬರು ರಾಕ್ಷಸರೂ ಇದ್ದರು, ಅವರನ್ನು ನೋಡಿ ವೃಂದಾ ಭಯ ಗೊಂಡಳು. ಋಷಿಯು ವೃಂದಾಳ ಮುಂದೆ ಕ್ಷಣ ಮಾತ್ರದಲ್ಲಿ ಇಬ್ಬರನ್ನೂ ಭಸ್ಮಗೊಳಿಸಿದನು. ಅವನ ಶಕ್ತಿಯನ್ನು ನೋಡಿದ ವೃಂದಾ ಕೈಲಾಸ ಪರ್ವತದಲ್ಲಿ ಮಹಾದೇವನೊಂದಿಗೆ ಯುದ್ಧ ಮಾಡುತ್ತಿದ್ದ ತನ್ನ ಪತಿ ಜಲಂಧರನ ಬಗ್ಗೆ ಕೇಳಿದಳು. ಋಷಿಯು ತನ್ನ ಮಾಯಾ ಶಕ್ತಿಯಿಂದ ಎರಡು ಕೋತಿಗಳನ್ನು ಸೃಷ್ಟಿಸಿದನು.

ಒಂದು ಕೋತಿಯ ಕೈಯಲ್ಲಿ ಜಲಂಧರನ ತಲೆ ಮತ್ತು ಇನ್ನೊಂದು ಕೈ ಅವನ ಮುಂಡವನ್ನು ಹೊಂದಿತ್ತು. ಪತಿಯ ಈ ಸ್ಥಿತಿಯನ್ನು ಕಂಡು ವೃಂದಾ ಪ್ರಜ್ಞೆ ತಪ್ಪಿ ಕೆಳಗೆ ಬಿದ್ದಳು. ಪ್ರಜ್ಞೆ ಬಂದ ನಂತರ ತನ್ನ ಪತಿಯನ್ನು ಬದುಕಿಸುವಂತೆ ಋಷಿಯ ರೂಪದಲ್ಲಿರುವ ವಿಷ್ಣುವನ್ನು ಬೇಡಿಕೊಂಡಳು. ವಿಷ್ಣುವು ಮತ್ತೆ ತನ್ನ ಮಾಯೆ ಯಿಂದ ಜಲಂಧರನ ತಲೆಯನ್ನು ಅವನ ದೇಹಕ್ಕೆ ಜೋಡಿಸಿದನು, ಆದರೆ ಅವನೂ ಕೂಡ ಅದೇ ದೇಹವನ್ನು ಪ್ರವೇಶಿಸಿದನು. ವೃಂದೆಗೆ ಈ ಮೋಸದ ಅರಿವೇ ಇರಲಿಲ್ಲ. ಅವಳು ಆ ಮೋಸದ ಜಲಂಧರನೊಂದಿಗೆ ಪತ್ನಿ ಧರ್ಮ ನಿಭಾಯಿಸಿದಳು. ಇದರಿಂದಾಗಿ ಅವಳ ಪರಿ ಶುದ್ಧ ಪತಿವ್ರತಾ ಧರ್ಮ ಮುರಿದು ಹೋಯಿತು. ಇದು ಸಂಭವಿಸಿದ ಕೂಡಲೇ ಅಲ್ಲಿ ರಾಕ್ಷಸ ಜಲಂಧರ ಯುದ್ಧದಲ್ಲಿ ಸೋತನು. ಆನಂತರ ಈ ಎಲ್ಲಾ ಲೀಲೆಯನ್ನು ತಿಳಿದ ವೃಂದಾ ಕೋಪಗೊಂಡು ವಿಷ್ಣುವನ್ನು ಶಿಲೆ ಯಾಗುವಂತೆ ಶಪಿಸಿ ಸತಿಯಾದಳು.

ಪತಿವ್ರತೆ ವೃಂದಾ ಸುಟ್ಟು ಬೂದಿಯಾದ ಕಡೆ ತುಳಸಿ ಗಿಡ ಬೆಳೆಯಿತು. ವಿಷ್ಣುವು ವೃಂದಾಗೆ - 'ಓ ವೃಂದಾ..! ನಿನ್ನ ಪರಿಶುದ್ಧತೆಯಿಂದ ನೀನು ನನಗೆ ಲಕ್ಷ್ಮಿಗಿಂತ ಹೆಚ್ಚು ಪ್ರಿಯಳಾದೆ. ಸಾಲಿ ಗ್ರಾಮ ರೂಪದಲ್ಲಿ ನಾ ಸದಾ ನಿನ್ನೊಂದಿಗೆ ಇರುತ್ತೇನೆ! ಅದೇ ರೀತಿ ಯಾವ ಮನುಷ್ಯನು ನನ್ನನು ಸಾಲಿಗ್ರಾಮ ರೂಪದಲ್ಲಿ ತುಳಸಿಯೊಂದಿಗೆ ಮದುವೆ ಮಾಡುವನೋ ಅವನು ಇಹಲೋಕ ಮತ್ತು ಪರಲೋಕದಲ್ಲಿ ಅಪಾರ ಕೀರ್ತಿಯನ್ನು ಪಡೆಯುತ್ತಾನೆ '' ಎಂದು ಆಶೀರ್ವದಿಸಿದನು.

ಗಂಗಾ ಮತ್ತು ನರ್ಮದೆಯ ನೀರಿನಲ್ಲಿ ಸ್ನಾನ ಮಾಡುವದು, ತುಳಸಿ ಪೂಜೆಗೆ ಸಮಾನವೆಂದು ಪರಿಗಣಿಸಲಾಗಿದೆ. ಮರಣದ ಸಮಯದಲ್ಲಿ ತುಳಸಿ ಮತ್ತು ಗಂಗಾಜಲ ವನ್ನು ಬಾಯಿಯಲ್ಲಿ ಹಾಕುವುದರಿಂದ ಸಾವಿನ ಹೊಸಿಲಲಿರು ವವರು ಪಾಪಕರ್ಮಗಳಿಂದ ಮುಕ್ತರಾಗಿ ವೈಕುಂಠ ಧಾಮವನ್ನ ಪಡೆಯುತ್ತಾರೆ ಎನ್ನುವ ನಂಬಿಕೆ ಇದೆ. ಹೀಗೆ ಅಸುರನ ಪತ್ನಿಯಾದರೂ ಸತಿ ವೃಂದೆಗೆ ಅವಳ ನಿಷ್ಠೆಯಿಂದಾಗಿ ಪೂಜ್ಯ ಸ್ಥಾನ ಲಭಿಸಿತು. ನಾವು ಯಾರ ಜೊತೆ ಇರು ತ್ತೇವೆ ಎನ್ನುವುದಕ್ಕಿಂತ, ನಾವು ಏನಾಗಿರುತ್ತೇವೆ ಎನ್ನುವುದು ಜೀವನದಲ್ಲಿ ಬಹಳ ಮುಖ್ಯ. ಕೊನೆಗೆ ನಮ್ಮೊಡನೆ ಬರುವುದು ನಾವು ಮಾಡಿದ ಧರ್ಮ, ಕರ್ಮಗಳು ಮಾತ್ರ.

ಬಾಡಿ ಬಿದ್ದು ಹೋಗುವ ಹೂವಿನಂತೆ ಈ ಸಂಸಾರ

**ಪೂಸರದಿ ಕಾಂತಿ ಸೌರಭ ಮೊದಲನೆಯ ತಾಸು
ವಾಸನೆಯ ಹಳಸು ಕೊಳ ಕೊಳಚೆಯಾ ಬಳಿಕ
ಮಾಸಿ ನಲುನಲುಗಿ ಮುಳ್ಳಹುದು ಮೂರನೆ ತಾಸು
ಸಂಸಾರ ಕಥೆಯದುವೆ - ಮಂಕುತಿಮ್ಮ||**

ಒಂದು ಹೂ ಮಾಲೆಯು ಹೊಸತರಲ್ಲಿ ಕಾಂತಿಯನ್ನೂ, ಸೌರಭವನ್ನೂ, ಸುವಾಸನೆಯ ಗಮಲನ್ನೂ ಹೊಂದಿರು ತ್ತದೆ. ಸಮಯ ಕಳೆದ ಹಾಗೆ ಆ ಹೂ ಮಾಲೆಯು ಸೌರಭ, ಗಮಲನ್ನು ಕಳೆದು ಕೊಳ್ಳುತ್ತಾ ಬಾಡಲು ಪ್ರಾರಂಭವಾಗುತ್ತದೆ. ಗಮಲು, ಸೌರಭ, ಸುವಾಸನೆಯನ್ನು ಕಳೆದು ಕೊಂಡು ಸಂಪೂರ್ಣ ಬಾಡಿ ಹೋದ ನಂತರ ಅದು ಕೊಳೆತು ನಾರಲು ಪ್ರಾರಂಭವಾಗುತ್ತದೆ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಮನುಷ್ಯನ ಜೀವನವೂ ಸಹ ಈ ಹೂವಿನ ಮಾಲೆಯಂತೆಯೇ ಇರುತ್ತದೆ ಎಂದು ಈ ಪದ್ಯದಲ್ಲಿ ಹೇಳಿದ್ದಾರೆ.

ನಾವೆಲ್ಲರೂ ಮೊದಲು ಶಿಶುವಾಗಿ, ನಂತರ ಬಾಲಕರಾಗಿ ಬಾಲ್ಯಾವಸ್ಥೆಯನ್ನು ಕಳೆದು, ಪ್ರೌಢಾವಸ್ಥೆಗೆ ಬಂದು, ನಂತರ ಯೌವ್ವನಕ್ಕೆ ಬಂದು, ನಂತರದೆ ಯುವಕರಾಗಿ, ನಂತರದೆ ಪ್ರಾಯಸ್ಥರಾಗಿ, ನಂತರ ಮುದುಕರಾಗಿ, ನಂತರದೆ ಈ ಕಾಯವು ಕೃಷವಾಗಿ, ಬಲಹೀನಗೊಂಡು ಉಸಿರನ್ನು ನಿಲ್ಲಿಸಿದಾಗ ನಮ್ಮ ಈ ಜಗತ್ತಿನ ಸಂಬಂಧ, ಜಗದ್ವ್ಯಾಪಾರ ಮುಗಿಸಿ ಇಲ್ಲಿಂದ ಹೊರಡುತ್ತೇವೆ. ಈ ವ್ಯವಸ್ಥೆಯು ಈ ಜಗದಲ್ಲಿ ಜನ್ಮತಳೆದ ಪ್ರತಿಯೊಬ್ಬರ ಜೀವನದಲ್ಲಿಯೂ ನಡೆಯುತ್ತದೆ. ಬಾಲ್ಯಾವಸ್ಥೆಯಲ್ಲಿ ಈ ಪ್ರಕೃತಿಯನ್ನು, ಈ ಜಗತ್ತನ್ನೂ ತಿಳಿಯುವ ಹಂಬಲವಾದರೆ, ಪ್ರೌಢಾವಸ್ಥೆಯಲ್ಲಿ ಶಕ್ತಿವಂತರಾಗಿ ಇನ್ನೂ ಹೆಚ್ಚಿನ ಜ್ಞಾನ ಪಡೆಯುವಾಸೆಯಾದರೆ, ಯೌವ್ವನದಲ್ಲಿ ಎಲ್ಲವನ್ನೂ ಗೆಲ್ಲಬೇಕೆಂಬ ತವಕವಾದರೆ, ಯುವಕರಾಗಿ ಎಲ್ಲವೂ ನನ್ನಾಧೀನವಾಗಬೇಕೆಂಬ ವಾಂಛೆ, ನಂತರದೆ ಕುಟುಂಬ, ಕುಟುಂಬದೊಳಗಿನ ಸರಸ, ವಿರಸ, ಮಕ್ಕಳು ಮರಿಗಳ ಮೇಲಿನ ಆಸೆ, ನಂತರದೆ ಪ್ರಾಯ ಕಳೆಯುತ್ತಾ ಹೋದ ಹಾಗೆ ದೇಹದಲ್ಲಿ ಶಕ್ತಿ ಕುಂದುತ್ತಾ ಹೋಗಿ ಕೊನೆಗೆ ಮುದುಕರಾಗಿ ಈ ಜೀವನ ಚೆಲ್ಲಿ ಸಾಗುತ್ತೇವೆ ಎಂಬುದು ಈ ಕಗ್ಗದ ಅರ್ಥ.

ಇದಕ್ಕೆ ಪೂಜ್ಯ ಡಿವಿಜಿಯವರು ಒಂದು ಉದಾಹರಣೆಯನ್ನು ಕೊಡುತ್ತಾ, ಮನುಷ್ಯನ ಜೀವನ ವೊಂದು ಹೂವಿನ ಮಾಲೆ ಇದ್ದ ಹಾಗೆ. ಮೊದಲು ಹೂ ಮಾಲೆಯಲ್ಲಿಯ ಪುಷ್ಪಗಳು ನಳನಳಿಸುತ್ತಾ, ಸುಗಂಧಪೂರಕವಾಗಿ, ಸೌರಭವನ್ನು ಸೂಸುತ್ತಾ ಇರುತ್ತದೆ. ಒಂದು ಗಂಟೆಯ ನಂತರ ಅದು ತನ್ನಲ್ಲಿರುವ ಸುಗಂಧದ ಸೌರಭವನ್ನು ಕಳೆದುಕೊಳ್ಳಲು ಪ್ರಾರಂಭ ಮಾಡುತ್ತದೆ. ಒಂದು ಘಂಟೆಯ ನಂತರ ಆ ಪುಷ್ಪಗಳು ಬಾಡಲು ಪ್ರಾರಂಭವಾಗಿ ತದ ನಂತರ ಸಂಪೂರ್ಣವಾಗಿ ಬಾಡಿ ಹೋದ ಮೇಲೆ ಕೊಳೆತು ದುರ್ವಾಸನೆ ಬರಲು ಪ್ರಾರಂಭವಾಗುತ್ತದೆ ಎಂದು ಹೇಳಿದ್ದಾರೆ. ಹೌದಲ್ಲವೇ! ಹೂವಿನ ಮಾಲೆಗೂ ನಮ್ಮ ಮಾನುಷ ಜನ್ಮಕ್ಕೂ ವ್ಯತ್ಯಾಸವೇ ಕಾಣುವುದಿಲ್ಲ. ಪ್ರಾಯದಲ್ಲಿ ಕಲ್ಲನ್ನು ಪುಡಿಗಟ್ಟಿ ಜಲವನ್ನು ತೆಗೆಯುವ ಶಕ್ತಿ ಇದ್ದರೆ ಕಾಲಂತರದಲ್ಲಿ ನಮ್ಮ ದೇಹದ ಶಕ್ತಿಯು ಹೀನವಾಗುತ್ತಾ ಒಂದಲ್ಲ ಒಂದು ದಿನ ಈ ಜಗದ ವ್ಯಾಪಾರ ಮುಗಿಸಲೇ ಬೇಕು ಎಂಬುದು ಈ ಪದ್ಯದ ಮೂಲಾರ್ಥವಾಗಿದೆ.

ನಮ್ಮಲ್ಲಿ ಪ್ರಾಯ ತುಂಬಿ ತುಳುಕುವಾಗ ಪಾಪ ಪುಣ್ಯಗಳ ಬಗೆಗೆ ಚಿಂತನೆ ಮಾಡುವುದಿಲ್ಲ. ಪ್ರಾಯದ ನಿಟ್ಟಿನಲ್ಲಿ ನಾವು ಅರಿಷಡ್ವರ್ಗಗಳಿಗೆ ದಾಸರಾಗಿ ಕೇವಲ ಅವುಗಳ ಆಸೆಗಳನ್ನು ಪೂರೈಸುವಲ್ಲಿ ಮಾತ್ರವೇ ಕಾರ್ಯೋನ್ಮುಖರಾಗಿರುತ್ತೇವೆ. ದೇಹದಲ್ಲಿ ಶಕ್ತಿ ಕುಂದುವಾಗ ಮಾತ್ರವೇ ಪಾಪ ಪುಣ್ಯಗಳ ಬಗೆಗೆ ಚಿಂತಿಸುತ್ತೇವೆ. ಈ ಜಗದ ಎಲ್ಲಾ ಮನುಜರಿಗೂ ಸಹ ಒಂದಲ್ಲ ಒಂದು ದಿನ ಮಣ್ಣಲ್ಲಿ ಮಣ್ಣಾಗುವೆವು ಎಂಬ ಅರಿವು ಇದ್ದರೂ ಅದು ಕೇವಲ ಶಕ್ತಿ ಕುಂದಿದಾಗ ಮಾತ್ರವೇ ಆ ಬಗ್ಗೆ ಯೋಚಿಸುತ್ತೇವೆ. ಈ ನಿಟ್ಟಿನಲ್ಲಿ ಶಕ್ತಿ ಇದ್ದಾಗ ಪರೋಪಕಾರ ಆಗಬೇಕೇ ವಿನಃ, ಉದರ ವೈರಾಗ್ಯದಂತಾಗ ಬಾರದು ಎಂಬುದು ಅಪೇಕ್ಷೆಯಾಗಿದೆ. ಒಟ್ಟಿನಲ್ಲಿ ಇಲ್ಲಿ ಹುಟ್ಟಿ, ಬೆಳೆದು, ಶಕ್ತಿಹೀನರಾಗಿ ಕುಂದುಹೋಗುವ ಈ ಜನ್ಮವು ಒಂದು ಹೂವಿನಮಾಲೆಯಂತೆ ಇರುತ್ತದೆ ಎಂದು ಪೂಜ್ಯರು ಹೇಳಿದ್ದಾರೆ.

ಹನಿಮಳೆ

ನಿರ್ಭೀತಿ

ಇಲ್ಲ ಎನಗೆ ಹೃದಯಾಘಾತದ ಭಯ
ನೀಡಿದ್ದೇನೆ ಎನ್ನ ಹೃದಯ ಅವಳಿಗೆ
ಉಂಟು ಅದರ ರಕ್ಷಣೆಗೆ
ಪ್ರೀತಿ ಸ್ನೇಹದ ಮದ್ದು
ಸುಳಿಯದು ಆಘಾತ ಅದರ ಬಳಿಗೆ

• ಮಹಾಂತೇಶ ಮಾಗನೂರ

ಪ್ಯಾರಾ ನಾರ್ಮಲ್



ಮಾನವನಿಗೆ ಇಂದ್ರಿಯಾತೀತ ವಿದ್ಯಮಾನ ಅಥವಾ ಪ್ಯಾರಾ ನಾರ್ಮಲ್ ಘಟನೆಗಳೆಂದರೆ ಮೊದಲಿನಿಂದಲೂ ಕುತೂಹಲ, ಕೌತುಕ, ಬೆರಗು ಮತ್ತು ತುಸು ಭಯ ಕೂಡ. ಆದ್ದರಿಂದಲೇ, ಇಂದು ಹಾರರ್ ಕಥೆಗಳು, ಹಾರರ್ ಸಿನಿಮಾಗಳು ಜನಪ್ರಿಯತೆ ಗಳಿಸಿವೆ; ಹಿಂದೆ ದೆವ್ವ ಭೂತಗಳ ಕಥೆಗಳಿಗೂ ಒಂದು ಮಟ್ಟದ ಜನಪ್ರಿಯತೆ ಇತ್ತು. ಲೇಖಕ ಗುರುರಾಜ ಕೊಡ್ಕಣಿ ಯವರು 'ಪ್ಯಾರಾನಾರ್ಮಲ್ : ಸತ್ಯಘಟನೆ ಆಧಾರಿತ ಹಾರರ್ ಕಥನಗಳು' ಎಂಬ ಪುಸ್ತಕವನ್ನು ಹೊರತಂದಿದ್ದು, ಇಲ್ಲಿನ ಕಥೆಗಳನ್ನು ಬರೆಯುವಾಗ, ಆಧುನಿಕ ಕಾಲದಲ್ಲಿ ಪ್ಯಾರಾನರ್ಮಲ್ ಸಂಶೋಧನೆ ನಡೆಸಿದ ಗೌರವ್ ತಿವಾರಿಯವರ ಅನುಭವಗಳನ್ನೂ ಬಳಸಿಕೊಂಡಿದ್ದಾರೆ. ಕೌತುಕದಿಂದ ಓದಿಸಿಕೊಂಡು ಹೋಗುವ ಗುಣ ಇಲ್ಲಿನ ಕಥೆಗಳ ಶಕ್ತಿ. ಈ ಕುತೂಹಲಕಾರಿ ಪುಸ್ತಕವನ್ನು ಬೆಂಗಳೂರಿನ 'ಅಂಕಿತ ಪುಸ್ತಕ' ಪ್ರಕಟಿಸಿದೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಟೆ



ಎಡದಿಂದ ಬಲಕ್ಕೆ

1. ಉಪಾಯವಾಗಿ ತೊಡಗುವಿಕೆ (4)
4. ಸಂಗೀತ ಕೇಳಿದಾಗ ಬಂದ ಅಭಿಪ್ರಾಯ (3)
5. ಈ ರೀತಿ ಬೈಯ ಬಾರದಂತೆ! (3)
7. ಬೀಸುವ ಗಾಳಿ (3)
9. ಚಾಪೆಯಲ್ಲಿ ಮುದ್ರಣ? (4)
10. ಸಂಕಟ (4)
12. ಬಡಿಯುವಿಕೆಗೆ ಮತ್ತೊಂದು ಹೆಸರು (3)
13. ಆಡಿದ ಮಾತು ಪವಿತ್ರ!(3)
14. ಗುಮಾಸ್ತ (4)
15. ನಂತರ (4)
16. ಸೊಕ್ಕು (3)
18. ಕಪಾಲವನ್ನು ಹಿಡಿದವನು (3)
20. ಪ್ರತಿಜ್ಞೆ (3)
21. ಇರುವೆ ಮತ್ತೊಂದು ಹೆಸರು (4)

ಮೇಲಿಂದ ಕೆಳಕ್ಕೆ

2. ಪರಿಮಳವಾದ ಗುಲಾಬಿ ನೀರು (3)
3. ಸೊಕ್ಕು (2)
4. ಸ್ವರ್ಗದ ರಾಜನ ಮಳೆಬಿಲ್ಲು (4)
6. ಇದು ಉತ್ತಮವಾಗಿರಬೇಕೆನ್ನುವರು (4)
8. ಕೆಳಕ್ಕೆ ಬೀಳುವಿಕೆ (3)
11. ತಿರಸ್ಕಾರ, ನಿಂದೆ (3)
12. ಹೆಚ್ಚು-ಕಡಿಮೆ (4)
13. ವನದೊಂದಿಗೆ ಬಂದಿರುವ ಸಮುದ್ರ (3)
14. ಮುಪ್ಪನ್ನು ಹೋಗಲಾಡಿಸುವ ಆಯುರ್ವೇದದ ಚಿಕಿತ್ಸೆ (4)
17. ಒಡೆಯ ಅಸ್ತವ್ಯಸ್ತನಾದರೆ? (3)
19. ಬರೆಯಲು ಇದು ಬೇಕು (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಉಪಕ್ರಮ 4. ಇಂಗಿತ
5. ದರಿದ್ರ 7. ಮಾರುತ
9. ಚಾಪಖಾನೆ 10. ಪರಿತಾಪ
12. ತಾಡನ 13. ವಚನ
14. ಕಾರಕೂನ 15. ತರುವಾಯ
16. ಧಿಮಾಕು 18. ಕಪಾಲಿ
20. ಸಂಕಲ್ಪ 21. ಪಿಪೀಲಿಕ

ಮೇಲಿಂದ ಕೆಳಕ್ಕೆ
2. ಪನ್ನೀರು 3. ಮದ
4. ಇಂದ್ರಚಾಪ 6. ಮನೆತನ
8. ತಪನ 11. ತಾತ್ಸಾರ
12. ತಾರತಮ್ಯ 13. ವನಧಿ
14. ಕಾಯಕಲ್ಪ 17. ಮಾಕಲಿ
19. ಲಿಪಿ

ನಾಯಕ ಗಿಲ್ ಅಮೋಘ ದ್ವಿಶತಕ | ಶತಕ ವಂಚಿತ ಜಡೇಜಾ | ಆಂಗ್ಲರಿಗೆ ಆರಂಭಿಕ ಆಘಾತ

587 ರನ್ ಪೇರಿಸಿದ ಭಾರತ

ಎಜ್‌ಬಾಸ್ಟನ್: ನಾಯಕ ಶುಭಮನ್ ಗಿಲ್ ಅಮೋಘ ದ್ವಿಶತಕದ ನೆರವಿನಿಂದ ಅತಿಥೇಯ ಇಂಗ್ಲೆಂಡ್ ವಿರುದ್ಧ ನಡೆಯುತ್ತಿರುವ ದ್ವಿತೀಯ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಗುರುವಾರದಂದು ಭಾರತ 587 ರನ್‌ಗಳ ಬೃಹತ್ ಮೊತ್ತ ಪೇರಿಸಿದೆ.

ಮೊದಲ ಇನ್ನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ತಂಡವು ಆರಂಭದಲ್ಲೇ ಕುಸಿತ ಕಂಡು, ದಿನದಾಂತ್ಯಕ್ಕೆ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 3 ವಿಕೆಟ್ ನಷ್ಟಕ್ಕೆ 77 ರನ್ ಗಳಿಸಿದೆ. ಜೋ ರೂಟ್ 18 ರನ್ ಹಾಗೂ ಬ್ರೂಕ್ 30 ರನ್ ಗಳಿಸಿ ಆಟವಾಡುತ್ತಿದ್ದಾರೆ. ಇದೀಗ ಇಂಗ್ಲೆಂಡ್ ತಂಡವು 510 ರನ್‌ಗಳ ಹಿನ್ನಡೆಯಲ್ಲಿದೆ.

ಇಂಗ್ಲೆಂಡ್ ತಂಡದ ಆರಂಭಿಕ ಆಟಗಾರ ಬೆನ್ ಡಕೆಟ್ ಮತ್ತು ಓಲಿ ಪೋಪ್ ಯಾವುದೇ ರನ್ ಗಳಿಸದೆ ಆಕಾಶ್ ದೀಪ್ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಂಡರೆ, ಜಾನ್ ಕ್ರಾಲಿ ಕೇವಲ 19 ರನ್ ಗಳಿಸಿ ಮೊಹಮ್ಮದ್ ಸಿರಾಜ್‌ಗೆ ವಿಕೆಟ್ ಒಪ್ಪಿಸಿದರು.

ಇದಕ್ಕಿಂತ ಮುನ್ನ ತನ್ನ ಪ್ರಥಮ ಇನ್ನಿಂಗಸ್ ಮುಂದುವರಿಸಿದ ಟೀಮ್ ಇಂಡಿಯಾದ ನಾಯಕ ಶುಭ್‌ಮನ್ ಮತ್ತು ಜಡೇಜಾ ಜೋಡಿ ಭಾರತದ ಇನ್ನಿಂಗ್ಸ್ ಅನ್ನು ಯಶಸ್ವಿಯಾಗಿ ಮುಂದುವರಿಸಿದರು. ಶುಭ್‌ಮನ್ ಗಿಲ್ ಟೆಸ್ಟ್ ಕ್ರಿಕೆಟ್‌ನಲ್ಲಿ ಚೊಚ್ಚಲ ದ್ವಿಶತಕ ಸಾಧನೆ ಮಾಡಿದರು. 387 ಎಸೆತಗಳಲ್ಲಿ 269 ರನ್ ಗಳಿಸಿ ಔಟ್ ಆದರು. ನಾಯಕನ ಇನಿಂಗ್ಸ್‌ನಲ್ಲಿ 30 ಬೌಂಡರಿ ಹಾಗೂ ಮೂರು ಸಿಕ್ಸರ್‌ಗಳು ಸೇರಿದ್ದವು.

ಎರಡನೇ ದಿನದಾಟದಲ್ಲಿ ರವೀಂದ್ರ ಜಡೇಜಾ 89 ರನ್ ಗಳಿಸಿ ನಾಯಕನಿಗೆ ಉತ್ತಮ ಬೆಂಬಲ ನೀಡಿದರು. ಅವರ ಇನ್ನಿಂಗ್ಸ್‌ನಲ್ಲಿ 10 ಬೌಂಡರಿ ಮತ್ತು 1 ಸಿಕ್ಸರ್ ಇದ್ದವು. ಕೆಳ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ವಾಷಿಂಗ್ಟನ್ ಸುಂದರ್ 42 ರನ್‌ಗಳ ಉಪಯುಕ್ತ ಕಾಣಿಕೆ ನೀಡಿದರು.

ಆ ಬಳಿಕ ಬಂದ ಆಕಾಶ್ ದೀಪ್ 13 ಎಸೆತಗಳನ್ನು ಎದುರಿಸಿ ಕೇವಲ 6 ರನ್ ಗಳಿಸಿ ಶೊಯೇಬ್ ಬಷೀರ್‌ಗೆ ವಿಕೆಟ್ ಒಪ್ಪಿಸಿದರು. ಮೊಹಮ್ಮದ್ ಸಿರಾಜ್ 23 ಬಾಲ್‌ಗಳನ್ನು ಎದುರಿಸಿ 8 ರನ್ ಗಳಿಸಿ ಔಟ್ ಆದರೆ, ಪ್ರಸಿದ್ಧ್ ಕೃಷ್ಣ ಕೇವಲ 5 ರನ್ ಗಳಿಸಿ ಅಜೇಯರಾಗಿ ಉಳಿದರು.

ಸಚಿನ್, ಕೊಹ್ಲಿ ದಾಖಲೆ ಪತನ

ಟೀಮ್ ಇಂಡಿಯಾದ ನಾಯಕ ಶುಭಮನ್ ಗಿಲ್ ಇಂಗ್ಲೆಂಡ್ ವಿರುದ್ಧದ ದ್ವಿತೀಯ ಟೆಸ್ಟ್‌ನ ಮೊದಲ ಇನ್ನಿಂಗ್ಸ್‌ನಲ್ಲಿ ದ್ವಿಶತಕ ಸಿಡಿಸುವ ಮೂಲಕ ಹಲವು ದಾಖಲೆಯನ್ನು ತಮ್ಮ ಹೆಸರಿಗೆ ಬರೆದಿದ್ದಾರೆ. ಇಂಗ್ಲೆಂಡ್‌ನಲ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿ ದ್ವಿಶತಕ ದಾಖಲಿಸಿದ ಮೊದಲ ಭಾರತೀಯ ನಾಯಕ ಎಂಬ ಐತಿಹಾಸಿಕ ದಾಖಲೆ ನಿರ್ಮಿಸಿದ್ದಾರೆ. ಭಾರತದ ನಾಯಕನಾಗಿ ಟೆಸ್ಟ್‌ನಲ್ಲಿ ದ್ವಿಶತಕ ಬಾರಿಸಿದ ಎರಡನೇ ಭಾರತದ ಕಿರಿಯ ಆಟಗಾರ ಎನಿಸಿಕೊಂಡರು. ಈ ದಾಖಲೆಗೆ ಭಾಜನರಾಗಿದ್ದ ಮನ್ಸೂರ್ ಅಲಿ ಖಾನ್ ಪಟೌಡಿ 23 ವರ್ಷ 39 ದಿನ ಇರುವಾಗ ನಾಯಕನಾಗಿ ಟೆಸ್ಟ್ ದ್ವಿಶತಕ ಬಾರಿಸಿದ್ದರು. ಇದೀಗ ಗಿಲ್(25 ವರ್ಷ 298 ದಿನ) ಕೂಡ ಆ ಸಾಧನೆ ಮಾಡಿದ್ದಾರೆ. ಗಿಲ್ ಅವರಿಗೂ ಮುನ್ನ ದ್ವಿತೀಯ ಸ್ಥಾನದಲ್ಲಿ ಸಚಿನ್ ತೆಂಡೂಲ್ಕರ್ ಕಾಣಿಸಿಕೊಂಡಿದ್ದರು. 1999ರಲ್ಲಿ ನ್ಯೂಜಿಲ್ಯಾಂಡ್ ವಿರುದ್ಧ 26 ವರ್ಷ 189 ದಿನ ಇರುವಾಗ ಆ ಸಾಧನೆಗೈದಿದ್ದರು. ಮಾಜಿ ವಿರಾಟ್ ಕೊಹ್ಲಿ ಅವರು 27 ವರ್ಷದಲ್ಲಿ ಆ ಮೈಲುಗಲ್ಲು ನಿರ್ಮಿಸಿದ್ದರು. ಗಿಲ್ ಅವರ ಚೊಚ್ಚಲ ಟೆಸ್ಟ್ ದ್ವಿಶತಕ ಇದಾಗಿದ್ದು, ಒಟ್ಟಾರೆಯಾಗಿ ದ್ವಿಶತಕ ಬಾರಿಸಿದ 6ನೇ ಭಾರತೀಯ ನಾಯಕ ಎಂಬ ಹೆಗ್ಗಳಿಗೆ ಪಾತ್ರರಾದರು.

ದಾಖಲೆ ಬರೆದ ರವೀಂದ್ರ ಜಡೇಜಾ

ಭಾರತದ ಅನುಭವಿ ಸ್ಪಿನ್ ಆಲ್ ರೌಂಡರ್ ರವೀಂದ್ರ ಜಡೇಜಾ ಎರಡನೇ ದಿನದಾಟದಲ್ಲಿ ತಮ್ಮ ಟೆಸ್ಟ್ ಜೀವನದ 22ನೇ ಅರ್ಧಶತಕ ಪೂರ್ಣಗೊಳಿಸಿದ್ದಾರೆ. ಇಂಗ್ಲೆಂಡ್ ನೆಲದಲ್ಲಿ ಆಂಗ್ಲ ಪಡೆ ವಿರುದ್ಧ 700ಕ್ಕೂ ಹೆಚ್ಚು ರನ್ ಹಾಗೂ 25 ವಿಕೆಟ್ ಪಡೆದ ಮೊದಲ ಭಾರತೀಯ ಆಲ್‌ರೌಂಡರ್ ಎಂಬ ದಾಖಲೆಗೂ ಜಡೇಜಾ ಭಾಜನರಾಗಿದ್ದಾರೆ. ಇದುವರೆಗೂ 7ನೇ ಕ್ರಮಾಂಕದಲ್ಲಿ 20 ಅರ್ಧಶತಕ ಬಾರಿಸಿದ್ದು, ಈ ಕ್ರಮಾಂಕದಲ್ಲಿ ಅತಿ ಹೆಚ್ಚು ಅರ್ಧಶತಕ ಬಾರಿಸಿದ ಆಟಗಾರರ ಸಾಲಿನಲ್ಲಿ ಜಡೇಜಾ ಇದೀಗ ಅಗ್ರಸ್ಥಾನ ಅಲಂಕರಿಸಿದ್ದಾರೆ.

ವಿಂಬಲ್ಡನ್: ಮೂರನೇ ಸುತ್ತಿಗೆ ಆರಿನಾ ಸಬಲೆಂಕಾ

ಲಂಡನ್: ವಿಶ್ವದ ಅಗ್ರ ಕ್ರಮಾಂಕದ ಆಟಗಾರ್ತಿ ಆರಿನಾ ಸಬಲೆಂಕಾ ಅವರು ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಷಿಪ್‌ನ ಎರಡನೇ ಸುತ್ತಿನಲ್ಲಿ ಬುಧವಾರ ಝೆಕ್ ಆಟಗಾರ್ತಿ ಮೇರಿ ಬೌಝ್ಕೋವಾ ಅವರಿಂದ ನಿರೀಕ್ಷೆಗಿಂತ ಹೆಚ್ಚಿನ ಹೋರಾಟ ಎದುರಿಸಿ, ಅಂತಿಮವಾಗಿ 7-6 (4), 6-4ರಿಂದ ಜಯಗಳಿಸಿ ಮೂರನೇ ಸುತ್ತಿಗೆ ಮುನ್ನಡೆದರು. ಆದರೆ ಎರಡನೇ ಶ್ರೇಯಾಂಕದ ಕೊಕೊ ಗಾಫ್, ಮೂರನೇ ಶ್ರೇಯಾಂಕದ ಜೆಸಿಕಾ ಪೆಗುಲಾ, ಐದನೇ ಶ್ರೇಯಾಂಕದ ಝೆಂಗ್ ಕ್ವಿನ್ವೆನ್ ಮತ್ತು ಒಂಬತ್ತನೇ ಶ್ರೇಯಾಂಕದ ಪೌಲಾ ಬಡೋಸಾ ಅವರು ಮಹಿಳೆಯರ ಸಿಂಗಲ್ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದಾರೆ. ಇದರಿಂದ ಸಬಲೆಂಕಾ ಅವರಿಗೆ ಈ ಟೂರ್ನಿಯಲ್ಲ ಮೊದಲ ಸಲ ಪ್ರಶಸ್ತಿ ಗೆಲ್ಲುವ ಅವಕಾಶ ಉಜ್ವಲವಾಗಿದೆ. ಸಬಲೆಂಕಾ ಅವರಿಗೆ ಮೊದಲ ಸೆಟ್ ಸುಲಭವಾಗಿ ಗೆಲ್ಲುವ ಅವಕಾಶವಿತ್ತು, ಆದರೆ ಪ್ರತಿಬಾರಿ ಬೌಝ್ಕೋವಾ ಪ್ರತಿರೋಧ ತೋರಿದರು. ಎರಡನೇ ಸೆಟ್‌ನ ಐದನೇ ಗೇಮ್‌ನಲ್ಲಿ ಮೇರಿ ಎಸಗಿದ ತಪ್ಪಿನಿಂದ ಸರ್ವಿಸ್ ಬ್ರೇಕ್ ಮಾಡಿದ ಸಬಲೆಂಕಾ ನಂತರ ಪಂದ್ಯವನ್ನು ನಿಯಂತ್ರಣಕ್ಕೆ ಪಡೆಯುವಲ್ಲಿ ಯಶಸ್ವಿಯಾದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
("ವಿಟಿಯು ಅಧಿನಿಯಮ 1994" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)
"ಜ್ಞಾನ ಸಂಗಮ", ಬೆಳಗಾವಿ - 590018, ಕರ್ನಾಟಕ.

೨೫ನೇ ವಾರ್ಷಿಕ ಘಟಿಕೋತ್ಸವ
(ಭಾಗ-೧)
ಘನ ಅಧ್ಯಕ್ಷತೆ
ಶ್ರೀ ಥಾವರಚಂದ್ ಗೆಹ್ಲೋಟ್
ಗೌರವಾನ್ವಿತ ರಾಜ್ಯಪಾಲರು, ಕರ್ನಾಟಕ ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿಗಳು

ಮುಖ್ಯ ಅತಿಥಿಗಳು ಮತ್ತು ಘಟಿಕೋತ್ಸವ ಭಾಷಣ
ಪ್ರೊ. ಅಜಯ್ ಕುಮಾರ್ ಸೂದ್
ಪ್ರಧಾನ ವೈಜ್ಞಾನಿಕ ಸಲಹೆಗಾರರು, ಭಾರತ ಸರ್ಕಾರ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು

ಗೌರವ ಅತಿಥಿ
ಡಾ. ಎಂ. ಸಿ. ಸುಧಾಕರ್
ಮಾನ್ಯ ಸಚಿವರು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಸಮ-ಕುಲಾಧಿಪತಿಗಳು

ಇದೇ ಸಂದರ್ಭದಲ್ಲಿ
ಡಾ. ವಿ. ನಾರಾಯಣನ್
ಅಧ್ಯಕ್ಷರು, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ), ಬೆಂಗಳೂರು
ಶ್ರೀ ಪ್ರಶಾಂತ ಪ್ರಕಾಶ
ಸಹ-ಸಂಸ್ಥಾಪಕರು, ಎಕ್ಸೆಲ್ ಇಂಡಿಯಾ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು
ಶ್ರೀ ಸಿ. ಎಸ್. ಸುಂದರ್ ರಾಜು
ಎಟ್ರೀಯಾ ವಿಶ್ವವಿದ್ಯಾಲಯದ ಕುಲಾಧಿಪತಿ

ಈ ಮಹನೀಯರಿಗೆ "ಡಾಕ್ಟರ್ ಆಫ್ ಸೈನ್ಸ್" ಗೌರವ ಪದವಿ ಪ್ರದಾನ ಮಾಡಲಾಗುವುದು.

ದಿನಾಂಕ : 04-07-2025 ಪೂರ್ವಾಹ್ನ 11:00 ರಿಂದ
ಸ್ಥಳ: ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, "ಜ್ಞಾನ ಸಂಗಮ", ವಿ.ತಾ.ವಿ., ಬೆಳಗಾವಿ

ಸ್ನಾತಕ ಹಾಗೂ ಸಂಶೋಧನಾ ಪದವಿ ಪಡೆದ ಎಲ್ಲರಿಗೂ ಅಭಿನಂದನೆಗಳು

ಪ್ರೊ. ಟಿ. ಎನ್. ಶ್ರೀನಿವಾಸ
ಕುಲಸಚಿವರು (ಮೌಲ್ಯಮಾಪನ)
ಪ್ರೊ. ಬಿ. ಈ. ರಂಗಸ್ವಾಮಿ
ಕುಲಸಚಿವರು
ಪ್ರೊ. ಎಸ್. ವಿದ್ಯಾಶಂಕರ
ಕುಲಪತಿಗಳು

VTU Offers Online Programs : BBA, BCA, MBA, MCA & PGD
For Admissions Visit : vtu-online.net or www.onlinedegree.vtu.ac.in

ಮಹಿಳಾ ಟಿ20: ಭಾರತ ತಂಡಕ್ಕೆ ಸರಣಿ ಗೆಲ್ಲುವ ತವಕ

ಕೆನ್ನಿಂಗ್ಟನ್: ಭಾರತ-ಇಂಗ್ಲೆಂಡ್ ನಡುವಿನ 3ನೇ ಮಹಿಳಾ ಟಿ20 ಪಂದ್ಯ ಇಲ್ಲಿ ಶುಕ್ರವಾರ ನಡೆಯಲಿದ್ದು, ಈ ಪಂದ್ಯ ಗೆದ್ದರೆ ಭಾರತ ತಂಡವು ಸರಣಿ ಗೆದ್ದಂತಾಗುತ್ತದೆ. ಈಗಾಗಲೇ ಆಡಿರುವ ಎರಡೂ ಟಿ20 ಪಂದ್ಯಗಳನ್ನು ಭಾರತ ತಂಡ ಗೆದ್ದುಕೊಂಡಿದೆ. ಟೀಮ್ ಇಂಡಿಯಾ 3ನೇ ಟಿ20 ಗೆದ್ದರೆ, ಅದು ಮೊದಲ ಬಾರಿಗೆ ಇಂಗ್ಲೆಂಡ್ ವಿರುದ್ಧ ಟಿ20 ಸರಣಿಯನ್ನು ಗೆದ್ದ ದಾಖಲೆ ಬರೆಯಲಿದೆ.

ಇಂಗ್ಲೆಂಡ್ ವಿರುದ್ಧ ಒಮ್ಮೆಯೂ ಭಾರತದ ಮಹಿಳಾ ತಂಡ ಟಿ20 ಸರಣಿಯನ್ನು ಗೆದ್ದಿಲ್ಲ. ಎರಡೂ ತಂಡಗಳ ನಡುವಿನ ಏಕೈಕ ಪಂದ್ಯ 2006ರಲ್ಲಿ ಡರ್ಬಿಯಲ್ಲಿ ನಡೆದಿತ್ತು, ಆ ಪಂದ್ಯದಲ್ಲಿ ಇಂಗ್ಲೆಂಡ್ ಗೆಲುವು ಸಾಧಿಸಿತ್ತು. ಆ ಬಳಿಕ ಭಾರತದಲ್ಲಿ ನಡೆದಿದ್ದ ಸರಣಿ ಹಾಗೂ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಟಿ20 ಸರಣಿಯಲ್ಲಿ ಭಾರತ ತಂಡ ಸೋಲನ್ನು ಅನುಭವಿಸಿತ್ತು. ಆ ಕಾರಣಕ್ಕಾಗಿ ಇದೀಗ ಸರಣಿ ಗೆದ್ದು ಇತಿಹಾಸ ಸೃಷ್ಟಿಸುವ ತವಕ ಭಾರತ ಮಹಿಳಾ ತಂಡಕ್ಕಿದೆ.

ಸರಣಿಯಲ್ಲಿ ಎಲ್ಲಾ ಆಟಗಾರ್ತಿಯರು ಉತ್ತಮ ಫಾರ್ಮ್‌ನಲ್ಲಿರುವುದು ಈ ಸಲದ ಟೀಮ್ ಇಂಡಿಯಾ ಮಹಿಳಾ ತಂಡದ ಯಶಸ್ಸಿಗೆ ಪ್ರಮುಖ ಕಾರಣ. ಹಾಗಾಗಿಯೇ ಮೊದಲ ಎರಡು ಟಿ20ಗಳಲ್ಲಿ, ಟೀಮ್ ಇಂಡಿಯಾ ಮಹಿಳಾ ತಂಡಕ್ಕೆ ಮಾರಕ ಬ್ಯಾಟಿಂಗ್ ಮತ್ತು ಆಕ್ರಮಣಕಾರಿ ಬೌಲಿಂಗ್‌ನಿಂದಾಗಿ ಇಂಗ್ಲೆಂಡ್ ತಂಡವನ್ನು ಸೋಲಿ ಸಲು ಸಾಧ್ಯವಾಯಿತು. ಮೊದಲ ಪಂದ್ಯ ದಲ್ಲಿ ಆರಂಭಿಕ ಆಟಗಾರ್ತಿ ಸ್ಮೃತಿ ಮಂಧಾನ ಅವರ 112 ರನ್ ನೆರವಿನಿಂದ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ 20 ಓವರ್‌ಗಳಲ್ಲಿ 5 ವಿಕೆಟ್‌ಗಳ ನಷ್ಟಕ್ಕೆ 210 ರನ್ ಗಳಿಸಿತು. ಆ ಪಂದ್ಯದಲ್ಲಿ ಮಂಧಾನ ಹೊರತುಪಡಿಸಿ, ಹರ್ಲೀನ್ ಡಿಯೋಲ್ 43 ರನ್ ಗಳಿಸಿದ್ದರು. ಅದಕ್ಕೆ ಉತ್ತರವಾಗಿ, ಇಂಗ್ಲೆಂಡ್ ತಂಡ 113 ರನ್‌ಗಳಿಗೆ ಆಲೌಟ್ ಆಯಿತು. ಇಂಗ್ಲೆಂಡ್ ನಾಯಕಿ ನ್ಯಾಟ್ ಸಿವರ್ ಬ್ರಂಟ್ 66 ರನ್ ಗಳಿಸಿದರಾದರೂ ತಮ್ಮ ತಂಡವನ್ನು ಗೆಲುವಿನತ್ತ ಕೊಂಡೊಯ್ಯುವಲ್ಲಿ ವಿಫಲರಾದರು. ಶ್ರೀಚ ರಣಿ ಭಾರತದ ಪರ 4 ವಿಕೆಟ್ ಪಡೆದರು.

ಎರಡನೇ ಟಿ20ಪಂದ್ಯವನ್ನು ಟೀಮ್ ಇಂಡಿಯಾ 24 ರನ್ ಗಳಿಂದ ಗೆದ್ದುಕೊಂಡಿತ್ತು. ಆ ಪಂದ್ಯದಲ್ಲೂ ಮೊದಲು ಬ್ಯಾಟಿಂಗ್ ಮಾಡಿದ ಭಾರತದ ಮಹಿಳೆಯರು 181 ರನ್ ಕಲೆಹಾಕಿದರು. ತಂಡದ ಪರ ಅಮನ್‌ಜೋತ್ ಕೌರ್ ಅಜೇಯ 63 ರನ್ ಬಾರಿಸಿದರೆ, ಜೆಮಿಮಾ ರೊಡ್ರಿಗಸ್ ಕೂಡ 63 ರನ್‌ಗಳ ಕಾಣಿಕೆ ನೀಡಿದರು. ಅದಕ್ಕೆ ಉತ್ತರವಾಗಿ ಆತಿಥೇಯ ಇಂಗ್ಲೆಂಡ್ ತಂಡವು ಕೇವಲ 157 ರನ್‌ಗಳನ್ನು ಮಾತ್ರ ಗಳಿಸಲು ಸಾಧ್ಯವಾಯಿತು.

ಗೆಲುವಿನ ಹುಡುಕಾಟದಲ್ಲಿ ಇಂಗ್ಲೆಂಡ್ ತಂಡ

5 ಪಂದ್ಯಗಳ ಸರಣಿಯಲ್ಲಿ ಇಂಗ್ಲೆಂಡ್ ತಂಡ ಈ ಸರಣಿಯನ್ನು ಜೀವಂತ ಇರಿಸ ಬೇಕಾದರೆ ಮೂರನೇ ಟಿ20 ಗೆಲ್ಲುವುದು ಬಹಳ ಮುಖ್ಯ. ತಂಡದಲ್ಲಿ ಅತ್ಯುತ್ತಮ ಆಟಗಾರರಿದ್ದರೂ ಎರಡೂ ಪಂದ್ಯ ದಲ್ಲೂ ಆಂಗ್ಲ ಮಹಿಳೆಯರು ತಮ್ಮ ಛಾಪು ಮೂಡಿಸಲು ವಿಫಲರಾಗಿದ್ದಾರೆ. ಇಂಗ್ಲೆಂಡ್‌ಗೆ ದೊಡ್ಡ ಸಮಸ್ಯೆ ಎಂದರೆ ತಂಡದ ಅಗ್ರ ಬ್ಯಾಟಿಂಗ್ ಕ್ರಮಾಂಕ. ಸೋಫಿಯಾ ಡಂಕ್ಲಿ ಮತ್ತು ಡ್ಯಾನಿ ವ್ಯಾಟ್ ಹಾಡ್ಜ್ ಈ ಸರಣಿಯ ಎರಡೂ ಪಂದ್ಯಗಳಲ್ಲೂ ದೊಡ್ಡ ಸ್ಕೋರ್ ಗಳಿಸಲು ಸಾಧ್ಯವಾಗಿಲ್ಲ. ಅಷ್ಟೇ ಅಲ್ಲ, ಬೌಲರ್ ಗಳು ಅದ್ಭುತ ಬೌಲಿಂಗ್ ಮಾಡುವ ಮೂಲಕ ಭಾರತೀಯ ಬ್ಯಾಟ್ಸ್‌ಮನ್‌ಗಳನ್ನು ಕಟ್ಟಿ ಹಾಕುವಲ್ಲೂ ವಿಫಲರಾಗಿ ದ್ದರು. ಹಾಗಾಗಿ ಮೂರನೇ ಪಂದ್ಯದಲ್ಲಿ ಗೆಲುವು ಸಾಧಿಸಿದರಷ್ಟೇ, ಇಂಗ್ಲೆಂಡ್‌ಗೆ ಈ ಸರಣಿಯಲ್ಲಿ ಗೆಲುವಿನ ನಿರೀಕ್ಷೆ ಇಡಲು ಸಾಧ್ಯ.

ಇಂಗ್ಲೆಂಡ್‌ನಲ್ಲಿ ಟೀಮ್ ಇಂಡಿಯಾ ಕಿರಿಯರ ತಂಡದ ಮುನ್ನಡೆ

ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್

ಲಂಡನ್: ಇತ್ತೀಚೆಗೆ ಮುಕ್ತಾಯ ಕಂಡಿದ್ದ 18ನೇ ಆವೃತ್ತಿಯ ಐಪಿಎಲ್ ಟೂರ್ನಿಯಲ್ಲಿ ಸ್ಫೋಟಕ ಬ್ಯಾಟಿಂಗ್ ಮೂಲಕ ಕ್ರಿಕೆಟ್ ಲೋಕದಲ್ಲಿ ಬೆರಗು ಮೂಡಿಸಿದ್ದ 14ರ ಹರೆಯದ ಬ್ಯಾಟರ್ ವೈಭವ್ ಸೂರ್ಯವಂಶಿ ಇಂಗ್ಲೆಂಡ್ ವಿರುದ್ಧದ 19 ವರ್ಷದೊಳಗಿನವರ ಏಕದಿನ ಪಂದ್ಯದಲ್ಲಿ ಕೇವಲ 20 ಎಸೆತಗಳಲ್ಲಿ ಅರ್ಧಶತಕ ಸಿಡಿಸಿ ಮಿಂಚಿದ್ದಾರೆ. ಆ ಮೂಲಕ 5 ಪಂದ್ಯಗಳ ಸರಣಿಯಲ್ಲಿ ಭಾರತವು 2-1 ಅಂತರದಿಂದ ಮುನ್ನಡೆಯಲ್ಲಿದೆ.

ನಾರ್ಥಾಂಪ್ಟನ್‌ನಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಮೂರನೇ ಯೂತ್ ಏಕದಿನ ಪಂದ್ಯದಲ್ಲಿ ಬಿರುಸಿನ ಬ್ಯಾಟಿಂಗ್ ನಡೆಸಿದ ವೈಭವ್ ಸೂರ್ಯವಂಶಿ, ಅಂಡರ್-19 ಏಕದಿನ ಪಂದ್ಯದಲ್ಲಿ ಎರಡನೇ ಅತ್ಯಂತ ವೇಗದ ಅರ್ಧಶತಕ ಬಾರಿಸಿದ ಭಾರತೀಯ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ರಿಷಭ್ ಪಂತ್ 2016ರ ಅಂಡರ್-19 ವಿಶ್ವಕಪ್‌ನಲ್ಲಿ ನೇಪಾಳ ವಿರುದ್ಧ 18 ಎಸೆತಗಳಲ್ಲಿ ಅರ್ಧಶತಕ ಸಿಡಿಸಿದ್ದರು.

ಬಿರುಸಿನ ಬ್ಯಾಟಿಂಗ್ ನಡೆಸಿದ ಸೂರ್ಯವಂಶಿ 31 ಎಸೆತಗಳಿಂದ ಒಟ್ಟು 86 ರನ್ ಗಳಿಸಿದರು. ಅವರ ಈ ಬ್ಯಾಟಿಂಗ್ ಆರ್ಭಟದ ವೇಳೆ 9 ಸಿಕ್ಸರ್, 6 ಬೌಂಡರಿ ಸಿಡಿಯಿತು. ಮಳೆಯಿಂದಾಗಿ 40 ಓವರ್‌ಗೆ ಸೀಮಿತಗೊಳಿಸಿದ ಪಂದ್ಯದಲ್ಲಿ 269 ರನ್‌ಗಳ ಸವಾಲಿನ ಗುರಿಯನ್ನು ಬೆನ್ನಟ್ಟಿದ ಭಾರತಕ್ಕೆ ಸೂರ್ಯವಂಶಿ ನೆರವಾದರು.

ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 6 ವಿಕೆಟ್ ನಷ್ಟಕ್ಕೆ 268 ರನ್ ಗಳಿಸಿತು. ನಾಯಕ ಥಾಮಸ್ ರೆವ್ ಕೇವಲ 44 ಎಸೆತಗಳಲ್ಲಿ 9 ಬೌಂಡರಿ ಮತ್ತು 3 ಸಿಕ್ಸರ್‌ಗಳೊಂದಿಗೆ ಅಜೇಯ 76 ರನ್ ಗಳಿಸಿ ತಂಡದ ಮುನ್ನಡೆಗೆ ಕಾರಣರಾದರು. ಇಂಗ್ಲೆಂಡ್‌ನ ಆರಂಭಿಕ ಆಟಗಾರ ಬಿಜೆ ಡಾಕಿನ್ಸ್ 62 ರನ್ ಗಳಿಸಿ ತಂಡಕ್ಕೆ ಭದ್ರ ಬುನಾದಿ ಹಾಕಿದರೆ, ಐಸಾಕ್ ಮೊಹಮ್ಮದ್ 41 ರನ್ ಗಳಿಸಿದರು. ಭಾರತ ಪರ ಕನಿಷ್ಕ್ ಚೌಹಾಣ್ 38 ರನ್‌ಗೆ 3 ವಿಕೆಟ್ ಕಿತ್ತರು.

ಆಗಸ್ಟ್ 27ರಿಂದ ಏಷ್ಯಾ ಕಪ್ ಹಾಕಿ ಪಂದ್ಯಾವಳಿ | ನಿರ್ಬಂಧ ಸಡಿಲಿಸಿದ ಕ್ರೀಡಾ ಸಚಿವಾಲಯ

ಭಾರತದಲ್ಲಿ ಪಾಕ್ ಹಾಕಿ ತಂಡಕ್ಕೆ ಅವಕಾಶ

ದೆಹಲಿ: ಮುಂದಿನ ತಿಂಗಳು ಭಾರತದ ಆತಿಥ್ಯದಲ್ಲಿ ನಡೆಯುವ ಏಷ್ಯಾ ಕಪ್ ಹಾಕಿ ಪಂದ್ಯಾವಳಿಯಲ್ಲಿ ಪಾಕಿಸ್ತಾನ ತಂಡಕ್ಕೆ ಸ್ಪರ್ಧಿಸಲು ಅವಕಾಶ ನೀಡಲಾಗುವುದು ಎಂದು ಕ್ರೀಡಾ ಸಚಿವಾಲಯದ ಮೂಲಗಳು ಗುರುವಾರ ತಿಳಿಸಿವೆ. ಗೃಹ ಸಚಿವಾಲಯ, ವಿದೇಶಾಂಗ ಸಚಿವಾಲಯ ಮತ್ತು ಕ್ರೀಡಾ ಸಚಿವಾಲಯವು ಅನುಮೋದನೆಗಳನ್ನು ನೀಡಿವೆ ಎನ್ನಲಾಗಿದೆ. ಪಂದ್ಯಾವಳಿ ಆಗಸ್ಟ್ 27ರಿಂದ ಸೆಪ್ಟೆಂಬರ್ 7ರ ವರೆಗೆ ಬಿಹಾರದ ರಾಜ್‌ಗಿರ್‌ನಲ್ಲಿ ನಡೆಯಲಿದೆ.

ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ಸರಕಾರವು ಎಲ್ಲಾ ಪಾಕಿಸ್ತಾನಿ ಪ್ರಜೆಗಳು ದೇಶವನ್ನು ತೊರೆಯುವಂತೆ ಆದೇಶಿಸಿತ್ತಲ್ಲದೆ, ಅವರ ವೀಸಾಗಳನ್ನು ರದ್ದುಗೊಳಿಸಿತ್ತು, ಹೀಗಾಗಿ ಪಾಕ್ ತಂಡಕ್ಕೆ ಭಾರತ ವೀಸಾ ನೀಡುವುದು ಅನುಮಾನ ಎನ್ನಲಾಗಿತ್ತು. ಪಾಕಿಸ್ತಾನ ತಂಡದ ಭಾಗವಹಿಸುವಿಕೆ ಅನಿಶ್ಚಿತವಾಗಿತ್ತು, ಆದರೆ ಪಂದ್ಯಾವಳಿಯಲ್ಲಿ ಅವರ ಭಾಗವಹಿಸುವಿಕೆಗೆ ಯಾವುದೇ ನಿರ್ಬಂಧಗಳಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಅತಿಥೇಯ ಭಾರತ, ಪಾಕಿಸ್ತಾನ, ಜಪಾನ್, ಕೊರಿಯಾ, ಚೀನಾ, ಮಲೇಷ್ಯಾ, ಓಮನ್ ಮತ್ತು ಚೈನೀಸ್ ತೈಪೆ ತಂಡಗಳು ಟೂರ್ನಿಯಲ್ಲಿ ಪಾಲ್ಗೊಳ್ಳಬೇಕಿದೆ. ಮುಂದಿನ ವರ್ಷ ನೆದರ್‌ಲ್ಯಾಂಡ್ಸ್ ಮತ್ತು ಬೆಲ್ಜಿಯಂನಲ್ಲಿ ನಡೆಯಲಿರುವ ವಿಶ್ವಕಪ್‌ಗೆ ಅರ್ಹತಾ ಪಂದ್ಯಾವಳಿಗೆ ಈ ಟೂರ್ನಿ ಮಹತ್ವದ್ದಾಗಿದೆ.

'ಬಹುರಾಷ್ಟ್ರೀಯ ಸ್ಪರ್ಧೆಯಲ್ಲಿ ಭಾರತದಲ್ಲಿ ಸ್ಪರ್ಧಿಸುವ ಯಾವುದೇ ತಂಡವನ್ನು ನಾವು ವಿರೋಧಿಸುವುದಿಲ್ಲ, ಆದರೆ ದ್ವಿಪಕ್ಷೀಯ ಪಂದ್ಯಗಳು ವಿಭಿನ್ನವಾಗಿವೆ' ಎಂದು ಸಚಿವಾಲಯದ ಮೂಲಗಳು ತಿಳಿಸಿವೆ. ಭಾರತ ಮತ್ತು ಪಾಕಿಸ್ತಾನ ತಂಡಗಳು ಏಷ್ಯಾಕಪ್ ಸಮಯದಲ್ಲಿ ಮತ್ತು ಈ ವರ್ಷದ ಕೊನೆಯಲ್ಲಿ ಜೂನಿಯರ್ ವಿಶ್ವಕಪ್‌ನಲ್ಲಿ ಮತ್ತೆ ಮುಖಾಮುಖಿಯಾಗುವ ನಿರೀಕ್ಷೆಯಿದೆ. ಅದು ಕೂಡಾ ಭಾರತದ ಆತಿಥ್ಯದಲ್ಲೇ ನಡೆಯಲಿದೆ. ಪಾಕಿಸ್ತಾನ ಎಫ್‌ಐಎಚ್ ಪ್ರೊ.ಲೀಗ್‌ಗೆ ಮರಳುವುದನ್ನು ಖಚಿತಪಡಿಸಿದರೆ, ಎರಡೂ ರಾಷ್ಟ್ರಗಳು ಅರ್ಹತೆ ಪಡೆದರೆ, ಏಷ್ಯನ್ ಕ್ರೀಡಾಕೂಟ ಮತ್ತು ವಿಶ್ವಕಪ್‌ಗೆ ಮುಂಚಿತವಾಗಿ ಎರಡೂ ತಂಡಗಳು ಹೆಚ್ಚುವರಿ ಪಂದ್ಯಗಳಲ್ಲಿ ಮುಖಾಮುಖಿಯಾಗಬಹುದು.

ವಿಟಾಕೀಸ್

ತಪಸ್ವಿಯಾದ ರವಿಮಾಮ

ಕ್ರೇಜಿಸ್ಟಾರ್ ರವಿಚಂದ್ರನ್ ಅವರ ಸಿನಿಮಾಗಳು ಎಂದರೆ ಎಲ್ಲರಿಗೂ ಅಚ್ಚುಮೆಚ್ಚು. ರವಿಮಾಮ ಇತ್ತೀಚಿನ ದಿನಗಳಲ್ಲಿ ಭಿನ್ನ ವಿಭಿನ್ನ ಕಥೆಗಳನ್ನು ಆಯ್ದುಕೊಳ್ಳುತ್ತಿದ್ದಾರೆ. ಅಂತಹ ಸಿನಿಮಾಗಳಲ್ಲಿ ತಪಸ್ವಿ ಸಿನಿಮಾವೂ ಒಂದು. ಶೀರ್ಷಿಕೆಯಲ್ಲಿಯೇ ಗಮನಸೆಳೆ ದಿರುವ ತಪಸ್ವಿ ಗಟ್ಟಿ ಕಂಟೆಂಟ್ ಹೊತ್ತು ಬಂದಿದೆ. ಇದು ನೈಜ ಘಟನೆಯಾಧಾರಿತ ಸಿನಿಮಾವಾಗಿದ್ದು, ಮಾಡೆಲಿಂಗ್ ಲೋಕದ ಸುತ್ತ ಸಾಗುವ ಕಥೆ ಇಲ್ಲಿದೆ. ಅದಕ್ಕೆ ಎಮೋಷನ್ಸ್, ಸಸ್ಪೆನ್ಸ್ ಎಲ್ಲವನ್ನು ಬೆರೆಸಿ ತೆರೆಯಲ್ಲಿ ಕಟ್ಟಿಕೊಡಲಾಗಿದೆ. ಮಾಡೆಲಿಂಗ್‌ನಲ್ಲಿ ಮಿಂಚಬೇಕು ಎಂದು ಅಂದುಕೊಂಡ ಯುವತಿ ಯಾವೆಲ್ಲಾ ಸಮಸ್ಯೆಗಳಿಗೆ ಸಿಲುಕುತ್ತಾಳೆ, ಅದರಿಂದ ಆಕೆಯ ಮನಸ್ಥಿತಿ ಹೇಗಿರುತ್ತದೆ. ಅದರಿಂದ ಆಕೆ ಹೇಗೆ ಹೊರಬರುತ್ತಾಳೆ ಎಂಬುದನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ.

ತಪಸ್ವಿ ಮಹಿಳಾ ಪ್ರಧಾನ ಕಥೆಯ ಸಿನಿಮಾ. ಈ ಚಿತ್ರದಲ್ಲಿ ರವಿಚಂದ್ರನ್ ಅವರು ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ. ನಾಯಕಿ ಮಾಡೆಲಿಂಗ್ ಕ್ಷೇತ್ರದಲ್ಲಿ ಸಮಸ್ಯೆಗೆ ಸಿಲುಕಿ ನರಳುತ್ತಿದ್ದಾಗ ಆಕೆಯ ನೆರವಿಗೆ ಧಾವಿಸುವ ರವಿಮಾಮ ಆಕೆಯನ್ನು ಮಾನಸಿಕ ತೊಳಲಾಟದಿಂದ ಹೇಗೆ ಪಾರು ಮಾಡುತ್ತಾರೆ ಎಂಬುದನ್ನು ಚಿತ್ರ ದಲ್ಲಿ ಎಲ್ಲರ ಮನಕ್ಕೆ ಮುಟ್ಟುವಂತೆ ಹೇಳಲಾಗಿದೆ. ರವಿಚಂದ್ರನ್ ಅವರ ಅಭಿನಯಕ್ಕೆ ಸಿನಿಪ್ರಿಯರು ಮನಸೋಲು ವುದಂತು ಖಚಿತ. ಅಮೆಯ್ರಾ ಗೋಸ್ವಾಮಿ ನಾಯಕಿಯಾಗಿ ನಟಿಸಿದ್ದು, ಭಾಸ್ಕರ್, ಅನುಷಾ ಕಿಣಿ, ರಥರ್ವ, ಸಚ್ಚಿನ್, ಗುಬ್ಬಿ ನಟರಾಜ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಸ್ಪೆನ್ಸರ್ ಮ್ಯಾಥ್ಯೂ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದು, ಬೆಂಗಳೂರು ಮೂವೀಸ್ ಲಾಂಛನದಲ್ಲಿ ಚಿತ್ರ ನಿರ್ಮಾಣವಾಗಿದೆ. ನಿರ್ದೇಶಕ ಸ್ಪೆನ್ಸರ್ ಮ್ಯಾಥ್ಯೂ ಅವರೆ ಛಾಯಾಗ್ರಹಣ ಹಾಗೂ ಕಲಾ ನಿರ್ದೇಶನ ಮಾಡಿದ್ದು, ಅರುಣ್.ಪಿ. ಥಾಮಸ್ ಸಂಕಲನದ ಜವಬ್ದಾರಿ ನಿರ್ವಹಿಸಿದ್ದಾರೆ.